
ಸಂಚಯ

ಸಾಂಸ್ಕೃತಿಕ ಪತ್ರಿಕೆ



ಸಂಚಿಕೆ
೫೮

ಸಂಚಯ

ಸಾಂಸ್ಕೃತಿಕ ಪತ್ರಿಕೆ

ತ್ರೈಮಾಸಿಕ

ಸಂಪುಟ : ೧೨

ಸಂಚಿಕೆ : ೧ (೫೮)

ನವೆಂಬರ್ : ೨೦೦೨

ಸಂಪಾದಕ

ಡಿ.ವಿ. ಪ್ರಹ್ಲಾದ್

ಯಾವುದೂ ಶಾಶ್ವತವಲ್ಲ, ಪ್ರತಿಯೊಂದು ಕೂಡಾ
ವಿಮರ್ಶೆಗೆ, ವಿಶ್ಲೇಷಣೆಗೆ ಒಳಗಾಗಬೇಕು.
ಯಾವುದೂ ಅಂತಿಮವಲ್ಲ.

- ಗೌತಮ ಬುದ್ಧ

ಚಂದಾವಿವರ

ಬಿಡಿ ಪ್ರತಿ : ರೂ. ೨೫/-

ವಾರ್ಷಿಕ ಚಂದಾ : ರೂ. ೧೦೦/-

ಎರಡು ವರ್ಷಕ್ಕೆ : ರೂ. ೨೦೦/-

ಐದು ವರ್ಷಕ್ಕೆ : ರೂ. ೫೦೦/-

ಮುಖಪುಟದ ಬುದ್ಧ: ಎಸ್.ಖುತ
ಅಗ್ರಹಾರ ಕೃಷ್ಣಮೂರ್ತಿ,
ಮಂಜುಳ, ಎಸ್.ಖುತ ಇವರ ರೇಖಾಚಿತ್ರಗಳು



ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯರಸ್ತೆ
೬ನೇ ಬ್ಲಾಕ್, ೨ನೇ ಹಂತ, ೨ನೇ ಘಟ್ಟ
ಬನಶಂಕರಿ, ಬೆಂಗಳೂರು - ೫೬೦ ೦೦೮೫
ಫೋನ್ : ೦೮೦-೬೭೯೧೯೨೫

ವಿನ್ಯಾಸ : ಜಗದ್ವಾತ್ರೀ ಗ್ರಾಫಿಕ್ಸ್, ☎ : 3323293

ಪ್ರತಿಕ್ರಿಯೆ

ಶ್ರೀ ಪೂಚಂತೇ ಸಂಚಿಕೆ ಅಲ್ಲಲ್ಲಿ ಕಣ್ಣಾಡಿಸಿದೆ. ಒಬ್ಬ ಲೇಖಕನ ಬಗ್ಗೆ ಸಮೃದ್ಧ ಸಾಮಗ್ರಿ ಕೊಟ್ಟಿದ್ದೀರಿ, ಸಂಚಿಕೆ ನಿಜಕ್ಕೂ ಸಂಗ್ರಹಯೋಗ್ಯವಾಗಿದೆ. ಅಭಿನಂದನೆಗಳು.

- ಡಾ. ಪಂಚಾಕ್ಷರಿ ಹಿರೇಮಠ, ಧಾರವಾಡ

ನನ್ನ ಪ್ರೀತಿಯ ಲೇಖಕ ತೇಜಸ್ವಿಯವರ ಬಗ್ಗೆ ಸಂಚಿಕೆ ಮಾಡಿದ್ದೀರಿ, ಅಭಿನಂದನೆಗಳು. ನೀವು ಪಟ್ಟ ಶ್ರಮ, ಸಂಚಯ ನೋಡಿದರೆ ಗೊತ್ತಾಗುವಂತಿದೆ. ಬಹುಶಃ ಕನ್ನಡದ ಲೇಖಕರ ಬಗ್ಗೆ ಬಂದಷ್ಟು ಸಂಚಯದ ವಿಶೇಷ ಸಂಚಿಕೆಗಳನ್ನು ಮತ್ಯಾವ ಪತ್ರಿಕೆಯೂ ಹೊರತಂದಿಲ್ಲ.

- ಸಂದೀಪ್ ನಾಯಕ್, ಅಂಕೋಲಾ (ಉ.ಕ.)

ಕನ್ನಡದ ಶರೀರದಲ್ಲಿ ಸಮರ್ಪಕವಾಗಿ ರಕ್ತ ಪರಿಚಲನೆಯಾಗುತ್ತಿದೆ ಎಂದು ತೋರಿಸುವುದಕ್ಕೆ ಇಂಥ ಒಂದೊಂದು ಸಂಚಿಕೆ ಸಾಕು. ನಿಮ್ಮ ಶ್ರಮ ಸಂಸ್ಕೃತಿಯ ಬಗೆಗಿನ ಕಾಳಜಿ ಎಲ್ಲ ಢಾಳಾಗಿ ಇಲ್ಲಿ ಪ್ರಕಟವಾಗಿದೆ. ಉತ್ತಮವಾದ ಕೆಲಸವನ್ನು ನಮ್ಮ ಸಮುದಾಯ ಮರೆಯುವುದಿಲ್ಲ, ಅದು ಗ್ಯಾರಂಟಿ.

- ಸಿ. ನಾಗಣ್ಣ ಮೈಸೂರು

ಸಂಚಯದ ಸೊಬಗು ಹೆಚ್ಚುತ್ತಿದೆ, ನನಗಂತೂ ಆನಂದ. ನೀವೇ ನೆನಪಿಸಿದ ಓಷೋನ 'ತನ್ಮಯತೆಯಿಂದ ಮಾಡಿದ ಕೆಲಸ ನಮ್ಮನ್ನ ಬೆಳೆಸುತ್ತದೆ' ಉದ್ಗಾರಕ್ಕೆ ಈ ಸಂಚಯ ಜೀವಂತ ಸಾಕ್ಷಿ ಯಥಾಪ್ರಕಾರ ಹೊಳೆದದ್ದೆ ತಾರೆ ಉಳಿದದ್ದು ಆಕಾಶ. **- ಸಿ.ವಿ. ಶೇಷಾದ್ರಿ, ಕೊರಟಗೆರೆ**

ತೇಜಸ್ವಿಯವರನ್ನು ಕುರಿತಂತೆ ತುಂಬಾ ಮಾಹಿತಿ ಇರುವುದರಿಂದ It is quite Interesting. ಏಕೆಂದರೆ ಜನರ ಮುಂದೆ ಹೆಚ್ಚು ಕಾಣಿಸಿಕೊಳ್ಳದ ತೇಜಸ್ವಿಯವರನ್ನು ಕುರಿತ ಯಾವುದೇ ಬರವಣಿಗೆ ಅಥವಾ ಪುಸ್ತಕ ಕುತೂಹಲ ಹುಟ್ಟಿಸಬಲ್ಲದು.

- ಬಿ. ಎಸ್. ವೆಂಕಟಲಕ್ಷ್ಮಿ, ಬೆಂಗಳೂರು.

ಚಂದಾದಾರರಲ್ಲಿ ಒಂದು ಮಾತು

ಎಂ.ಓ. ಮೂಲಕ ಚಂದಾ ಕಳುಹಿಸುವವರು ಕೌಂಟರ್ ಫಾಯಿಲ್‌ನಲ್ಲಿ ತಪ್ಪದೇ ನಿಮ್ಮ ವಿಳಾಸ ಬರೆಯಿರಿ, ಹೊರ ಊರಿನ ಚೆಕ್ ಕಳುಹಿಸುವರು ರೂ. 10/- ಹೆಚ್ಚಿಗೆ ಕಳುಹಿಸಿ. ಸಂಚಯ ಎನ್ನುವ ಹೆಸರಿಗೇ ನಿಮ್ಮ ಚೆಕ್ ಡೀಡಿ ಕಳುಹಿಸಬಹುದು .

ನಿಮ್ಮ ವಿಳಾಸ ಬದಲಾದಲ್ಲಿ ದಯವಿಟ್ಟು ಒಂದು ಕಾರ್ಡು ಹಾಕಿ. ನಮ್ಮ ಸಮಯ ಶ್ರಮ ಸುರಿದು ರೂಪಿಸಿದ ಪತ್ರಿಕೆಯ ಪ್ರತಿಗಳು ವ್ಯರ್ಥವಾಪಸ್ಸಾಗುವುದು, ಬೇಡದ ಜಾಗಗಳಲ್ಲಿ ಕೊಳೆಯುವುದೂ ಬೇಡ.

ಪುಸ್ತಕ ವಿಮರ್ಶೆ / ಪರಿಚಯಕ್ಕೆ ಸಾಧ್ಯವಾದಲ್ಲಿ ಎರಡು ಪ್ರತಿ ಕಳುಹಿಸಿ

ನಿಮ್ಮ ಸ್ನೇಹಿತರನ್ನು ಗೆಳೆಯರನ್ನು ಆಸಕ್ತಿ ಇರುವವರನ್ನು ಸಂಚಯಕ್ಕೆ ಚಂದಾದಾರರನ್ನಾಗಿಸಿ ಸಂಚಯದ ಸ್ನೇಹವಲಯ ವಿಸ್ತರಿಸಿ.

ನಿಮ್ಮ ಬರಹಗಳು ಮತ್ತು ಸಂಚಯದ ಬರಹಗಳನ್ನು ಕುರಿತ ಅನಿಸಿಕೆ ಅಭಿಪ್ರಾಯಗಳಿಗೆ ಸ್ವಾಗತವಿದೆ.

ಈ ಸಂಚಯದಲ್ಲಿ....

ಕವಿತೆಗಳು



ಹೊಳೆದದ್ದೆ ತಾರೆ ಉಳಿದದ್ದು ಆಕಾಶ !

ಬರವಣಿಗೆ ಒಂದು ಮುಖ್ಯ ಅರ್ಥದಲ್ಲಿ ಪಾಲುಗಾರಿಕೆ, ಹೂವು ಹರಿದು ಮುಡಿದಂತೆ ಅಥವಾ ಹಣ್ಣನ್ನು ಹಂಚಿ ತಿಂದಂತೆ - ಪಿ. ಲಂಕೇಶ್

ಅವತ್ತು ಎಂದಿನ ಹಾಗೆ ಗಡಿಬಿಡಿಯ ದಿನವಾಗಿದ್ದರಿಂದ ಆಫೀಸಿನ ಕೆಲಸದಲ್ಲಿ ಮುಳುಗಿದ್ದೆ. ಯಾರೋ ನಿಮ್ಮನ್ನ ಕಾಣಲು ಬಂದಿದ್ದಾರೆ ಅಂದಾಗ ಮೇಲೆ ಕಳಿಸು ಅಂದೆ. ಬಂದಾತನ ಎರಡೂ ಕಾಲುಗಳು ಸ್ವಾಧೀನವಿರಲಿಲ್ಲ. ಅಟ್ಟದ ಹಾಗಿರುವ ಮೆಟ್ಟಲುಗಳನ್ನು ಕಷ್ಟಪಟ್ಟು ಹತ್ತಿ ಬಂದ ಆತನನ್ನು ಮೇಲಕ್ಕೆ ಬರಹೇಳಿದ್ದಕ್ಕೆ ಕಸಿವಿಸಿ ತಪ್ಪಿತಸ್ಥ ಭಾವ. ಆತ ಚಿಂತಾಮಣಿಯ ಹತ್ತಿರದಲ್ಲೆಲ್ಲೋ ವಾಸಿಸುವಾತ. ವೃತ್ತಿಯಲ್ಲಿ ನೇಕಾರ, ಕವಿತೆ ಬರೆಯೋದು ಆತನ ಆಸಕ್ತಿ. ಅವತ್ತು ಬೆಳಗ್ಗೆ ಪತ್ರಿಕೆಯಲ್ಲಿ ಸಾಹಿತ್ಯ ಸ್ಪರ್ಧೆಯ ಬಗ್ಗೆ ಪ್ರಕಟಗೊಂಡಿದ್ದನ್ನ ನೋಡಿ ಅದರ ವಿವರ ಕೇಳಲು ಇಷ್ಟು ದೂರ ವಿಳಾಸ ಹುಡುಕಿಕೊಂಡು ಬಂದಿದ್ದ ತನ್ನದೇ ಆದ ತೆಲುಗರ ಶೈಲಿಯ ಕನ್ನಡದಲ್ಲಿ ಅಪ್ಪಟ ಹಳ್ಳಿಯವನ ಹಾಗೆ ತನ್ನ ಸುಖ ದುಃಖಗಳನ್ನ ಕವಿತೆ ಬರೆಯುವ ಆಸಕ್ತಿ ಪ್ರೀತಿಯನ್ನ ತೋಡಿಕೊಂಡ, ಆ ಬಡ ನೇಕಾರನ ದೈಹಿಕ ನ್ಯೂನತೆ ಕೀಳರಿಮೆಗಳನ್ನು ಶಮನಗೊಳಿಸಿದ ಆ ಬರಹ ಎನ್ನುವ ಬಿಡುಗಡೆಯ ಬಗ್ಗೆ ಚಕಿತಗೊಂಡೆ.

ಇತ್ತೀಚೆಗೆ ಹಿರಿಯ ಲೇಖಕರೊಬ್ಬರನ್ನ ಭೇಟಿಯಾಗಿದ್ದೆ ಅವರು ತನಗೆ ಪೆನ್ನು ಹಿಡಿಯಲಿಕ್ಕೇ ಬೇಸರ ಯಾವ ಪುರುಷಾರ್ಥಕ್ಕೆ ಬರೆಯಬೇಕಿದೆ ಎನ್ನುವ ಪ್ರಶ್ನೆ ಮುಂದಿಟ್ಟರು. ಅವರ ಹತಾಶೆಯಲ್ಲೂ ನಿಜವಿತ್ತು ಅನೇಕ ದಶಕಗಳು ಕಾವ್ಯ ಬರೆಯುವ ಹುಚ್ಚಿಗೆ ಬಿದ್ದು ತಾವು ಕಷ್ಟಪಟ್ಟು ದುಡಿದ ಸಮಯ ಶ್ರಮಗಳನ್ನೆಲ್ಲಾ ಸುರಿದು ಬರೆದು ಪ್ರಕಟಿಸಿದ ಪುಸ್ತಕಗಳು ಇವರ ಹಾಗೆ ಕೇಳುವರಲ್ಲದೆ ಇತ್ತು. ಒಂಟಿತನ ಅನಾರೋಗ್ಯ ಮತ್ತು ವಯಸ್ಸಿನ ಬಲಹೀನತೆ ಅವರನ್ನು ಕುಗ್ಗಿಸಿತ್ತು. ಪ್ರಶಸ್ತಿ ಪುರಸ್ಕಾರಗಳು ಹಾಳಾಗಲಿ ಮನುಷ್ಯ ಸಹಜ ಸ್ನೇಹ ಪ್ರೀತಿಗಳಿಗೂ ಬೆಂಗಳೂರಿಗರಿಗೆ ದಾರಿದ್ರ್ಯ.

ಬರೆವ ಬದುಕು ಎಂದರೆ ಬಿಡುಗಡೆಯ ಸೆಳಕು ಕೆಲವರಿಗಾದರೆ, ಬಲು ಭಾರದ ಸರಕು ಮತ್ತೆ ಕೆಲವರಿಗೆ, ಈ ಜಿಜ್ಞಾಸೆಯನ್ನು ನಿಮ್ಮ ಹುಡುಕಾಟಕ್ಕೇ ಬಿಡುತ್ತೇನೆ.

ಎಲ್ಲವೂ ದುಬಾರಿಯಾಗುತ್ತಿರುವ ಈ ದಿನಗಳಲ್ಲಿ ನಿಮಗೆ ಹೆಚ್ಚು ಹೊರೆಯಾಗಬಾರದು. ಚಂದಾ ಹಣ ಸ್ವಲ್ಪ ಹೆಚ್ಚಿಸಲಾಗಿದೆ. ಸಂಚಯ ಇನ್ನಷ್ಟು ನಿಯಮಿತವಾಗಲಿದೆ. ನಿರಂತರತೆಯಂತೂ ಇದ್ದೇ ಇದೆ.



ಮಂಜುಳಾ

ನಿಮ್ಮ

ಸಂಪಾದಕ

ಅವರು ಅವರಿಗೂ ಹೆಚ್ಚು

■ ಜಿ.ಕೆ. ರವೀಂದ್ರಕುಮಾರ್



ಗೌರೀಶ ಕಾಯ್ಕಿಣಿಯವರು ಯಾರಿಗೂ ಪೂರ್ತಿ ಅರ್ಥವಾಗದೆ ಹೋಗಿಬಿಟ್ಟರು. ಒಂದು ರೀತಿಯಲ್ಲಿ ಅವರು ಅವರ ಅಕ್ಷರಗಳಂತೆ. ಅವು ಸೆಳೆಯುವಂತವಾಗಿರಲಿಲ್ಲ, ಅರ್ಥವಾಗುವ ಹಾಗೂ ಇರಲಿಲ್ಲ ಆದ್ದರಿಂದ ಕಷ್ಟಪಟ್ಟು ಓದಿದವರೂ ಕಡಿಮೆ. ಮೋಡಿ ಅಕ್ಷರಗಳು ತಮ್ಮ ಬರವಣಿಗೆಯೊಳಗಿನ ಅದ್ಭುತ ವೈಚಾರಿಕ ಮೋಡಿಯನ್ನು ಹೊರಗೆ ತೋರಿಸಲಿಲ್ಲ. ಹೀಗಾಗಿ ದೂರದಿಂದ ಸಂದ ಪೂಜೆಯೆಷ್ಟೋ ಅಷ್ಟೇ ಹತ್ತಿರದ ಪ್ರೀತಿ ಅವರಿಗೆ ದಕ್ಕಲಿಲ್ಲ. ದೇವರ ಕೋಣೆಯೊಳಗಿನ ಗಂಧದ ಕೊರಡಿನಂತೆ ಅವರು ನೆನಪಿನಂಗಳದ ಒಂದು ವಸ್ತುವಾದರು. ತೇಯ್ದವರು ಕಡಿಮೆ. ಹೀಗಾಗಿ ಪಸರಿಸಿದ ಪರಿಮಳವೂ ಕಡಿಮೆ ಬೇಕಾದಾಗ ಬೇಕಾದಷ್ಟು ಬಳಸಿಕೊಂಡವರೇ ಅಧಿಕ. ಸಂಪ್ರದಾಯವನ್ನು ದಾಟಿಕೊಳ್ಳಲು ಕೆಲವರಿಗಾದರೆ, ಶಾಸ್ತ್ರವನ್ನು ಉಳಿಸುವ ಕಾರಣ ಕೆಲವರಿಗೆ ಹಣೆಬೊಟ್ಟಿನಂತೆ ಇನ್ನು ಕೆಲವರಿಗೆ ಎಲ್ಲೋ ಅಲ್ಲಿ ಇಲ್ಲಿ ಕೆಲವರಿಗೆ ಅವರೊಂದು ಜ್ಞಾನದ ಕಡಲು. ವಿದ್ವಾಂಸರ ಪಾಡು ಹೀಗೇ, ತಪಸ್ವಿಗಳಂತೆ ಜ್ಞಾನಶೋಧದಲ್ಲಿ ತಮ್ಮನ್ನೇ ತೆತ್ತುಕೊಂಡು ಸಾಧನೆ ಮಾಡಿದ ಹಿರಿಯರೂ ಮೂರೋ ನಾಲ್ಕೋ ಕಥಾ, ಕವನ ಸಂಕಲನಗಳನ್ನು ಹೊರತಂದವರ ಖ್ಯಾತಿಯ ಮುಂದೆ ಮಂಕಾಗಿ ಕಾಣತೊಡಗುತ್ತಾರೆ. ಆದರೆ ಮಬ್ಬು ಮುಸುಕಿರುವುದು ನೋಡುವ ಕಣ್ಣುಗಳಿಗೆ ಎಂಬುದು ಶಂಬಾ, ಸೇಡಿಯಾಪು ಮತ್ತು ಗೌರೀಶ ಕಾಯ್ಕಿಣಿಯವರನ್ನು ನೆನೆದಾಗ ನಮಗೆ ಅನ್ನಿಸದಿರದು.

ಒಮ್ಮೆ ಗೌರೀಶರ ಮನೆಯಲ್ಲಿ ಅವರು ನಿಧನರಾಗುವ ಮೂರು ವರ್ಷಗಳ ಮುಂಚೆ ಮಾತನಾಡುತ್ತ ಕುಳಿತಿದ್ದಾಗ ದೈಹಿಕ ಅನಾರೋಗ್ಯದ ಮಧ್ಯೆಯೂ ಸಣ್ಣ ಚಡಪಡಿಕೆಯೊಂದು ಅವರೊಳಗೆ ಸುಳಿಯುತ್ತಿರುವಂತೆನಿಸಿತು. ಮಾಡಲೇಬೇಕಾದ ತುರ್ತು, ಮಾಡಲಾಗದ ಸಂಕಟ, ಹೇಗೋ ಮಾಡಿ ಮುಗಿಸಿಬಿಡುವ ಆತುರದ ಮಧ್ಯೆ ಅವರು ತೊಳಲುತ್ತಿದ್ದರು. ಕಾರಣವಿಷ್ಟೇ, ಕೆಲ ದಿನಗಳಲ್ಲಿ ತಾಲೂಕಿನಲ್ಲಿ ನಡೆಯಲಿದ್ದ ಒಂದು ಸ್ಮರಣ ಸಮಾರಂಭದಲ್ಲಿ

ಮಾತನಾಡಲು ಈಗ ಒಳ್ಳೆಯ ಹುದ್ದೆಯಲ್ಲಿರುವ ತಮ್ಮ ಶಿಷ್ಯೋತ್ತಮರೊಬ್ಬರಿಗೆ ಭಾಷಣ ಸಿದ್ಧಪಡಿಸಿಕೊಡಬೇಕಿತ್ತು. ಅಯಾಮಾಚಿತವಾಗಿ ಇದು ಅವರ ಬಾಯಿಂದ ಹೊರಬಿದ್ದೊಡನೆಯೇ ಅವರ ಪತ್ನಿ ಇಂಥದಕ್ಕೆಲ್ಲಾ ಗೌರೀಶರನ್ನು ಬಳಸಿಕೊಳ್ಳುವ ಜನರ ಮನೋಭಾವದ ಕುರಿತು ತಮ್ಮ ಜಿಗುಪ್ಸೆ ಅಸಹನೆ ತೋಡಿಕೊಂಡರು. ಅದರ ಹಿಂದಿದ್ದುದು ಪತಿಯ ಅನಾರೋಗ್ಯದ ಕುರಿತು ಆತಂಕ ಹಾಗು ಈ ವಯಸ್ಸಿನಲ್ಲಿ ಅವರಿಗೆ ಹೀಗೆ ತೊಂದರೆ ಕೊಡುತ್ತಿರುವುದರ ಕುರಿತು ನೋವು. ಗೌರೀಶರಿಗೆ ಭಿಡೆ. ಇದಕ್ಕೆ ಬಲಿಯಾಗಿ ಅವರ ಇಳಿವಯಸ್ಸಿನಲ್ಲಿಯೂ ಎಷ್ಟೋ ಶಾಲಾ ಮಕ್ಕಳನ್ನು ಡಿಬೇಟ್‌ಗೆ ತಯಾರು ಮಾಡುತ್ತಿದ್ದರು. 'ಕುಳಿತ ವಿಶ್ವಕೋಶವೊಂದು ಎದುರಿಸಬೇಕಾಗಿ ಬಂದ ಸಮಸ್ಯೆಯಿದು. ಕರಾವಳಿ ಉತ್ಸವದಲ್ಲಿ ಕಾಯ್ಕಿಣಿಯವರನ್ನು ಅಭಿನಂದಿಸಬೇಕೆಂದು ತೀರ್ಮಾನಿಸಿದ ಜಿಲ್ಲಾ ಆಡಳಿತ ಅದಕ್ಕಾಗಿಯೇ ಅನಾರೋಗ್ಯದಲ್ಲಿಯೂ ಈ ವೃದ್ಧ ದಂಪತಿಗಳನ್ನು ಕರೆಸಿಕೊಂಡು, ಗಂಟೆಗಟ್ಟಲೆ ಕಾಯಿಸಿ, ಸರಿಯಾದ ಮಾಹಿತಿ ನೀಡದೆ ವೇದಿಕೆಯ ತುಂಬ ತುಂಬಿದ, ಮಂತ್ರಿ ಶಾಸಕರ ನಡುವೆ ಜಾಗ ಸಿಗದೆ ಕೊನೆಯಲ್ಲಿ ಕೂಡಿಸಿ ಸನ್ಮಾನ ಮುಗಿಸಿದ್ದನ್ನು ನೆನೆದಾಗ ಮಡದಿ ಶಾಂತಾ ಕಾಯ್ಕಿಣಿಯವರಿಗೆ ಬೇಸರ. ಸನ್ಮಾನದ ನಂತರ ಏಕಾಂಗಿಗಳಂತೆ ವೇದಿಕೆಯಿಂದ ಅವರು ಇಳಿದು ನಡೆದಾಗ ಭಾಷಣದ ಗಮ್ಮತ್ತಿನಲ್ಲಿ ಮುಳುಗಿದ್ದ ಯಾರಿಗೂ ಏನೂ ಅನ್ನಿಸಲಿಲ್ಲ. ಆದರೆ ಆ ಹಿರಿಯ ಜೀವಕ್ಕೆ ಈ ಸನ್ಮಾನ ಭಾರ ಮತ್ತು ದುಬಾರಿಯಾದುದಾಗಿತ್ತು. ಇವುಗಳ, ನಡುವೆಯೂ ಯಾರನ್ನೂ ದೂರದ, ಸ್ಥಿತಪ್ರಜ್ಞನಂತೆ ಸ್ವೀಕರಿಸುವ 'ಪ್ರೀತಿ' ಗೌರೀಶರ 'ಬಾಳಿನ ಗುಟ್ಟು' ಆಗಿತ್ತು.

ದೈಹಿಕ ಊನ, ಆರೋಗ್ಯದ ಏರುಪೇರು, ಅವಲಂಬಿತರಾಗಿ ಬದುಕಬೇಕಾದ ಅನಿವಾರ್ಯತೆ, ಗುಳಿಗೆಗಳ ನಡುವೆ ಜೀವ ಹಿಡಿದುಕೊಂಡು ಇರಬೇಕಾಗಿದ, ಅವರ ಸ್ಥಿತಿಯಲ್ಲಿ ಇನ್ನಾರಿದ್ದರೂ ಬದುಕಿನ ಕುರಿತು ತೀವ್ರ ನಿರಾಶೆಯಿಂದ ಹಳಿದುಕೊಳ್ಳುತ್ತ ಜೊತೆಗಿದ್ದವರನ್ನು ಹಳಿಯುತ್ತ ಇದ್ದು ಬಿಡುತ್ತಿದ್ದರೇನೋ ಆದರೆ ಗೌರೀಶರು, ನೋವು ನುಂಗಿದ ನಂಜುಂಡನಂತೆ. ಜೀವನ ಮುನ್ನಡೆಯುವುದೇ 'ಪ್ರೀತಿ'ಯಿಂದ ಎಂದು ನಂಬಿದವರು. ನೈರಾಶ್ಯವನ್ನು ತಾತ್ವಿಕವಾಗಿ ತೆಗೆದುಕೊಂಡವರು. ಹೀಗಾಗಿ ಕಡಲಿನ ಊರಲ್ಲಿ ಕೂತು ನದಿಯಂತೆ ಸದಾ ಹರಿಯುವ ಮನಸ್ಥಿತಿಯೊಂದನ್ನು ಅವರು ಕಾಯ್ದುಕೊಂಡಿದ್ದರು. ಸಮಚಿತ್ತ ಭಾವವೊಂದು ಅವರ ಮೂಲ ಸ್ರೋತವಾಗಿತ್ತು. ಹಾಗೆಂದು ಸತ್ಯವನ್ನು ಮತ್ತು ಅದರ ನಿಷ್ಠುರತೆಯನ್ನು ಹೊರಗೆಡಹದೆ ಬಿಟ್ಟವರಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯ ಅವರಿಗೆ ಗೌರವ ಡಾಕ್ಟೊರೇಟ್ ಪದವಿ ನೀಡಿದಾಗ ಅದು ತಡವಾಯಿತೆಂಬ ತಮ್ಮ ಭಾವನೆಯನ್ನು ಸ್ಪಷ್ಟವಾಗಿ ಸಂದರ್ಶನವೊಂದರಲ್ಲಿ ವ್ಯಕ್ತಪಡಿಸಿದ್ದಾರೆ. ಆದರೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕುರಿತು ಈ ರೀತಿ ಅವರು ಪ್ರತಿಕ್ರಿಯಿಸಲು ಸಾಧ್ಯವಾಗಲೇ ಇಲ್ಲ. ಅಂತಹ ಅವಕಾಶವನ್ನು ಕನ್ನಡ ಸಾರಸ್ವತ ಲೋಕ ಅವರಿಗೆ ನೀಡಲಿಲ್ಲ. ಆ ಮಟ್ಟಿಗೆ ನಾಡು ನಿರ್ದಯಿಯಾಯ್ತು. ಅದರ ಪ್ರಸ್ತಾಪ ಬಂದಾಗಲೆಲ್ಲ ಅವರು ನಗುತ್ತಿದ್ದರು ಇಲ್ಲವೇ ಬೇರೆ ಮಾತುಗಳಿಗೆ ಹೊರಳುತ್ತಿದ್ದರು.

ಸ್ನಾನ ಮಾಡಿಸಿ, ಬಣ್ಣದ ಪಟ್ಟಾಪಟ್ಟಿ ಲುಂಗಿ ತೊಡಿಸಿ, ದೊಗಳೆ ಬನಿಯನ್‌ನೊಂದಿಗೆ ಅವರನ್ನು ಕೂಡಿಸಿದರೆ ಮುಂದಿನ ಇಂಜೆಕ್ಷನ್, ಗುಳಿಗೆ ಇಲ್ಲವೇ ಊಟದವರೆಗೆ ಅವರು ಅಲ್ಲೇ

ಪೀಠಸ್ಥರು. ಅಲ್ಲಿಯವರೆಗೆ ಅಧ್ಯಯನ, ಬರವಣಿಗೆ ಇಲ್ಲವೇ ಬಂದವರೊಡನೆ ಮಾತುಕತೆ ಹೆಚ್ಚು ಮಾತಾಡಿದರೆ ಆಯಾಸ ಅವರ ಪತ್ನಿಯಿಂದ ಕಾಳಜಿ ಮತ್ತು ಎಚ್ಚರಿಕೆ. ಬಂದವರು ಕಾಯಲು ಸಿದ್ಧರಿದ್ದಲ್ಲಿ ಸ್ವಲ್ಪ ಕಾಲ ಮಲಗಿ ವಿಶ್ರಾಂತಿ ಪಡೆದು ಮತ್ತೆ ಪೀಠಸ್ಥರಾಗುವುದು. ಮತ್ತೆ ಕರೆದೊಯ್ಯುವವರು ಬರುವವರೆಗೆ ತಮ್ಮ ಎಂದಿನ ಕೈಂಕರ್ಯ. ಗಡಿಯಾರಕ್ಕೆ ಒಗ್ಗಿಕೊಂಡ ಬುದ್ಧಿ. ಹೀಗೆ ಬದುಕಿನ ಸಂಧ್ಯಾಕಾಲದಲ್ಲಿ ಅವರೊಂದು ಬೊಂಬೆಯಂತಾಗಿದ್ದರು. ಮೂರು ವರ್ಷಗಳ ಹಿಂದೆ ಸತತ ಮೂರು ನಾಲ್ಕು ತಿಂಗಳು ಆಸ್ಪತ್ರೆಯಲ್ಲಿದ್ದ ಗೌರೀಶರು ಇನ್ನೊಮ್ಮೆ ಸಾವನ್ನು ಜಯಿಸಿ ಬಂದಿದ್ದರು. ಆದರೆ ಇವರನ್ನು ನೋಡಿ ಹೋಗಿದ್ದ ಶಿವರಾಮಕಾರಂತರು ಇವರು ಮಲಗಿರುವಾಗಲೇ ಸಾವಿಗೆ ಶರಣಾಗಿ ನಡೆದು ಬಿಟ್ಟರು. ಬದುಕಿನ ಬಗೆಗಿನ ಅದಮ್ಯ ಪ್ರೀತಿ, ಮನೋಸ್ಥೈರ್ಯ ಗೌರೀಶರನ್ನು ಹಿಡಿದಿಟ್ಟಿತ್ತು. ಓದಿನ ಪ್ರೀತಿಯೇ ಅವರನ್ನು ಕಾಪಾಡಿತು. ಗೋಕರ್ಣದಂತಹ ಊರಲ್ಲಿ ಕೂತು ನಾಡಿನ ಎಲ್ಲೆಡೆಯಿಂದ ತಮಗೆ ಬೇಕಾದ ಪುಸ್ತಕಗಳನ್ನು ತರಿಸಿಕೊಳ್ಳುತ್ತಿದ್ದರು. ಅವರು ನಿಧನರಾದಾಗ ಅಮೂರರು ನೆನಪಿಸಿಕೊಂಡದ್ದೂ ಇದನ್ನೇ. ಅಮೂರರ ಪುಸ್ತಕವೊಂದನ್ನು ಕೆಲ ವರ್ಷಗಳ ಹಿಂದೆ ನಾನೇ ಬೆಂಗಳೂರಿಂದ ಮರಳುವಾಗ ಗೌರೀಶರಿಗಾಗಿ ತಂದಿದ್ದೆ. ಆದರೆ ಯಾವುದೋ ಕಾರಣಕ್ಕೆ ಅದನ್ನು ತಲುಪಿಸಲು ನಾನು ತಡಮಾಡಿದಾಗ ಆ ಕುರಿತು ಅವರಿವರಿಂದ ಗೌರೀಶರು ನನ್ನ ಬಳಿ ವಿಚಾರಿಸಿದಾಗ ಪೇಚಾಡಿಕೊಳ್ಳುವಂತಾಗಿತ್ತು. ಕಾಯ್ಕಿಣಿಯವರ ವೈಶಿಷ್ಟ್ಯವೆಂದರೆ ಅವರ ಓದಿನಲ್ಲಿ ಮಡಿವಂತಿಕೆಯಿರಲಿಲ್ಲ. ವಿದ್ವಜ್ಜನರ ಶ್ರೇಷ್ಠ ಪುಸ್ತಕಗಳನ್ನು ಓದುವಷ್ಟೇ ಆಸ್ಥೆಯಿಂದ ಹೊಸಬರ ಬರಹಗಳನ್ನು ಓದುತ್ತಿದ್ದರು. ಅದಕ್ಕಿಂತಲೂ ಮುಖ್ಯವೆಂದರೆ ಅದರ ಕುರಿತು ಬರೆಯುತ್ತಿದ್ದರು. 'ಸಂಯುಕ್ತ ಕರ್ನಾಟಕ'ದಲ್ಲಿ ಪ್ರಕಟವಾದ ನನ್ನ ಪತ್ನಿಯ ಕಥೆಯೊಂದನ್ನು ಓದಿ ತಮ್ಮ ಅಭಿಪ್ರಾಯಗಳನ್ನು ಬರೆದು ಮರುಟಪಾಲಿಗೆ ಕಳುಹಿಸಿದ್ದರು. ನನ್ನ ಪತ್ನಿ ಕರ್ಣನ ಕುರಿತು ಒಂದಿಷ್ಟು ವಿಚಾರಗಳನ್ನು ಅವರೊಂದಿಗೆ ಹಂಚಿಕೊಂಡದ್ದೇ ತಡ ಒಂದು ವಾರದಲ್ಲಿ ಎಂಟು ಹತ್ತು ಪುಟಗಳ ತಮ್ಮ ಅಭಿಪ್ರಾಯ, ಅನಿಸಿಕೆಗಳನ್ನು ಅಂಚೆಯ ಮೂಲಕ ನಮಗೆ ರವಾನಿಸಿದ್ದರು. ತಮ್ಮದೆಂಬ ಅಭಿಪ್ರಾಯಗಳನ್ನು ಕಾಯ್ದಿಟ್ಟುಕೊಳ್ಳುವ 'ಗುಹ್ಯ' ರೋಗ ಕಾಯ್ಕಿಣಿಯವರನ್ನು ಎಂದೂ ಬಾಧಿಸಲಿಲ್ಲ. ಇದೇ ಕಾರಣಕ್ಕಾಗಿಯೇ ಅವರು ಉತ್ತರ ಕನ್ನಡದ ಲೇಖಕರ ಮಟ್ಟಿಗಂತೂ ಅಕ್ಷರಶಃ ದ್ರೋಣಾಚಾರ್ಯನಂತಿದ್ದರು. ಮುನ್ನುಡಿಗಳನ್ನು ಬರೆದು ಅವರು ಬೆನ್ನು ತಟ್ಟಿದ ಲೇಖಕರ ಸಂಖ್ಯೆ ಅಗಣಿತವಾದುದು. ಕಾಯ್ಕಿಣಿಯವರು ತಮ್ಮ ವಿಮರ್ಶೆ, ಮುನ್ನುಡಿಗಳಲ್ಲಿ ಬಹು ಧಾರಾಳಿ ಎಂಬ ಅಭಿಪ್ರಾಯವಿದೆ. ಇದನ್ನು ಅವರಿಗೇ ಮುಜುಗರವೆನಿಸುವಷ್ಟು ಸಲ ಹಲವರು ಕೇಳಿರುವುದುಂಟು. ಆಗೆಲ್ಲಾ ಅವರು ಅದನ್ನು ಸಮರ್ಥಿಸಿಕೊಂಡಿದ್ದಾರೆ. ಗುಣಗ್ರಾಹಿ ವಿಮರ್ಶೆಯಲ್ಲಿ ಸಮವಾಗಿ, ಸೂಕ್ಷ್ಮವಾಗಿ ಎಚ್ಚರಿಸಬೇಕು ಎಂಬುದು ಅವರ ಪರಿಕಲ್ಪನೆ.

ಕಾಯ್ಕಿಣಿಯವರ 'ವಿಚಾರವಾದ'ವನ್ನು ಓದಿದ್ದ ನಾನು 1989ರಲ್ಲಿ ಧಾರವಾಡ ಬಾನುಲಿ ಕೇಂದ್ರಕ್ಕೆ ಹೋಗುವ ಹೊತ್ತಿಗೆ ಅವರ ಕುರಿತು ನನ್ನೊಳಗೆ ಭಯವೊಂದು ಮನೆ ಮಾಡಿತ್ತು. ವಿದ್ವಾಂಸರು ಮತ್ತು ನಾಸ್ತಿಕರಾದ ಅವರು ಗಂಭೀರರು, ಸುಲಭವಾಗಿ ಯಾವುದಕ್ಕೂ ಒಪ್ಪುವವರಲ್ಲ- ಹಠ ಸ್ವಭಾವದವರು ಇತ್ಯಾದಿ ಅಂಶಗಳು ನನ್ನಲ್ಲಿ ಹೇಗೋ ಮನೆ ಮಾಡಿಕೊಂಡಿದ್ದವು. ಆದರೆ ಸಂದರ್ಶನಕ್ಕೆಂದು ಅವರ ಮನೆಯ ಕದ ಬಡಿದ ನಂತರವೇ

ನನಗೆ ತಿಳಿದದ್ದು ಅವರ ಸರಳ ಮತ್ತು ಪ್ರೀತಿಯ ಮನೋಭಾವ ಮಗುವಿನಂತಹ ಸ್ವಭಾವದ ಅವರನ್ನು ನಾನು ತಪ್ಪು ತಿಳಿದದ್ದೇ ಒಂದು ಸೋಜಿಗ. ವ್ಯವಹಾರದ ವಿಚಾರ ಬಂದರೆ ಗೌರೀಶರು ನಿಜವಾಗಿಯೂ ಮಗುವೇ. ಲೌಕಿಕ ವ್ಯವಹಾರವನ್ನೆಲ್ಲ ಮರೆತು ಕೇವಲ ಬೌದ್ಧಿಕ ವ್ಯವಹಾರದಲ್ಲಿ ಅವರು ಹಾಗೆ ಮುಳುಗಲು ಸಾಧ್ಯವಾದುದು ಅವರನ್ನು ಪ್ರೇಮಿಸಿ ಮದುವೆಯಾಗಿದ್ದ ಅವರ ಸಂಗಾತಿ ಶಾಂತಾರ ಜಾಣತನ, ಚಾಕಚಕ್ಯತೆ ಮತ್ತು ಅದಮ್ಯ ಪ್ರೀತಿಯಿಂದ ಎಂಥ ಅನಾರೋಗ್ಯದ ಸಂದರ್ಭದಲ್ಲಿಯೂ ಗೌರೀಶರನ್ನು ಮಗುವಿನಂತೆ ಜತನದಿಂದ ಕಾಯ್ದ ಶಾಂತಾಕಾಯ್ಕಿಣಿ ನಮ್ಮೆಲ್ಲರ ಕೃತಜ್ಞತೆಗೆ ಪಾತ್ರರು. ನಾನು ಕಾರವಾರ ಆಕಾಶವಾಣಿಯಲ್ಲಿದ್ದಾಗ ಗೌರೀಶರ ಮೂರು ಸಂದರ್ಶನಗಳ ಮಾಲಿಕೆಯೊಂದನ್ನು ಆಯೋಜಿಸಿದ್ದೆ. ಅದರಂತೆ 'ಸೃಷ್ಟಿ' ಭಾಗದಲ್ಲಿ ಮಿತ್ರ ದಿ. ಜಿ.ಎಸ್.ಅವಧಾನಿ ಸಂದರ್ಶಿಸಿದರೆ 'ದೃಷ್ಟಿ' ಭಾಗದಲ್ಲಿ ಶ್ರೀ ವಿ.ಜೆ. ನಾಯಕರು ಸಂದರ್ಶಿಸಿದರು. ಉಳಿದೊಂದು ಭಾಗದಲ್ಲಿ ಗೌರೀಶ ಮತ್ತು ಜಯಂತ ಕಾಯ್ಕಿಣಿಯವರ ಮುಖಾಮುಖಿಯಿತ್ತು. ಆದರೆ ಜಯಂತರ ಕಾರ್ಯಬಾಹುಳ್ಯದಲ್ಲಿ ಅದು ಸಾಧ್ಯವಾಗದೇ ಹೋದದ್ದು ನೋವಿನ ಸಂಗತಿ. ಇನ್ನೊಂದು ಸುದೀರ್ಘ ಸಂದರ್ಶನಕ್ಕಾಗಿ ನಾನು ಧಾರವಾಡದಿಂದ ಪತ್ರ ಬರೆಯುವ ಎರಡು ದಿನಗಳ ಮೊದಲೇ ಅವರು ವಿಧಿವಶರಾದುದು ವಿಪರ್ಯಾಸ.

ನಾನು ಕಾರವಾರದಲ್ಲಿದ್ದ ಏಳು ವರ್ಷಗಳಲ್ಲಿ ಅದೆಷ್ಟು ಸಲ ಅವರ ಮನೆಗೆ ಹೋಗಿ ಬಂದೆವೋ ಲೆಕ್ಕಕ್ಕಿಲ್ಲ. ಮನೆಗೆ ಬಂದ ಅತಿಥಿಗಳಿಗೆ ಜಿಲ್ಲಾದರ್ಶನ ಮಾಡಿಸುವಾಗ ಗೋಕರ್ಣ ಬಂತೆಂದರೆ ಸಾಕು ಬಂದವರನ್ನು ಮಹಾಬಲೇಶ್ವರನ ಸನ್ನಿಧಿಯಲ್ಲಿ ಪೂಜೆಗೆ ಬಿಟ್ಟು ನಾವು ಗೌರೀಶರ ಮನೆಗೆ ಓಡುತ್ತಿದ್ದೆವು. ಅದು ಬೆಳಗಿನ ಜಾವವೂ ಇರಬಹುದು, ಮಧ್ಯಾಹ್ನ ಸಂಜೆಯೂ ಇರಬಹುದು. ಯಾವ ಹೊತ್ತಿನಲ್ಲಿ ಹೋದರೂ ನಗು ಮುಖದ ಸ್ವಾಗತ. ಗೌರೀಶರು ಚರ್ಚೆಗೆ ಸಿದ್ಧರಾದರೆ ಶಾಂತಾರು ಉತ್ಸಾಹದಿಂದ ಚಹಾ ತಯಾರಿಸಲು ಮುಂದಾಗುತ್ತಿದ್ದರು. ನಮಗೆ ಮೊದಲನೆಯದು ಬೇಕಿತ್ತು. ಎರಡನೆಯದರ ಅಗತ್ಯವಿರಲಿಲ್ಲ. ಆದರೆ ಅದು ಅವರ ಮನೆಯ ಸಂಪ್ರದಾಯ ಬಂದವರನ್ನು ಎಂಥ ಸಂದರ್ಭದಲ್ಲಿಯೂ ಬಾಯಿ ಸಿಹಿ ಮಾಡದೆ ಕಳಿಸುತ್ತಿರಲಿಲ್ಲ. ಹೋದಾಗಲೆಲ್ಲ ಮಕ್ಕಳಿಗೆ ಕೊಡುವಂತೆ ಚಾಕೊಲೆಟ್ ಕೊಡುತ್ತಿದ್ದರು. ಇಂದಿಗೂ ನಮಗೆ ಗೋಕರ್ಣವೆಂದರೆ ಗೌರೀಶರು, ಮಹಾಬಲೇಶ್ವರನಲ್ಲ. ಬಹುಶಃ ಸಮರ್ಥ ಎದುರಾಳಿಯನ್ನು ಕಳೆದುಕೊಂಡ ಮಹಾಬಲೇಶ್ವರನಿಗೂ ಈಗ ಏಕಾಕಿಯಾದ ಅನುಭವವಾಗುತ್ತಿರಬೇಕು.

ಕಡಲ ಪಕ್ಕದಲ್ಲೇ ಗೌರೀಶರ ಮನೆ, ಅವರ ಮನೆಯ ಮುಂಭಾಗದ ನೆರಳಲ್ಲಿ ಮಾತಿಗೆ ಕೂತರೆ ಹಿಂದೆ ಕಡಲು ಕಾಣುತ್ತಿತ್ತು. ಪ್ರಕೃತಿ ಮತ್ತು ಪಾಂಡಿತ್ಯದ ರಸಗವಳ ಅವರ ಮುಂದೆ ಕೂತವರಿಗೆ. ಸಮುದ್ರದ ಒಡಲ ಶ್ರೀಮಂತಿಕೆ ಎಲ್ಲರಿಗೂ ಗೊತ್ತಿರುವಂತಹುದೇ. ಗೌರೀಶರದೂ ಕೂಡ. ಕನ್ನಡವಂತೂ ಸರಿ. ಕೊಂಕಣಿ ಅವರ ಮಾತೃಭಾಷೆ. ಕೊಂಕಣಿಯಲ್ಲಿ ಅವರ 'ಮೀನಾಕ್ಷಿ' ಎಂಬ ಕವನ ಸಂಗ್ರಹಕ್ಕೆ ಕೊಂಕಣಿ ಸಾಹಿತ್ಯ ಅಕಾಡೆಮಿ ಬಹುಮಾನ ಪ್ರಾಪ್ತವಾಗಿತ್ತು. ಮರಾಠಿ ಭಾಷೆಗೆ ರಂ.ಶ್ರೀ. ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆಯೂ ಸೇರಿದಂತೆ ಹಲವು ಕೃತಿಗಳನ್ನು ಅನುವಾದಿಸಿದ್ದರು. ಸಂಸ್ಕೃತ ಮತ್ತು ಇಂಗ್ಲೀಷಿನಲ್ಲಿ ಅವರದು ಅಗಾಧ ಪಾಂಡಿತ್ಯ. ಹಿಂದಿಯೂ ಸೈ. ಹಲವು ಭಾಷಾ ಮೂಲಗಳ ಜೊತೆಗೆ ಹಲವು ಜ್ಞಾನದ

ನೆಲೆಗಳು ಮನೋವೈಜ್ಞಾನಿಕ ವಿಚಾರಗಳನ್ನು ಒಳಗೊಂಡು ಕೃತಿಗಳನ್ನು ಬರೆದಂತೆ ತತ್ವಶಾಸ್ತ್ರಜ್ಞರನ್ನು ಪರಿಚಯಿಸುವ ಕೃತಿಗಳನ್ನು ರಚಿಸಿದರು. ಸಂಗೀತದ ಕುರಿತು ವಿವೇಚಿಸಿದರು. ಕವಿತೆ, ನಾಟಕ, ಗೀತರೂಪಕಗಳನ್ನು ಬರೆದರು. ಕಥೆ, ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದರು. ಬೇಂದ್ರೆ, ಕಣವಿ ಸೇರಿದಂತೆ ಹಲವು ಕವಿಗಳ ವಿಮರ್ಶಾ ಹೊತ್ತಗೆಗಳನ್ನು ತಂದರು ಎಂ.ಎನ್. ರಾಯ್ ಅವರ ವಿಚಾರಗಳನ್ನು ಪುಸ್ತಕ ರೂಪದಲ್ಲಿ ಪರಿಚಯಿಸಿದರು. ನಾಸ್ತಿಕ ದರ್ಶನಗಳ ಕುರಿತು ಜನತೆಗೆ ತಿಳಿಸಿದರು. ಸತತ ಹದಿನೈದು ವರ್ಷಗಳ ಕಾಲ ದಿನಕರ ದೇಸಾಯಿಯವರ 'ಜನಸೇವಕ' ಪತ್ರಿಕೆಗೆ ವಾರದ ಉಪ್ಪಿನಕಾಯಿ ಶೀರ್ಷಿಕೆಯಡಿ 'ಅಡಿಗೆಭಟ್ಟ' ಎಂಬ ಕಾವ್ಯ ನಾಮದಲ್ಲಿ ಅಂಕಣ ಬರೆದರು. ಅಲ್ಲಿ ರಾಜಕೀಯ, ಸಾಮಾಜಿಕ ಆರ್ಥಿಕ, ಸಾಂಸ್ಕೃತಿಕ ಹೀಗೆ ಹಲವು ಆಸಕ್ತಿಯ ನೆಲೆಗಳಲ್ಲಿ ಬರೆದರು ಚಿಂತನಗಳನ್ನು ವಿಪುಲವಾಗಿ ಸೃಷ್ಟಿಸಿದರು ಸಾಯುವ ಕ್ಷಣದವರೆಗೂ ಅವರು ಬರೆದರು. 'ಸಂಯುಕ್ತ ಕರ್ನಾಟಕ' ದಲ್ಲಿ ಕೊನೆಯವರೆಗೂ ಅಂಕಣವೊಂದು ಪ್ರಕಟವಾಗುತ್ತಿತ್ತು.

ಇದಕ್ಕೆ ಅನುಗುಣವಾಗಿ ಅವರು ರೂಪಿಸಿಕೊಂಡ ಭಾಷೆಯೂ ವಿಶಿಷ್ಟ. ಗೌರೀಶರ ಛಾಪು ಎಲ್ಲೆಲ್ಲೂ ಎದ್ದು ಕಾಣುತ್ತಿತ್ತು. ವಸ್ತುವಿಗೆ ತಕ್ಕಂತೆ ಅವರ ಭಾಷೆ ಬದಲಾಗುತ್ತಿದ್ದ ರೀತಿ ಗಮನಿಸುವಂತಹುದು. ಕವಿಯ ಘರಾಣೆ, ಕವಿಯ ಕೈಫಿಯತ್ತು ಇದೆಲ್ಲ ಅವರ ಪ್ರಯೋಗಗಳು ಇನ್ನು ಕೆಲವು ಲೋಪಾಮುದ್ರೆಗಳು' ಇದು ಲೋಪದೋಷಗಳನ್ನು ಅವರು ತೋರುವಾಗ ಮಾಡಿದ ಪ್ರಯೋಗ Complex ಅವರು 'ಮನೋಗಂಡ' ಎಂದು ಕರೆದರು ವಿ. ರಾಮರತ್ನಂ ಮತ್ತು ಸಂಪತ್ಕುಮಾರಾಚಾರ್ಯರ 'ಕರ್ನಾಟಕ ಸಂಗೀತ ಸುಧಾ' ಕೃತಿ ವಿಮರ್ಶೆಯ ಅವರ ಈ ಕೆಲ ಸಾಲುಗಳನ್ನು ಗಮನಿಸಿದರೆ ಗೌರೀಶರ ವಿಮರ್ಶೆ, ವಿದ್ವತ್ತಿನ ಒಂದು ಸೂಕ್ಷ್ಮ ಗ್ರಹಿಕೆಯಾಗುತ್ತದೆ.

'ಎಂಥ ಅಪ್ಪಟ ಹಾಡುಗಾರಿಕೆಯಲ್ಲಿಯೂ ಅಲ್ಲಲ್ಲಿ ಕೇಸರ ಬಾರದೇ ಇರುತ್ತದೆಯೋ ? ಅದೂ ಜೋಡಿ ತಂಬೂರಿಗಳ ಶೃತಿಗೂಡಿಸಿ ಹಾಡುವಾಗ ಹಾಗೆ ಶೃತಿಗೂಡಿಸುವುದು ಒಂದು ಯೋಗ. ಅದಕ್ಕೂ ಕಠಿಣ ಕರಾಮತ್ತು. ಇಬ್ಬರು ಗಾಯಕರು 'ಜುಗಲ ಬಂದಿ' ಕಟ್ಟಿ ಹಾಡುವುದು ! ಅದೇ ಬಗೆಯ ಸಹಯೋಗದ ಕುಶಲಕರ್ಮ ಇಲ್ಲಿ ಉಭಯ ಲೇಖಕರ ಈ ಸಂಯುಕ್ತ ಕೃತಿ ಅಂದಾಗ ಇಲ್ಲಿಯ ಸಿದ್ಧಿಯಲ್ಲಿ 'ಸಮಶ್ರುತಿ' ಎಷ್ಟು ಸ್ಥಾಯಿಶೃತಿ ಎಷ್ಟು? ವಿದ್ವಜ್ಜನ ಪರಿಶ್ರಮವನ್ನು ವಿದ್ವಾಂಸರೇ ತೀರ್ಮಾನಿಸಬೇಕು.' ಷಡ್ಜ ಮಧ್ಯಮಗ್ರಾಮಗಳ ವಿವರಣೆಯೊಂದಿಗೆ ಈಗ ಲುಪ್ತವಾದ ಗಾಂಧಾರಗ್ರಾಮದ ಉಲ್ಲೇಖವನ್ನು ಲೇಖಕರು ಏಕೆ ಕೈ ಬಿಟ್ಟರೋ ! ಕಾರಂತರು ಈ ಗಾಂಧಾರಗ್ರಾಮವೇ ಯಕ್ಷಗಾನದ 'ಪಂಚಮರ್ಶ್ಯದೇಶಿ' ಸಂಗೀತದ ಆಧಾರವೆಂದು ತಮ್ಮ ಗ್ರಂಥದಲ್ಲಿ ಚರ್ಚಿಸಿದ್ದು ಇಲ್ಲಿ ಜ್ಞಾಪಿಸಿಕೊಳ್ಳಬಹುದು.


ಮಾತಂಗ ಮುನಿಯ ಬೃಹದ್ದೇಶಿ, ಶಾರ್ಙ್ಗದೇವನ ದೇಶೀರಾಗ ವಿಚಾರಗಳ ಕುರಿತೂ ಲೀಲಾಜಾಲವಾಗಿ ಗೌರೀಶರು ಹೇಳಬಲ್ಲವರಾಗಿದ್ದರು. ಹಿಂದೆ ಅವರು ಹಾರ್ಮೋನಿಯಂ ಮಾಸ್ತರು ಕೂಡ ಆಗಿದ್ದರಂತೆ ! ಶೀರ್ಷಿಕೆಗಳನ್ನು ಕೊಡುವಲ್ಲಿಯೂ ಅವರು ಸಂಪ್ರದಾಯ ಮುರಿದವರು. 'ಆರ್ಕೆಸ್ಟ್ರಾ ಮತ್ತು ತಂಬೂರಿ' ಎಂಬ ಅವರ ಗ್ರಂಥದ ಹೆಸರೇ ಸಾಕು. ಬೇಂದ್ರೆಯವರ ಕಾವ್ಯದ ಕುರಿತು ಬರೆದ 'ಕಂಪಿನಕರೆ' ವಿಮರ್ಶಾಗ್ರಂಥದಲ್ಲಿ 'ಹೀಗಾಗಲು ಕಾರಣವೇನು' ಯೇಟ್ಸನ ನೆನಪು. ಅವನು ಅವನಿಗೂ ಹೆಚ್ಚು ಎಂದೆಲ್ಲಾ ಶೀರ್ಷಿಕೆ ನೀಡಿದರು. 'ಸೇವಾ ನಿವೃತ್ತರ ಸಂಧ್ಯಾರಾಗ', ದ್ರೌಪದಿಯ ವಸ್ತ್ರಾಪಹರಣ - ನಿಜವಾಗಿ ನಡೆದದ್ದೇನು ?'

ಹೀಗೆ ಆಕರ್ಷಕ ಕುತೂಹಲದಾಯಕ ತಲೆಬರಹ ನೀಡುತ್ತಿದ್ದರು. ಸಂಸತ್ತು ವಿಧಾನಸಭೆಗಳನ್ನು ಅವರು 'ಅಪಕ್ವ ಪ್ರಜಾಪ್ರತಿನಿಧಿಗಳ ಸಟ್ಟಾ ಬಜಾರು' ಎಂದು ಲೇವಡಿ ಮಾಡಿದರು. 'ವಿಶ್ವ ಹಿಂದೂ ಪರಿಷತ್ತು' ಎಂಬ ಲೇಖನದಲ್ಲಿ ಅವರು ಹೀಗೆ ಬರೆದಿದ್ದಾರೆ.

ಇದು ಬರೇ ಹಿಂದೂ ಪರಿಷತ್ತು ಅಲ್ಲ ವಿಶ್ವ ಹಿಂದೂ ಪರಿಷತ್ತು. ಇಲ್ಲಿ ವಿಶ್ವ ಹಿಂದೂ ಅಂದರೆ ಯಾರು? ಎಂದು ಹುಬ್ಬು ಏರಿಸಬೇಕಾಗಿಲ್ಲ. 'ರಾಷ್ಟ್ರೀಯ ಮಲೇರಿಯಾ ನಿವಾರಣೆ'ಯ ಸಂಘಟನೆಯವರಿಗೆ 'ರಾಷ್ಟ್ರೀಯ ಮಲೇರಿಯಾ' ಅಂದರೇನೆಂದು ಕೇಳುವಷ್ಟೇ ಹಾಸ್ಯಾಸ್ಪದವಾದೀತು.

ಗೌರೀಶರದು ಹರಿದಾಡುವ ಮನಸ್ಸು. ಅವರು ಪ್ರತಿಭೆಯಲ್ಲಿ ಗೆದ್ದಂತೆ ಆಯ್ಕೆಯಲ್ಲಿ ಸೋತರೇನೋ ಎಂದು ನನಗೆ ಅನುಮಾನವಿದೆ. ಅವರು ಬರೆಯದೆಯೂ ಬಿಡಬಹುದಾಗಿದ್ದ ಎಷ್ಟೋ ಪುಸ್ತಕಗಳೂ ಇವೆ. ಒಂದು ಶಿಸ್ತಿಗೆ ಬಲವಾಗಿ ಅಂಟಿಕೊಂಡಿದ್ದರೆ ಅವರು ನೀಡಬಹುದಾಗಿದ್ದ ಕೃತಿಗಳನ್ನು ನೆನೆದರೇ ರೋಮಾಂಚನವಾಗುತ್ತದೆ. ಆದರೆ ಅದು ಗೌರೀಶರ ಜಾಯಮಾನವಲ್ಲ. ಅವರು ಅನ್ವೇಷಣಾ ಪ್ರವೃತ್ತಿ ಎಲ್ಲ ನಿಯಂತ್ರಣಗಳನ್ನೂ ಮೀರಿತ್ತು. ನಮ್ಮ ಅಪೇಕ್ಷೆಗಳ ಆಚೆ ನಿರಪೇಕ್ಷ ನೆಲೆಯಲ್ಲಿ ಅವರು 'ಬಾಳಿನಗುಟ್ಟು' ಇತ್ತು.

ನಾಲ್ಕು ದಶಕಗಳ ಕಾಲ ಬಂಕಿಕೊಡ್ಲದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಈ ಪ್ರೀತಿಯ ಮೇಷ್ಟ್ರು ಗೋಕರ್ಣದಿಂದ ಬಂಕಿಕೊಡ್ಲದವರೆಗೆ ಬೆಳಗ್ಗೆ ಮತ್ತು ಸಂಜೆ ನಡೆಯುವಾಗೆಲ್ಲ ಪುಸ್ತಕವನ್ನು ಹಿಡಿದು ನಡೆಯುತ್ತಲೇ ಓದುತ್ತಿದ್ದುದನ್ನು ನೋಡಿದ ಎಲ್ಲರೂ ಅಚ್ಚರಿ ಅಭಿಮಾನದಿಂದ ನೆನಪಿಸಿಕೊಳ್ಳುತ್ತಾರೆ. ಪ್ಲೇಟೋ, ಅರಿಸ್ಟಾಟಲ್ ಪರಂಪರೆಯ ಶಿಷ್ಯರನ್ನು 'ಶತಪಥಿಕರು' ಎಂದು ಕರೆಯುವ ರೂಢಿಯಿದೆ. ಗೌರೀಶರನ್ನು ನೆನೆಯುವಾಗ ಯಾರಿಗಾದರೂ ಅರಿಸ್ಟಾಟಲ್ ನೆನಪಾದರೆ ಅದು ಸಹಜ. ಅವರ ಬದುಕಿನ ಸಂಧ್ಯಾಕಾಲದಲ್ಲಿ ಮಾತ್ರ ಅವರನ್ನು ನೋಡಿದ ನಾನು ಏನು ಹೇಳಿದರೂ ಕುರುಡನೊಬ್ಬ ಆನೆಯನ್ನು ವರ್ಣಿಸಿದಂತೆ ಆಗುತ್ತದೆ. ಕನ್ನಡನಾಡು ಇನ್ನಾದರೂ ಶಂಬಾ, ಗೌರೀಶರನ್ನು ಓದಲು ಶುರು ಮಾಡಬೇಕು.




ಋತ ಎಸ್.

ಕೆ.ಆರ್.ಎಸ್. ದೇವಾಲಯ

- ಇಂಗ್ಲೀಷ್ ಮೂಲ : ರೋವೇನಾ ಹಿಲ್

- ಕನ್ನಡಕ್ಕೆ : ಸಿ.ನಾಗಣ್ಣ



ಅಣೆಕಟ್ಟೆಯಲ್ಲಿನ ದೇವಾಲಯಕ್ಕೆ
ನಾವು ಹೊರಟದ್ದು ಯಾತ್ರೆಯೋ ಚಾರಣವೊ?
ಒಂದು ಪರಿಪೇಕ್ಷಕ್ಕಾಗಿ ಹುಡುಕುತ್ತಿದ್ದೇನೆ.

ನೀರ ಅಂಚಲ್ಲಿ
ಉಬ್ಬಿದ ಕರಿಕಲ್ಲುಗಳ ಕಂಡ
ಗಿಡುಗದ ಸುತ್ತ
ಸುತ್ತುವ ಹಲವು ಜೀವಿಗಳು

ನೀರಿಗೆರಗುವ ಹಕ್ಕಿ
ಪಾಳುದೇಗುಲಕ್ಕೆ ಹಾಯ್ದು ನಡೆಯುವ ಹೆಂಗಸರು
ಬಗ್ಗಡದಲ್ಲಿ ಬಿಳಿ ಹಲ್ಲುಗಳ
ಮಿಂಚಿಸುವ ಕಪ್ಪು ಮುಖದ ಮಕ್ಕಳು
ದಡಕ್ಕೆ ಸಮಾನಾಂತರ ತೇಲುವ ಗಿಡುಗ
ಬಟ್ಟೆ ಒಗೆಯುವ ಹೆಂಗಸರು ಬಿಟ್ಟ ನೊರೆಬುರುಗು
ಅಲ್ಲೆಲ್ಲ ಅಮೇಧ್ಯದ ಗಬ್ಬು
ನೊರೆಗಿಲ್ಲ ದುರ್ನಾತದ ಗೊಡವೆ
ಕಲ್ಲಿನಡಿಯಲ್ಲಿ ಅಡಗಿದ ಪುಟ್ಟಕಪ್ಪೆ

ಇದು ನಗರದ ನೀರು
ಪ್ರಗತಿಯಲ್ಲಿ ನಂಬಿಕೆಯಿಟ್ಟ
ಮೊದಲಿಗರೊಬ್ಬರು ಕಟ್ಟಿದ ಕಟ್ಟೆ

ಸಾಗುತ್ತದೆ ನಮ್ಮ ಕಾರು
ಸರೋವರದ ಸಮೀಪ ನಿಧಾನವಾಗಿ
ಅಲ್ಲಲ್ಲಿ ಎದ್ದ ತರಕಾರಿ ಮಡಿಗಳು
ಶುರುವಾದರೆ ಮುಂಗಾರು
ಈ ಹುರುಳಿ, ಈ ರಸ್ತೆ ಮತ್ತು ದೇವಸ್ಥಾನ
ಎಲ್ಲ ನೀರಿನ ಒಳಗೆ



ಗಂಡಸರು ಹೆಂಗಸರು ಸಾಗಿದ್ದಾರೆ
ಜಾನುವಾರುಗಳ ಹಾಗೆ
ಚದುರಿದ ಸರತಿ ಸಾಲಲ್ಲಿ

ಹಸುರು-ಕಂದು ನೆಲದ ಮೇಲೆ
ಸೀರೆ ಬಣ್ಣಗಳ ಗುರಿಯಲ್ಲದ ಓಟ

ನಾರುವ ಕಾಲುವೆಗಳ ಹಾಯ್ದು
ಪರೀಕ್ಷಿಸುತ್ತೇನೆ ಕಂಭಗಳ ಮೇಲಿನ ಚಕ್ರಗಳನ್ನು
-ಹೊಯ್ಸಳ-
ಕುಂದಿರದ ನಿಯತಾಕಾರ
ಬಹುತೇಕ ಹಾಳಾಗಿದೆ.
ಛಾವಣಿಯ ಸಂದಿಯಿಂದಿಳಿಯುವ
ಬಿಸಲ ಕೋಲಲ್ಲಿ ಕಿಲಕಿಲ ನಗುತ್ತಾರೆ
ಹುಡುಗಿಯರಿಬ್ಬರು

ಜಂಗುಳಿಯ ನಡಿಗೆಗಿಂಬಾಗುತ್ತೇನೆ
ಜನಕ್ಕೆ ಗೊತ್ತಿದೆ ತಾವು ಸೇರುವ ಗುರಿ
ಒಳಗೆ ಗರ್ಭಗುಡಿಯ ಬಳಿಗೆ
ಅರ್ಚಕರು ಆಶೀರ್ವದಿಸುತ್ತಾರೆ
ಅಗ್ಗದ ಮೂರ್ತಿಯ ಮೂಲಕ
ದೇವರು ಎಂದೋ ಎಲ್ಲೋ ನಡೆದಿರಲಾಗಿ.



ಇತ್ತಲಾಗಿ ದ್ವೇಷಕ್ಕೆ ಹೆಸರಾದ ಧರ್ಮದ ಕೈಯ್ಯಲ್ಲಿ
ಹುಬ್ಬುಗಳ ಮಧ್ಯೆ ಬೊಟ್ಟಿನ ಬರೆ ಇಡಿಸಿಕೊಂಡು
ಹೊರ ನಡೆಯುತ್ತೇನೆ.

ಗಾಡಿ ಬಿಡುತ್ತೇವೆ.

ಹಿಂತಿರುಗಿ ನೋಡಿದರೆ
ಬಹುವಿಶಾಲ ಆಕಾಶ
ಸುಟ್ಟನೀಲಿಯ ಸುತ್ತ ಬೂದು ಮೋಡಗಳು
ಸ್ವಚ್ಛ ನೀರಲ್ಲದರ ಪ್ರತಿಫಲನ

ಎದ್ದ ನಿಗೂಢದ ಒಡಲಲ್ಲಿ
ಒಂದಾಗುತ್ತವೆ ಧುತ್ತನೆ
ಆಕೃತಿಗಳು



ಶಹರ

- ಜಿ.ಪಿ. ಕುಸುಮ

ನೆನಪು, ಚಿಂತೆ, ನಿರಾಶೆ
ಬೆಳಿಗ್ಗೆ ನಲ್ಲಿಯ ನೀರಲ್ಲಿ ಬಿದ್ದು
ಮತ್ತೆ ತಲೆದಿಂಬಿನಡಿಯಲ್ಲಿ ಸುಳಿದು
ಮಿದುಳು ಕೊರೆದಾಗ.... ರಾತ್ರಿಯು
ಆತ್ಮಹತ್ಯೆಗೈಯುವುದಕೆ
ನಿಶ್ಯಬ್ದ ಚೀರುತ್ತದೆ ಇಲ್ಲಿಯ ಮನೆಗಳಲ್ಲಿ
ಜನರ ಸಡಗರದ ಮೇಲ್ಹೊದಿಕೆ
ಒಳಗೆಲ್ಲ ಅವಸರದ ನಾಡಿ.....
ದೂಡಿಕೊಂಡೇ ಸಾಗುವ,
ಓಡಿಕೊಂಡೇ ಹುಡುಕುವ ಪರಿ....
'ನಿಧಾನ' ಎಲ್ಲಿದೆ ಇಲ್ಲಿ?
ನಿತ್ಯ ಸೋಲು, ನಿತ್ಯ ಗೆಲವು,
ಸತ್ತಮರ ಚಿಗುರುವುದು
ಹೆಮ್ಮರ ಸುಮ್ಮನಾಗುವುದು
ಮನೆಗಳು ಮಾತಿಗೆಳೆಯುವುದು
ನೆತ್ತಿಯಲಿ ಜವಾಬ್ದಾರಿಗಳ ಸವಾರಿ ನಿತ್ಯ.
ಹಸಿವು ಸದ್ದಿಲ್ಲದೆ ಆಳುವುದು.
ನೀರು-ಗಾಳಿ, ಖೋಟಾ ಹೃದಯಗಳು
ಧನ ಪಡೆದು ಘನ ಇಲ್ಲಿ...
ಕತ್ತಲು ಮುಗಿಯುವುದೇ ಇಲ್ಲ
ಬೆಳಕು ಮಲಗುವುದೇ ಇಲ್ಲ
ಒಳಗೆ-ಹೊರಗೆ, ಮೇಲೆ-ಕೆಳಗೆ
ಯಾರಿಲ್ಲ.....
ಇಲ್ಲಿ ಹೊಕ್ಕರೆ ಜನ ಮನೆಯುತ್ತಾರೆ
ಬಂದದ್ದೆಲ್ಲಿಂದ
ದಾರಿಗಳಲ್ಲಿ ಸಹಸ್ರ.



ಯಶೋಧರ ಚರಿತೆ - 'ಮುಕ್ತಿ' ಒಂದು ತೌಲನಿಕ ಅಭ್ಯಾಸ

■ ಸುರೇಶ್ ನಾಗಲಮಡಿಕೆ

ಯಾವುದೇ ಸಾಹಿತ್ಯದ ಉತ್ತಮ ಕೃತಿಗಳು ಎಲ್ಲಾ ಕಾಲ, ದೇಶ ಸಂದರ್ಭಗಳಿಗೆ ಪ್ರಸ್ತುತವಾಗಿರುತ್ತವೆ. ಮನುಷ್ಯನ ಬದುಕಿಗೆ ಸಮೀಪವಾಗಬಲ್ಲ, ತಾತ್ವಿಕ ನೆಲೆಗಳನ್ನು ಗುರಿತಿಸಬಲ್ಲ ಕಲೆ 'ಸಾಹಿತ್ಯ' ಎಂದರೆ ತಪ್ಪಾಗಲಾರದು. ಜೀವನ ಹೇಗಿದೆ ಅನ್ನುವುದರ ಜೊತೆಗೆ ಹೇಗಿರಬೇಕು ಎಂಬುದನ್ನು ಸಮರ್ಥವಾಗಿ ಬಿಂಬಿಸುತ್ತದೆ ಸಾಹಿತ್ಯ. ಜನ್ನನ 'ಯಶೋಧರ ಚರಿತೆ' ಕಾವ್ಯ ಮತ್ತು ಶಾಂತಿನಾಥ ದೇಸಾಯಿಯವರ ಕಾದಂಬರಿ 'ಮುಕ್ತಿ' ಕೂಡ ಆ ಗುಂಪಿಗೆ ಸೇರಬಲ್ಲ ಕೃತಿಗಳು.

ಜನ್ನನ ಯಶೋಧರಚರಿತೆ ಕನ್ನಡದ ಪ್ರಮುಖ ವಿಮರ್ಶಕರ ಕೈಯಲ್ಲಿ ವಿಭಿನ್ನ ರೀತಿ-ನೀತಿಗಳಲ್ಲಿ ಚರ್ಚೆಗೆ ಒಳಗಾಗಿದೆ. ಅದೇ ರೀತಿಯಲ್ಲಿ 'ಮುಕ್ತಿ' ತಂತ್ರ, ಪಾತ್ರ ಪೋಷಣೆ ಎಲ್ಲಾ ನೆಲೆಯಲ್ಲಿಯೂ ಕನ್ನಡದ ಪ್ರಥಮ 'ನವ್ಯ ಕಾದಂಬರಿ' ಎಂದು ಕರೆಯಬಹುದು ಇವೆರಡೂ ಕೃತಿಗಳು ಬದುಕಿನ ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತವೆ. ದೇಸಾಯಿಯವರ 'ಮುಕ್ತಿ'ಯನ್ನು ಈಗಾಗಲೇ ಇತರ ಕೃತಿಗಳ ಜೊತೆ ಸಮಾನ ಅಂಶಗಳನ್ನು ಗುರುತಿಸುವುದಕ್ಕೆ ವಿಮರ್ಶಕರು ಪ್ರಯತ್ನಮಾಡಿದ್ದಾರೆ.

ಗಿರಡ್ಡಿ ಗೋವಿಂದರಾಜರವರ ಯಶೋಧರ ಚರಿತೆ ಒಂದು 'ಧಾರ್ಮಿಕ ಕಾವ್ಯ' ಪ್ರಚಾರಾತ್ಮಕ ಕಾವ್ಯವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ತೀ.ನಂ.ಶ್ರೀ, ಧಾರವಾಡಕರ್‌ರವರು 'ಪ್ರಣಯ ಸಮಸ್ಯೆಯೇ' ಇದರ ಮೂಲ ಸೆಲೆ ಎಂದು ಹೇಳಿದ್ದಾರೆ. ಆದರೆ ನಾನು ಈ ಎಲ್ಲಾ ಅಭಿಮತಗಳನ್ನು ಬಿಟ್ಟು 'ಮುಕ್ತಿ' ಕಾದಂಬರಿಯ ಹಿನ್ನಲೆಯಲ್ಲಿ ಕೆಲವು ಸಮಾನ ಅಂಶಗಳನ್ನು ಗುರುತಿಸುವುದಕ್ಕೆ ಒಂದು ಪ್ರಯತ್ನ ಮಾಡಿದ್ದೇನೆ.

ಜನ್ನನ ಯಶೋಧರ ಚರಿತೆಯಲ್ಲಿ ಪ್ರಜ್ಞಾಪ್ರವಾಹ ತಂತ್ರ ಇಲ್ಲವೇ ? ನೀತಿಯನ್ನು ಯಾವ ಬಗೆಯಲ್ಲಿ ಬಯಲು ಮಾಡುತ್ತದೆ ? ಮಧುರವಾದ ಭಾವನೆಗಳನ್ನು ಯಾವ ರೀತಿಯಲ್ಲಿ ಅನಾವರಣಗೊಳಿಸುತ್ತದೆ? ಜನ್ನನ 'ಮನಸಿಜನ ಮಾಯೆ ವಿಧಿವಿಳಸನದ ನೆರಬಂಡೆಯೆ ಕೊಂದು ಕೂಗದೆ ನರರಂ' ಈ ಉದ್ಗಾರ 'ಮುಕ್ತಿ' ಕಾದಂಬರಿಗೆ ಎಷ್ಟರ ಮಟ್ಟಿಗೆ ಪ್ರಸ್ತುತವಾಗಬಲ್ಲದು? 'ನೀತಿ'ಯನ್ನು ಈ ಎರಡೂ ಕೃತಿಗಳಲ್ಲಿ ಒಳಗೊಂಡಿರುವ ಬಗೆ ಎಂತಹದು? ಮುಂತಾದ ಪ್ರಶ್ನೆಗಳು 'ಮುಕ್ತಿ' ಮತ್ತು ಯಶೋಧರ ಚರಿತೆಗಳನ್ನು ಒಟ್ಟಿಗೆ ಓದಿದಾಗ ನಮ್ಮ ಗಮನಕ್ಕೆಬಾರದೇ ಇರದು.

'ಅಮೃತ ಮತಿಯೆಂಬ ಪಾತಕಿ
ಯ ಮಾಯೆ ಬನಮಾಯ್ತು ಚಂದ್ರಮತಿ ಮಾತೆಯ ಮಾ

ತೆಮಗೆ ಬಲೆಯಾಯ್ತು ಹಿಂಸನ
ಮ ಮೋಘ ಶರಮಾಯ್ತು ಕೆಡೆದುದಾತ್ಮ ಕುರಂಗಂ'

'ಎನೆ ತಾಯ ಮೋಹದಿಂದಂ
ಜನಪನೊಡಂಬಟ್ಟು ಮನದೊಳಿಂತೆಂದಂ ಭಾ
ವನೆಯಿಂದ ಮಪ್ಪುದಾಸ್ರವ
ಮೆನಗಿನ್ನೆಂತಪ್ಪ ಪಾಪಮಿದಿರ್‌ವಂದಪುದೋ'

(ಶ್ರೀಕಾಂತನ ಆತ್ಮಹತ್ಯೆಯ ಬಳಿಕ)
'ಭಿನ್ನ ಮುಕ್ತಿಯ ಕ್ಷಿತಿಜದ ದಿಶೆಯಲ್ಲಿಯೇ ನನ್ನ ಮುಕ್ತಿಯ ದಾರಿಯಿದೆ'
'ಭೂತ ಕಾಲದ ಭೂತದಿಂದ ಮುಕ್ತಿ'
'ಗತ ಕಾಲವನ್ನು ರೂಪಿಸಿ ಅದಕ್ಕೆ ಒಂದು ಆಕಾರ ಕೊಟ್ಟು ನನ್ನಿಂದ ದೂರ ಸರಿಸಿ ಪೆಟ್ಟಿಗೆಯ ಮೂಲೆಯಲ್ಲಿಡಬೇಕು'
'ಡಾಲಿಯ ಸಾಮೀಪ್ಯ ನನ್ನ ಒಂದು ರೀತಿಯ ಮುಕ್ತಿಯ ಭಾವವನ್ನು ನೀಡಿತು.'
'ಈ ಬಗೆಯಾಗಿ ನಿನ್ನೆದುರಿಗೆ ತಿಳಿಯಾಗಿ, ನಿರರ್ಗಳವಾಗಿ ಹರಿಯುವುದರಲ್ಲಿಯೇ ನನ್ನ ಮುಕ್ತಿಯಿದೆ ಎಂದೆನಿಸುತ್ತದೆ ಡಾಲಿ.'
'ಲಗ್ನದ ಬಳಿಕ ನಿನಗೆ ಮುಕ್ತಿ ಇಲ್ಲ.'

ಒಂದು ರೀತಿಯಲ್ಲಿ ಯಶೋಧರ ಮತ್ತು ಗೌರೀಶ ಇಬ್ಬರೂ ದ್ವಂದ್ವ ಪರಿಸ್ಥಿತಿಯಲ್ಲಿ ಪರದಾಡುತ್ತಿದ್ದಾರೆ. ಗೌರೀಶ, ಕಾಮಿನಿ ಮತ್ತು ಶ್ರೀಕಾಂತನಿಂದ, ಅವನ ಬಲೆಯಿಂದ ಬಿಡುಗಡೆ ಹೊಂದುವುದೇ ಅವನ ಮುಕ್ತಿಗೆ ರಹದಾರಿಯಾಗುತ್ತದೆ.

'ಬೇವಂ ಮೆಚ್ಚಿದ ಕಾಗೆಗೆ ಮಾವಿಳಿದಪ್ಪಂತೆ ಪತಿಯೊಳ್ಳಿದಾಯ್ತುಮನಂ' ಎಂದು ಜನ್ನ ಅಮೃತಮತಿಯನ್ನು ಕಾಗೆಗೂ, ಅಷ್ಟವಂಕನನ್ನು ಬೇವಿಗೆ ಹೋಲಿಸಿದ್ದರೆ, ಯಶೋಧರನನ್ನು ಮಾವಿಗೆ ಹೋಲಿಸಿದ್ದಾನೆ. ಯಾವಾಗ ನನ್ನ ಮೇಲೆ ಅಮೃತಮತಿಯ ಪ್ರೀತಿ ಕಡಿಮೆಯಾಯಿತೊ ಆಗ ಯಶೋಧರ ಅವಳನ್ನು ಪರೀಕ್ಷಿಸಲೆಂದು ಮೈ ಮರೆತು ಮಲಗಿದಂತೆ ನಟಿಸುತ್ತಾನೆ. ಮುಂದೆ ಅಮೃತಮತಿಯ ಮತ್ತು ಅಷ್ಟವಂಕನ ವರ್ತನೆಗಳ ಚಿತ್ರವನ್ನು ಅದ್ಭುತವಾಗಿ ಕೊಡುತ್ತಾನೆ ಜನ್ನ.

ಅಮೃತ ಮತಿ **'ಅರಸನೆಂಬ ಪಾತರನೆನ್ನಂ ತೊಡೆಯೇರಿಸಿ ಕೇಳಿಯಾದೊಡೆ..... ನೀ ನಲ್ಲದೆ ಮಿಕ್ಕ ಗಂಡರ್ ಸವಸೋದರರ್'** ಎನ್ನುತ್ತಾಳೆ.

ಈ ಮಾತನ್ನು ಕೇಳಿಸಿಕೊಂಡ ಯಶೋಧರ ಅವರಿಬ್ಬರನ್ನೂ ಕೊಲ್ಲಲ್ಲು ಹೋಗಿ ಧೃತಿಯಿಂದ ನಿರ್ಲಿಪ್ತನಾಗುತ್ತಾನೆ. ಈ ದೃಶ್ಯವನ್ನು ತನ್ನ ತಾಯಿಗೆ ಕನಸಿನ ರೂಪದಲ್ಲಿ ವ್ಯಕ್ತಪಡಿಸಿದಾಗ, ಚಂದ್ರಮತಿ **'ಆದೊಡೆ ಪಿಟ್ಟನ ಕೋಳಿಯ ನಾದೊಡಮಿಂದೊಂದ ವಿಕ್ಕವೇಳ್ಪಿದು'** ಎಂಬ ಸೂಚನೆಯೊಡನೆಯೆ **'ಮಿಕ್ಕಂದಾ ದೇವಿಗೆನ್ನ ನಿಕ್ಕಿಯುಮೀ ದುರಿತಮನಿಂದು ಮಗನೆ ಪರಿಹರಿಸದಿರಂ.'** ಎಂದು ತಾನಾಗಿಯೆ ಯಶೋಧರನನ್ನು ಉಭಯ ಸಂಕಟಕ್ಕೆ ಸಿಕ್ಕಿಸುತ್ತಾಳೆ. ಆ ಹಿಟ್ಟಿನ ಕೋಳಿಯಲ್ಲಿ ಸೇರಿದ್ದ ಬೆಂತರ ಕೋಳಿಯಂತೆ ಕೂಗಿದ್ದನ್ನು ಕೇಳಿದ ಯಶೋಧರ ತಾನೇ ಏಟು ತಿಂದಂತೆ ಯಶೋಧರ **'ಕಿಟ್ಟಿನ ಮೃತಮತಿಯಿಂದ ಹಾ**

ಕೆಟ್ಟೆನು ಜನನಿಯ ನಯದಿಂದ'. ಎಂದು ಹೇಳಿಕೊಳ್ಳುತ್ತಾನೆ. ಈಗ ಅಮೃತಮತಿ ಮತ್ತು ತಾಯಿ ಇಬ್ಬರೂ ಯಶೋಧರನಿಗೆ ಕಾಮನಿ-ಶ್ರೀಕಾಂತರಾಗಿದ್ದಾರೆ.

ಈ ದೃಷ್ಟಿಯಲ್ಲಿ 'ಮುಕ್ತಿ' ಕಾದಂಬರಿ ಕೊನೆಯ ಘಟ್ಟಕ್ಕೆ ಗೌರೀಶನ ಮುಕ್ತಿಗೆ ಒಂದು ಜೀವಂತ ನಿದರ್ಶನವಿದ್ದರೂ (ಡಾಲಿಯ ಸಾಮೀಪ್ಯ ಅವಳ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಗು ಅದಕ್ಕೆ ಸಂಕೇತವಾಗುತ್ತದೆ.) ಕಾಮಿನಿ ಮತ್ತು ಶ್ರೀಕಾಂತರು ಅವನ ಮನಃ ವಲಯವನ್ನಾವರಿಸಿದ್ದರು. ಯಶೋಧರನಿಗೂ ಕೂಡ ಚಂದ್ರಮತಿ ಸಾಮಿಪ್ಯದಿಂದ ಮುಕ್ತಿಯ ಪ್ರಶ್ನೆಯೇ ಇಲ್ಲವಾಗಿದೆ. ಬಿಡುಗಡೆಯ ಸೋಪಾನವಾದ ವೈರಾಗ್ಯವನ್ನು ಸ್ವೀಕರಿಸಬಹುದಿತ್ತು, ಆದರೆ ಅವನೂ ಕೂಡ ಚಂದ್ರಮತಿ ಬಲೆಯಲ್ಲಿ ಬಿದ್ದಿದ್ದಾನೆ.

ದುರ್ಬಲ ಎನ್ನುವುದಾದರೆ ಸಾಂಪ್ರದಾಯಿಕ ಮತ್ತು ಆಧುನಿಕತೆಗೆ ಸಿಕ್ಕ ಪ್ರತಿಯೊಂದು ಸೂಕ್ಷ್ಮ ಮನಸ್ಸಿನ ವ್ಯಕ್ತಿಯೂ ದುರ್ಬಲನಾಗಿರುತ್ತಾನೆ. ಗೌರೀಶ, ಯಶೋಧರರಿಬ್ಬರೂ ದುರ್ಬಲ ವ್ಯಕ್ತಿಗಳಾಗಿ ಗೋಚರಿಸುತ್ತಾರೆ.

'ಬದಗುಳಿಗನ ತೋಳ್ ಮುಟ್ಟಿದ
ಸುದತಿಯೊಳಂ ಪಾಗದಂತೆ ಕೆಟ್ಟುದು ಪುಳಿಮು
ಟ್ಟಿದ ದುಗ್ಧದಂತೆ ನೀರ್ ಮು
ಟ್ಟಿದ ಜೇನೆಯ್ಯಂತೆ ಪತಿಗೆ ಶಯ್ಯಾತಳದೊಳ್'

'ಕಾಮಿನಿ ನನ್ನನ್ನು ಬಹಳ ಪ್ರೀತಿಸಿದಳು ಮೊದಲು ಅವಳು ಎಷ್ಟೋ ಸಲ ನನ್ನನ್ನು ಆಲಂಗಿಸಿ ಮುದ್ದಿಸಿದ್ದಳು ಕೂಡ......'

ಇದರಲ್ಲಿ ಎಷ್ಟು ಸತ್ಯ ಎಷ್ಟು ಅಸತ್ಯ? - ಇಂಥ ಒಂದೆರಡು ವಾಕ್ಯಗಳಲ್ಲಿ ಹಿಡಿದಿಡುವ ವಿಷಯವೇ ಅದು? ಯಶೋಧರನಿಗೆ ಅಮೃತಮತಿಯ ಮೇಲೆ ಹಾಗು ಗೌರೀಶನಿಗೆ ಕಾಮಿನಿಯ ಮೇಲೆ ಕಪ್ಪು-ಬಿಳುಪಿನ ನಂಬಿಕೆಯನ್ನು ತಾಳಿದ್ದಾರೆ. ಅಮೃತಮತಿ, ಕಾಮಿನಿಯರು ಬೇರೆಯವರೊಡನೆ 'ಅನೈತಿಕ' ಸಂಬಂಧ ಹೊಂದಿದ್ದರೂ ಯಶೋಧರ, ಗೌರೀಶನ ಮನಸ್ಸಿನ ಅಂತರಾಳದಲ್ಲಿ ಬೇರೂರಿಬಿಟ್ಟಿದ್ದಾರೆ. ಅವರಿಲ್ಲದೆ ಇವರಿಲ್ಲ ಬದುಕು ಕೂಡ ಶೂನ್ಯ ಎಂದು ಭಾವಿಸುತ್ತಾರೆ. ಯಶೋಧರನ ಮನಸ್ಸು ಹೃದಯ ಭವಭವಗಳಲ್ಲಿ ಬೆಂದರೂ ಅವನ ಆತ್ಮ

'ಇರ್ದಳೊ ಮೇಣ್ ಬರ್ದಳೊ ಮೇಣ್
ಅರ್ದಳೊ ಮೇಣ್ ಅಪ್ಪವಂಕನೊಳ್ ಕಪ್ಪೆ ಅದೆಂ
ತಿರ್ದಳೊ ಕಾಣೆನದೇಕೆನು
ತಿರ್ದುದು – ಕೋಟಲೆಗೆ ಕೋಡು ಮೂಡಿದ ತೆರದಿಂ'

''ಡಾಲಿಯಿಂದ ನನ್ನ ವ್ಯಕ್ತಿತ್ವದ ಯಾವುದೋ ಒಂದು ಭಾಗ ಸಂಪೂರ್ಣ ತೃಪ್ತವಾಗುವುದು. ಆದರೂ ನನ್ನ ಮೂಲಭೂತ ಕೇಂದ್ರವನ್ನು ಅವಳು ಮುಟ್ಟಲಾರಳೆಂದೆನಿಸುವುದು.... ನೀನೇ ಬೇಕು..... ನೀನೇ ಬೇಕು,' ಎಂದು ಅವಳಿಗೆ ನನ್ನ ಆತ್ಮ ಹೇಳಲಾರದು... ಯಾಕೆ?''

.... ಕಾಮಿನಿಯು ನನ್ನನ್ನು ತುಳಿದು, ಹರಿದು ಚಿಂದಿ ಮಾಡಿ ಒಗೆದರೂ ಇನ್ನೂ ನಾನು ಅವಳಿಗೆ ಹೇಳಬಲ್ಲೆ 'ನೀನೇ ಬೇಕು, ನೀನೇಬೇಕು' ಯಾಕೆ?

ಮೇಲಿನ ಉದ್ಗಾರಗಳನ್ನು ನೋಡಿದಾಗ ಯಶೋಧರ, ಗೌರೀಶರ ಮನಸ್ಸಿನ

ತಳಮಳವನ್ನು ಹೊರ ಹಚ್ಚಬಹುದು. ಗೌರೀಶನಿಗೇನೋ ಡಾಲಿಯ ಸಾಮಿಪ್ಯದಿಂದ ಬಹುಮಟ್ಟಿಗೆ ಅವನ ಬದುಕು ಹಸನಾಗುವ ಹಾದಿಯಲ್ಲಿದೆ. ಆದರೆ ಯಶೋಧರನಿಗೆ ಆ ಪ್ರಶ್ನೆಯೇ ಇಲ್ಲವೆನ್ನಬಹುದು.

'ಮಾಗುವಿಕೆ'ಯ ಅಂಶವನ್ನು ಈ ಎರಡೂ ಕೃತಿಗಳಲ್ಲಿ ಗುರುತಿಸಬಹುದು. ಕಾಮಿನಿ, ಗೌರೀಶ ಬದುಕಿನಲ್ಲಿ ಸ್ವಲ್ಪ ಮಟ್ಟಿಗಾದರೂ ಪಕ್ವಗೊಳ್ಳುತ್ತಾರೆ. ಅಮೃತಮತಿ ಏಕಮುಖವಾಗಿಯೇ ತನ್ನ ಅವನತಿಗೆ ತಾನೇ ಕಾರಣಳಾಗುತ್ತಾಳೆ.

ಕಾಮಿನಿ, ಗೌರೀಶ, ಅಮೃತಮತಿ, ಯಶೋಧರ ಇವರು ಮುಂದಾಲೋಚನೆಯಿಲ್ಲದೆ ಆ ಕ್ಷಣದಲ್ಲಿ ಕೈಗೊಳ್ಳುವ ನಿರ್ಧಾರಗಳು ಅವರಿಗೆ ಮುಖ್ಯವಾಗುತ್ತವೆ. ಗೌರೀಶ, ಯಶೋಧರರಿಗೆ ಆ ನಿರ್ಧಾರಗಳು ಜೀವನದಲ್ಲಿ ಸುಗಮ ದಾರಿಯನ್ನು ಹುಡುಕಿಕೊಟ್ಟರೂ ಕಾಮಿನಿ ಮತ್ತು ಅಮೃತಮತಿಯರಿಗೆ ಮತ್ತು ಇವರ ಭಾವನೆಗಳನ್ನು ಅವು ಕೊಲ್ಲುತ್ತವೆ.

'ಒಲವಾದೊಡೆ ರೂಪಿನ ಕೋಟಲೆಯೇವುದೋ
ಇಂದು ಎನಗಾತನೆ ಕುಲ ದೈವಂ ಕಾಮದೇವ'
'ಮಿಕ್ಕಗಂಡರ್ ಸವಸೋದರರೆಂದು
ತಿಳಿಪಿದಳ್ ನಂಬುಗೆಯಂ'

ಅಮೃತಮತಿಯ ಮನಸ್ಸು ಪರಿವರ್ತನೆಯ ಹಾದಿಯನ್ನು ಹಿಡಿಯುವುದೇ ಇಲ್ಲ. ಕಾಮಿನಿಯಾದರೂ ಗಂಗಾಲ, ಆಚಾರ್ಯರೊಡನೆ ಸಂಬಂಧ ಬೆಳೆಸಿ ಬದುಕಿನಲ್ಲಿ 'ಸಹಾನುಭೂತಿ'ಯನ್ನು ಕಂಡುಕೊಳ್ಳುತ್ತಾಳೆ. ಈ ದೃಷ್ಟಿಯಿಂದ ಕಾಮಿನಿಗೆ ಮುಕ್ತಿಯ ಬಾಗಿಲುಗಳು ತೆರೆಯದಿದ್ದರೂ, ಕಿಟಕಿಗಳಾದರೂ ತೆರೆಯುತ್ತವೆ.

ಆದರೆ ಅಮೃತಮತಿಗೆ ಮುಕ್ತಿಯ ಬಾಗಿಲುಗಳೇ ಅಲ್ಲ ಒಂದು ಕಿಟಕಿಯಾದರೂ ತೆರೆಯುವುದಿಲ್ಲ. ಆದ್ದರಿಂದ ಕಾಮಿನಿಗಿಂತ ಅಮೃತಮತಿಯೇ ಬದುಕಿನಲ್ಲಿ ಹೆಚ್ಚು ನೋವು, ದುಃಖವನ್ನು ಅನುಭವಿಸುತ್ತಾಳೆ. ಕೊನೆಯ ಘಟ್ಟದಲ್ಲಿ ಕಾಮಿನಿ ಮತ್ತು ಅಮೃತಮತಿಯರಿಬ್ಬರೂ ಓದುಗರ ಎದೆಯ ಕದವನ್ನು ತಟ್ಟುವಲ್ಲಿ ಯಶಸ್ವಿಯಾಗುತ್ತಾರೆ.

ಮುಕ್ತಿಯನ್ನು ಓದುವ ಓದುಗ ಕಾಮಿನಿಯ ಬಗ್ಗೆ ಅಂತಿಮವಾಗಿ ಸಹಾನುಭೂತಿಯನ್ನು ತೋರಿಸಬಲ್ಲನು. ಆದರೆ ಯಶೋಧರ ಚರಿತೆಯಲ್ಲಿ ಅಮೃತಮತಿಯ ಬಗ್ಗೆ ಕನಿಕರ ತೋರಿಸುವುದಕ್ಕೆ ಅವನ ಮನಸ್ಸು ಹಿಂಜರಿಯುತ್ತದೆ. ಏಕೆಂದರೆ ಯಶೋಧರ ಚರಿತೆಯಲ್ಲಿ ಅಮೃತಮತಿ ಮತ್ತು ಅಷ್ಟವಂಕರ ದೈಹಿಕ ಸಂಪರ್ಕದಿಂದ ಅಲ್ಲಿ ನೈತಿಕ-ಅನೈತಿಕತೆಯ ಪ್ರಶ್ನೆ ಏಳುತ್ತದೆ.

ಧರ್ಮ ಮತ್ತು ನೈತಿಕ ಸಂಸ್ಕೃತಿಗಳು ಮುಖ್ಯವಾಗಿದ್ದ ಆ ಕಾಲದಲ್ಲಿ ಅಮೃತಮತಿ ಮಾಡಿದ್ದು ತಪ್ಪಾದರೆ, ಹೆಣ್ಣಿನ ಮನಸ್ಸಿನ ಮೂಲಭೂತವಾದ ಭಾವನೆಗಳಿಗೆ ಸ್ಥಳವಿಲ್ಲವಾಗುತ್ತದೆ. ಇದಕ್ಕೆ ವಿರುದ್ಧವಾಗಿ ಆಧುನಿಕ ಸಂವೇದನೆಯನ್ನು ತನ್ನ ಜೀವನದೊಳಗೆ ಕರಗತ ಮಾಡಿಕೊಂಡಿದ್ದ ಕಾಮಿನಿ ಮಿತಿ ಇಲ್ಲದ ಸ್ವತಂತ್ರ್ಯದಿಂದ ಅಂತರಂಗದ ಮೂಲಧರ್ಮಕ್ಕೆ ತನಗೆ ತಾನೇ ಮೋಸ ಮಾಡಿಕೊಳ್ಳುತ್ತಾಳೆ. ಭೂತಕಾಲದ ಸಂವೇದನೆಯ ಅಮೃತಮತಿಯೇ ಆಧುನಿಕ ಸಂವೇದನೆಯ ಕಾಮಿನಿಗಿಂತ ಸ್ವತಂತ್ರಳೇ ? ಎಂಬ ಪ್ರಶ್ನೆ ಹುಟ್ಟುತ್ತದೆ. ಡಾಲಿ-ಗೌರೀಶರ

ಸಂಬಂಧ ಅನೈತಿಕ ಸಂಬಂಧವಾದರೂ-ನೈತಿಕತೆಯನ್ನು ನಿಶ್ಚಯಿಸಬೇಕು. ಹಾಗೆ ನೋಡಿದರೆ ಯಶೋಧರ-ಅಮೃತಮತಿ, ಗೌರೀಶ-ಕಾಮಿನಿ, ಶ್ರೀಕಾಂತ-ಮೇರಿ ಇವರೆಲ್ಲಾ ಮಧುರವಾದ ಬಾವನೆಗಳ ಹುಡುಕಾಟದಲ್ಲಿ ಸಿಕ್ಕಿ ನೀರಿಲ್ಲದ ಬಾವಿಯಲ್ಲಿ ಬಿದ್ದು ಒದ್ದಾಡಿದವರೇ ಆಗಿದ್ದಾರೆ.

ಡಾಲಿ, ಸತ್ಯೇಂದ್ರ, ಸುಶೀಲೆ ಸ್ವಲ್ಪಮಟ್ಟಿಗೆ ಸುಂದರವಾದ ಭಾವನೆಗಳನ್ನು ಹೊಂದಿದವರು. ಕಾಮಿನಿ-ಗೌರೀಶ ಯೌವ್ವನದಲ್ಲಿ ಬಣ್ಣಬಣ್ಣದ ಕನಸುಗಳನ್ನು ಕಾಣುತ್ತಾ ಬದುಕಿನ ಅನುಭವಗಳು ಅವರಿಗೆ ಅರಿವಾಗುವುದೇ ಇಲ್ಲ.

ಅಮೃತಮತಿ, ಯಶೋಧರ, ಅಷ್ಟವಂಕರು ಬದುಕಿನ ಎಲ್ಲಾ ಅನುಭವಗಳನ್ನು ಪಡೆದೂ ಕೂಡ ಅಂತಿಮ ಘಟ್ಟದಲ್ಲಿ ತಮ್ಮ ಗಾಯಗಳಿಗೆ ತಾವೇ ಬರೆ ಎಳೆದುಕೊಳ್ಳುತ್ತಾರೆ.

ಗೌರೀಶ, ಡಾಲಿಯ ವ್ಯಕ್ತಿತ್ವದಲ್ಲಿ ಸುಂದರವಾದ ಬದುಕನ್ನು ಕಾಣುತ್ತಾನೆ. ಅಮೃತಮತಿಗೆ ಆಸಾಧ್ಯತೆಗಳೇ ಒದಗಿಬರುವುದಿಲ್ಲ. ಆದ್ದರಿಂದ ನನಗೆ ತಿಳಿದಮಟ್ಟಿಗೆ ಅಮೃತ ಮತಿ-ಯಶೋಧರನಿಗೆ ಮನಸಿಜ-ವಿಧಿ ಹೇಗೆ ಕಾರಣವಾಗಿತ್ತೋ, 'ಮುಕ್ತಿ'ಯ ಗೌರೀಶ, ಕಾಮಿನಿ, ಶ್ರೀಕಾಂತರಿಗೆ ಅಷ್ಟೇ ಪ್ರಭಾವವನ್ನು ಬೀರುತ್ತವೆ. ಅಂತಿಮವಾಗಿ 'ಮುಕ್ತಿ' ಕಾದಂಬರಿ ಗೌರೀಶನ ಅಂತರಾಳದಿಂದ ಹೇಳುತ್ತಿರುವ ಅನುಭವಗಳಾದರೆ, ಜನ್ನನ 'ಯಶೋಧರ ಚರಿತೆ'ಯು ಯಶೋಧರ ಮತ್ತು ಚಂದ್ರಮತಿಯರು ಪಟ್ಟ ಪಾಡೆಲ್ಲವನ್ನೂ ಮಾರಿದತ್ತನಿಗೆ ವಿವರಿಸುತ್ತಾರೆ. ಇದರಿಂದ ಪ್ರಜ್ಞಾಪ್ರವಾಹದ ಸಣ್ಣ ಪುಟ್ಟ ಹೊಳಹುಗಳು ಯಶೋಧರ ಚರಿತದಲ್ಲಿ ಬರುತ್ತದೆ.


ಒಟ್ಟಿನಲ್ಲಿ ಅಂದಿನ ಕಾಲದ ಯಶೋಧರ, ಅಮೃತಮತಿ, ಅಷ್ಟವಂಕ, ಚಂದ್ರಮತಿ ಇವರು ಧರ್ಮದ ಪರಿಧಿಯಲ್ಲಿ ತಮ್ಮ ಬದುಕಿನಲ್ಲಿ ಕಂಡುಕೊಂಡ ಪರಿವರ್ತನೆಗಳೇನು? ತಮ್ಮ ಮೂಲ ಮನಃ ಸ್ಥಿತಿಯ ಭಾವನೆಗಳಿಗೆ ಸ್ಪಂದಿಸಿದ ಬಗೆ ಹೇಗೆ? ಮನಸ್ಸಿನ ಮೂಲಧರ್ಮಕ್ಕೆ ಸ್ಪರ್ಶಿಸಿದ ರೀತಿ ಎಂತಹದು? ಎಂಬ ಪ್ರಶ್ನೆಗಳನ್ನು ಈ ಶತಮಾನದ ತಾಂತ್ರಿಕ ಬದುಕಿನೊಂದಿಗೇ ಅಲ್ಲದೆ, ಗೌರೀಶ, ಕಾಮಿನಿ, ಶ್ರೀಕಾಂತ, ಡಾಲಿ ಮುಂತಾದ ಆಧುನಿಕ ಸಂವೇದನೆಯ ಮನಸ್ಸುಗಳೊಂದಿಗೆ ಸಾದೃಶ್ಯ ಮಾಡಿ ನೋಡಿದಾಗ, ಎಲ್ಲಾ ಕಾಲದಲ್ಲೂ ಮಾನವ ಕುಲಕ್ಕೆ ಕೆಲವು ಮೂಲಭೂತ ಸಮಸ್ಯೆಗಳು ಇದ್ದೇ ಇರುತ್ತವೆ. ಅದು ಜನ್ನ ಹೇಳುವ 'ವಿಧಿ 'ಯಿಂದಲೋ ಅಥವಾ ದೇಸಾಯಿ ಅವರು ಹೇಳುವ ಮನುಷ್ಯನ ದುರ್ಬಲತೆಯಿಂದಲೋ ಅರಿಯುವುದಿಲ್ಲ. ಒಟ್ಟಾರೆ ಹೇಳಬೇಕೆಂದರೆ ಶಾಂತಿನಾಥ ದೇಸಾಯಿ ಮತ್ತು ಜನ್ನ ಇವರಿಬ್ಬರೂ ಮನಸ್ಸಿನ ಮೂಲಭೂತವಾದ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ.

ಅಡಿ ಟಿಪ್ಪಣಿಗಳು

1. ಎಚ್.ಎಸ್.ರಾಘವೇಂದ್ರರಾವ್‌ರವರ ಬೋಧನೆಯ ಕೆಲವು ಟಿಪ್ಪಣಿಗಳು.
2. ಮುಕ್ತಚಂದ - ಸಂ. ಡಿ.ವಿ. ಪ್ರಹ್ಲಾದ್
3. ಜನ್ನ ಒಂದು ಅವಲೋಕನ - ಗಿರಡ್ಡಿ ಗೋವಿಂದರಾಜ
4. ಮುಕ್ತಿಯಲ್ಲಿ ವೈಯಕ್ತಿಕ ದರ್ಶನ - ಜಿ.ಎಸ್.ಆಮೂರ್
5. ಕಾದಂಬರಿ ವಸ್ತು - ತಂತ್ರ - ಗಿರಡ್ಡಿ ಗೋವಿಂದರಾಜ
6. ಯಶೋಧರ ಚರಿತೆಯ ಮುನ್ನುಡಿ - ರಾಘವಾಚಾರ್
7. ಜನ್ನ ಒಂದು ಅಧ್ಯಯನ - ಶಿವಕುಮಾರ್

ಸೈಬರ್ ಕಣ್ಣಿನ ಹುಡುಗ

ಹರೀಶ್ ಕೇರ




ಸೈಬರ್ ಕಣ್ಣಿನ ಹುಡುಗನ ನೋಟ
ಡಾಲರ್ ಕಣ್ಣಿನ ಗಿಡುಗನ ಮೇಲೆ

ಕೈಗಳು ಕೀಗಳ ಕುಟ್ಟುತ್ತ
ಮೌಸನು ಹಿಡಿದತ್ತಿತ್ತ, ತಿರುಗಿಸುವುದೇ ಕೆಲಸ
ಕಾಣುತ್ತಿದೆ ಮಾನೀಟರು ಮೇಲೆ
ದಿಗ್ದಿಗಂತಗಳ ಲೀಲೆ, ಎಲ್ಲಿಂದಲೋ ಬಂದೋಲೆ

ಕ್ಷಣವೂ ನಿಲ್ಲದು ಚಿತ್ತವೆಲ್ಲಿಯೂ
ಕ್ಷಣದ ಶತಾಂಶದ ವೇಗದ ಚಲನೆ
ದೂರದ ತೀರದ ಸುದ್ದಿಗಳು
ಲೆಕ್ಕಾಚಾರದ ಬುದ್ಧಿಗಳು
ತೀರದ ತೋರದ ದಾಹಗಳು
ಎಳೆಯುವ ಸೆಳೆಯುವ ಮೋಹಗಳು

ಕ್ಲಿಕ್ಕಿಸಿದರೆ ಕಿಕ್ ಹೊಡೆದಂತೆ, ಪರದೆಯ ಮೇಲೆ
ಅರಿವೇ ಇಲ್ಲದ ಇರವು[illegible]
ವಾತಾಯನದಲಿ ಮೆಲ್ಲನೆ ಕರೆ[illegible]
ವಾತ್ಸಾಯನನ ಭಂಗಿಗಳು



ಇಂಟರ್‌ನೆಟ್ಟಲಿ ಏರುವನು
ವೆಬ್‌ಸೈಟುಗಳಲಿ ಜಾರುವನು
ಡಾಲರ್ ಕಣ್ಣಿನ ಗಿಡುಗನ ಹುಡುಕಿ
ಸೈಬರ್ ಕಣ್ಣಿನ ಹುಡುಗ

* * *

ಅಂಗಳದಲ್ಲಿ ತುಳಸಿಯ ಗಿಡಕೆ
ವೃಂದಾವನವೊಂದು
ನಿತ್ಯವುದೀಪವ ಹಚ್ಚಿಡುವಳು
ಅಮ್ಮನದಕೆ ಬಂದು

ಕೋಳಿ ಮರಿಗಳಾಡುತ್ತಿವೆ ಹೊರಗೆ
ಹೇಂಟೆ ಎಲ್ಲೊ ಮರೆಯಲ್ಲಿ
ಗೂಡಿಗೆ ಕರೆದು ತುಂಬುವ ಸಮಯ
ಯಾರೂ ಇಲ್ಲ ಅಲ್ಲಿ

ಬಂದೇ ಬಂತು, ಗಿಡುಗ
ಎರಗಿತು ಮರಿಗಳಿಗೆ
ಒಡಿದು ಉಗುರಿನಲಿ ಹೊತ್ತೊಯ್ಯುವುದು
ಸಿಕ್ಕಿದ ಮರುಗಳಿಗೆ

ವೃಂದಾವನಕೆ ದೀಪ ಹಚ್ಚಲು
ಗಿಡುಗನ ಓಡಿಸಿ ಮರಿಗಳ ಮುಚ್ಚಲು
ಅಮ್ಮ ಯಾಕೋ ಬರಲಿಲ್ಲ
ಸೈಬರ್ ಕಣ್ಣಿನ ಹುಡುಗನಿಗೂ
ಗಿಡುಗ ಬಂದದ್ದು ತಿಳಿಯಲೆ ಇಲ್ಲ



ಸ್ವರ್ಣ ಕಮಲದ 'ದ್ವೀಪ'- ಆಡದ ಮಾತುಗಳ ಅಲೆಗಳು

■ ಬಂದಗದ್ದೆ ರಾಧಾಕೃಷ್ಣ

2001 ರ ಸ್ವರ್ಣಕಮಲ ಪಡೆದ 'ದ್ವೀಪ' ದ ಚಿತ್ರಕಥೆ ಈ ಬರಹಕ್ಕೆ ಕಾರಣ. ನಾ. ಡಿಸೋಜರ ಕಾದಂಬರಿ ಹೇಗಿತ್ತು, ಚಿತ್ರನಿರ್ದೇಶಕರಾದ ಗಿರೀಶ್ ಕಾಸರವಳ್ಳಿಯವರು ಹೇಗೆ ಬದಲಿಸಿ ಕೊಂಡರು ಎಂಬ ವಿಚಾರವನ್ನು ಈ ಬರಹದಲ್ಲಿ ಚರ್ಚಿಸುವುದಿಲ್ಲ. ದೇಶದ ಪ್ರಗತಿಗಾಗಿ ಅಣೇಕಟ್ಟು ಕಟ್ಟಲಾಗುತ್ತದೆ. ತೋಟ, ಗದ್ದೆ ಇದ್ದವರು ಪರಿಹಾರ ತೆಗೆದುಕೊಂಡು ಊರು ಬಿಡುತ್ತಾರೆ. ಮುಳುಗಡೆಯನ್ನು ಸಂಘಟಿತರಾಗಿ ಪ್ರತಿಭಟಿಸುವುದಾಗಲೀ, ಊರು ಬಿಡುವ
ವರು ಇದಕ್ಕೇ ದುಃಖಿಸುವುದಾಗಲಿ ಇಲ್ಲ. ಆದರೆ ಒಬ್ಬ ಅಜ್ಜ ಮಾತ್ರ, ಮನೆ ಮುಳುಗಿದರೂ
ಅಡ್ಡಿ ಇಲ್ಲ, ಊರು ಬಿಡನೆಂಬ ಹಠದಿಂದ ಮಗ, ಸೊಸೆಯೊಂದಿಗೆ ಮುಳುಗಡೆ ಆಗುವ
ಪ್ರದೇಶದಲ್ಲೇ ಇದು ತನ್ನ ನೇಮ- ದೇವರ ಸೇವೆ ನಡೆಸುತ್ತಲೇ ಏರುವ ಹಿನ್ನೀರಲ್ಲಿ ಮುಳುಗಿ
ಸಾಯುವ ದಾರುಣ ಕತೆ ಒಂದು ಹಂತದ್ದು.

ಅಜ್ಜನ ಮಗ, ಸೊಸೆಯರ ನಡುವೆ, ಬಾಂಬೆಯಲ್ಲಿದ್ದು ಅಲ್ಲೇನೋ 'ಭಾನಗಡಿ' ಮಾಡಿ
ಕೊಂಡು ಊರಿಗೆ ಬಂದ ಕೃಷ್ಣ ಈ ಕುಟುಂಬಕೆ ಸಹಾಯ ಮಾಡಲು ಬರುವುದು, ತನ್ನ
ಹೆಂಡತಿಗೂ ಈ ಹುಡುಗನಿಗೂ ದೈಹಿಕ ಸಂಬಂಧಗಳು ಉಂಟಾಗಿರಬಹುದೇ ಎಂಬ
ಅನುಮಾನಗಳು ಗಣಪಯ್ಯನಿಗೆ ಶುರುವಾಗಿ, ಆತ ಹೆಂಡತಿಯಿಂದ ದೂರಾಗುವುದು,
ಗಂಡನ ಮನದಲ್ಲಿ ಸಂಶಯ ಮನೆಮಾಡಿದೆ ಎಂದು ಹೆಂಡತಿ ತಾನು ತೊಳಲಾಡುವುದು -
ಹೀಗೆ ಗಂಡ ಹೆಂಡಿರು ಒಂದೊಂದು ದ್ವೀಪದಂತಾಗುವುದು ಎರಡನೇ ಹಂತ.

ಬಿಟ್ಟರೆ ಈ ಕತೆಯಲ್ಲಿ ಗಿರೀಶರು ಅನೇಕ ಸೂಕ್ಷ್ಮಗಳನ್ನು ತರುತ್ತಾರೆ. ಒಮ್ಮೆ 'ನಾಗಿ' ಕೇಳು
ತ್ತಾಳೆ - "ಊರು ಬಿಡಲ್ಲ ಬಿಡಲ್ಲ ಅಂತ ಮಾವನವರಿಗೆ ಏಕೆ ಹಠ ? ನಾವು ಹೆಂಗಸರು ಹುಟ್ಟಿ
ಬೆಳೆದ ತೌರು ಮನೆ ಬಿಟ್ಟು ಏನೂ ಪರಿಚಯವಿಲ್ಲದ ಗಂಡನ ಮನೆಗೆ ಬರೋದಿಲ್ವಾ ?"

ಒಂದು ಜಾಗ ಬಿಟ್ಟು ಮತ್ತೊಂದು ಜಾಗಕ್ಕೆ ಬದುಕಲು ಹೋಗುವ ಕ್ರಿಯೆ ಸ್ವಾಭಾವಿಕ
ವಾಗಿಯೇ ಬದುಕಲ್ಲಿ ಇದೆ.

ಘಟ್ಟದ ಕೆಳಗಿನಿಂದ ಕೃಷಿ ಕೆಲಸಕ್ಕಾಗಿ ಒಂದು ವರ್ಗದ ಜನ ಘಟ್ಟದ ಮೇಲೆ ಬರುವುದು ಬಹು ಹಿಂದಿನಿಂದ ನಡೆದು ಕೊಂಡು ಬಂದಿದೆ. ಕೆಲವರು ವ್ಯವಹಾರದಲ್ಲಿ ಕೈ ಸೋತು ಜಮೀನು ಮನೆ ಮಾರಿ, ಹೊಸ ಬದುಕಿಗಾಗಿ ಊರು ಬಿಡುವುದು ಉಂಟು. ಬ್ರಿಟೀಷರು, ಮುಸ್ಲಿಮರು, ವ್ಯಾಪಾರ, ರಾಜ್ಯ ದಾಹಗಳಿಂದ ಊರು ಬಿಟ್ಟು ನಮ್ಮಲ್ಲಿಗೆ ಬಂದು ನೆಲೆಸಿದ್ದು ಇತಿಹಾಸದಲ್ಲಿಯೇ ಇದೆ. ಇತ್ತೀಚಿಗೆ ನೌಕರ ವರ್ಗ ಊರು ಬಿಡುತ್ತಲೇ ಇರಬೇಕಾಗಿದೆ. ನೌಕರವರ್ಗ ಊರು ಬಿಡುವುದರ ಹಿಂದೆ ಹಣಕಾಸಿನ ಭದ್ರತೆಯಿದೆ. ಮುಳುಗಡೆಯಿಂದ ಊರು ಬಿಡುವಾಗ ಹೀಗಿಲ್ಲ ಎಂಬ ಪ್ರಶ್ನೆ ಏಳಬಹುದು. ಇಲ್ಲೂ ಹಣದ ಲಾಭ ಮಾಡಿಕೊಂಡು ದುಃಖಿಸದೇ ಊರು ಬಿಟ್ಟವರಿಲ್ಲವೇ? ಗಣಪಯ್ಯನ ಕುಟುಂಬಕ್ಕೆ ಪರಿಹಾರ ಸಿಗದ ಕಾರಣ ಊರು ಬಿಡಲಿಲ್ಲ ಎಂದು ಹೇಳುವಂತೆಯೂ ಇಲ್ಲ. ಇದು ಈ ಕುಟುಂಬದ ಅಜ್ಜನ ಹಠ. ಹೀಗಾಗಿ ದ್ವೀಪ ಚಿತ್ರದಲ್ಲಿ ಮುಳುಗಡೆ ಕೇವಲ ಒಂದು ಕುಟುಂಬದ ವ್ಯಥೆಯಾಗಿ ಮಾತ್ರ ಕಾಣಿಸಿಕೊಂಡಿದೆ. ಎರಡನೇ ಹಂತದಲ್ಲಿ ಮಾನಸಿಕ ದ್ವೀಪವಾಗುವ ಚಿತ್ರಣ ಇರುವುದರಿಂದ ಚಿತ್ರ, ಕುಟುಂಬವನ್ನೂ ಸೀಳಿಕೊಂಡು ವ್ಯಕ್ತಿಗಳಲ್ಲಿ ಮಾತ್ರ ಕೇಂದ್ರಿತವಾಗುತ್ತದೆ. ಮನುಷ್ಯ ಸಂಬಂಧಗಳ ತಾಕಲಾಟ ಮನೆಯೊಳಗೆ, ಪ್ರಕೃತಿಗೆ ಮನುಷ್ಯನ ಅಡ್ಡಿಯಿಂದ ಗುಡ್ಡಗಳೇ ದ್ವೀಪವಾಗುವ ಪರಿ ಮನೆಯ ಹೊರಗೆ - ಹೀಗೆ ಚಿತ್ರ ನಮ್ಮನ್ನೂ ಕಾಡುತ್ತದೆ.

ಈ ದೇಶಕ್ಕೆ ಅಣೇಕಟ್ಟುಗಳು ಬೇಕೇ ಬೇಡವೇ ಎಂಬುದೇ ಇಂದು ದೊಡ್ಡ ಚರ್ಚೆಯಾಗಿದೆ. ಈ ಹಿನ್ನೆಲೆಯಿಂದ ದ್ವೀಪ ಚಿತ್ರದ ಮೂಲಕ ನಮಗೆ ಸಿಗುವ ಉತ್ತರ ಬೇಕೆಂಬುದೇ ಆಗಿದೆ. ಡ್ಯಾಮಿನಿಂದ ನೀರುಕ್ಕುವ ಸದ್ದು ಕೇಳಿದ ನಾಗಿ ನೀರು ಇನ್ನೂ ಮೇಲೆ ಬರಲಾರದೆಂದು ತಿಳಿಯುತ್ತಾಳೆ. ಅಲ್ಲದೇ ನೀರು ಉಕ್ಕಿ ಹರಿಯುವರೀತಿಯನ್ನು ನೋಡಿ ಆನಂದಿಸುತ್ತಾಳೆ. ಆ ಆನಂದ ಅಣೇಕಟ್ಟನ್ನು ಆದರಿಂದಾಗುವ ಪ್ರಗತಿಯನ್ನು ಒಪ್ಪಿಕೊಂಡ ಭಾವವನ್ನು ಸೂಚಿಸುತ್ತದೆ.

ಪೇಟೆಯಲ್ಲಿದ್ದ ಹಿನ್ನೆಲೆಯಿಂದ ಹಳ್ಳಿಗೆ ಬಂದ ನಾಗಿ ಮಾವನ 'ನೇಮ' ಊರು ಬಿಡಲಾರೆನೆಂಬ ಹಠವನ್ನು ಕಂಡು ಈ ಪರಿಸರದಿಂದ ತನಗೆ ಬಿಡುಗಡೆಯೇ ಇಲ್ಲವೇ? ಎಂಬರ್ಥದ ಪ್ರಶ್ನೆಯನ್ನು ಕೇಳುತ್ತಾಳೆ. ಆದರೆ ಈ ವಿಚಾರ ಸಿನೇಮಾದಲ್ಲಿ ಬೆಳವಣಿಗೆ ಹೊಂದುವುದಿಲ್ಲ.

ಅನ್ಯ ವಸ್ತುವಿನ ಬಗೆಗೆ ತುಂಟ ನೋಟ

ಘಟ ಶ್ರಾದ್ಧದಲ್ಲಿ ವೈದಿಕ ಬ್ರಾಹ್ಮಣ ಪರಿಸರವನ್ನು ಗಟ್ಟಿಯಾಗಿ ಹಿಡಿದ ಗಿರೀಶರಿಗೆ ಬೀಡಿ ಎಂಬುದು ಅಲ್ಲಿ ಅನ್ಯವಸ್ತು. ಹದಿಹರೆಯದ ವಯಸ್ಸಿನ ವೈದಿಕ ಹುಡುಗರು ಕದ್ದು ಬೀಡಿ ಸೇದಿ ಮೋಜು ಅನುಭವಿಸುವ ಪರಿಯನ್ನು ಸೆರೆ ಹಿಡಿಯುವಲ್ಲಿ ಗಿರೀಶರಿಗೆ ತುಂಟ ನೋಟವಿತ್ತು.

ತಾಯಿ ಸಾಹೇಬದ ನಮ್ಮ ಪರಿಸರಕ್ಕೆ ರೇಡಿಯೋ ಎಂಬುದು ಆನ್ಯ ವಸ್ತು. ರೇಡಿಯೋದಲ್ಲಿ ಮಾತುಗಳು ಹೇಗೆ ಬರುತ್ತೆ? ಮನುಷ್ಯರೇ ಸಣ್ಣ ರೂಪದಲ್ಲಿ ಆದರೊಳಗೆ ಇರುವರೆ? ಆದನ್ನು ನೋಡಲು ಎಷ್ಟು ಕಾತುರ? ಇದನ್ನೊಂದು ದೃಶ್ಯವನ್ನಾಗಿಯೇ ಮಾಡಿ, ತುಂಟ ದೃಷ್ಟಿ ಬೀರಿ ಗಮನ ಸೆಳೆಯುವುದು ಗಿರೀಶರ ನಿರ್ದೇಶನದ ವಿಶೇಷತೆ.

ದ್ವೀಪದಲ್ಲಿ ನೀರು, ಗುಡ್ಡಮರ, ಮಣ್ಣಿನ ನಡುವೆ ಸರ್ವೇಯರು ತರುವ ಟೆಲಿಸ್ಕೋಪು ಅನ್ಯವಸ್ತು. ಅದನ್ನು ಅಜ್ಜ ಮುಟ್ಟಿ ನೋಡಿ ಗೇಲಿ ಮಾಡುವುದು ತಮಾಷೆಯಾಗಿ ಕಂಡರೂ

ನಾಳೆ ನೀರು ಎಷ್ಟು ಮೇಲೆ ಬರಬಹುದೆಂಬ ಲೆಕ್ಕಾಚಾರದಲ್ಲಿ ಮುಂದೊದಗುವ ಆಪತ್ತನ್ನು ಸೂಚಿಸುವ ದೃಶ್ಯವಾಗಿ ಆ ಟೆಲಿಸ್ಕೋಪು ಒಂದು ಗಮನಾರ್ಹ ಅನ್ಯವಸ್ತುವಾಗಿ ನಮ್ಮನ್ನು ಕಾಡುತ್ತದೆ. ಮಳೆ ಚಿತ್ರದಲ್ಲಿ ಒಂದು ಪ್ರಮುಖ ಪಾತ್ರವಾಗುವುದು ಮತ್ತು ಕಾಣದ ಹುಲಿ ಪ್ರೇಕ್ಷಕನ ಮನಸ್ಸಲ್ಲಿ ಪಾತ್ರವಾಗುವುದು ಮತ್ತೊಂದು ವಿಶೇಷ.

ಆಡದ ಮಾತುಗಳ ಅಲೆಗಳು

ಕೃಷ್ಣನ ಬಗೆಗೆ ನಾಗಿಯ ಅಂತರಂಗದ ಭಾವಗಳೇನು ? ಅಣೆಕಟ್ಟುಗಳು ಬೇಕು ಎಂದು
ಸಿನೇಮಾ ಹೇಳುತ್ತಾ? ಗಣಪಯ್ಯನಿಗೆ ಪರಿಹಾರದ ವಿಚಾರದಲ್ಲಿ ಸರ್ಕಾರ ಹಾಗೆ ಹೇಳುತ್ತೆ
ಹೀಗೆ ಹೇಳುತ್ತೆ ಎಂದು ಮುಳುಗಡೆ ಅಧಿಕಾರಿ ಹೇಳುತ್ತಾನೆ. ಹಾಗಾದರೆ 'ಸರ್ಕಾರ' ಎಂದರೆ
ಯಾರು ? ಭಾರತದ ಪ್ರಮುಖ ನಗರ-ಬಾಂಬೆಯಲ್ಲಿದ್ದ ಕೃಷ್ಣ ದ್ವೀಪವಾಗುತ್ತಿರುವ ಈ
ಕಗ್ಗಾಡಿನ ಮೂಲೆಗೇಕೆ ಬಂದ? ದ್ವೀಪ ಚಿತ್ರ ನೋಡಿ ಮಂದಿರದಿಂದ ಹೊರಬಂದ ನಂತರ
ಅನೇಕ ಪ್ರಶ್ನೆಗಳು ನಮ್ಮ ಕಿವಿಯಲ್ಲಿ ಪಿಸುಗುಡಲು ಪ್ರಾರಂಭವಾಗುವುದೇ ಈ ಚಿತ್ರದ ವಿಶೇಷ.

ಪ್ರಕೃತಿಯಲ್ಲಿ ಭಯಾನಕ ಎನಿಸಿಕೊಂಡಿರುವ ಹುಲಿಯನ್ನು ಒಂದು
ಪ್ರತಿಮೆಯಾಗಿಟ್ಟುಕೊಂಡು ವಿವಿಧ ಮಜಲುಗಳಲ್ಲಿ ಇದನ್ನು ಬಳಸಿಕೊಂಡಿರುವ ರೀತಿ
ಪರಿಣಾಮಕಾರಿಯಾಗಿದೆ. ಹಸುವನ್ನು ತಿಂದು ತೇಗುವ ಕ್ರೂರಿಯಾಗಿ, ಗಂಡು, ಹೆಣ್ಣುಗಳ
ನಡುವೆ ಅನುಮಾನದ ಭೂತವಾಗಿ, ಕಣ್ಣಿಗೆ ಕಾಣದ ಅನುಭವಕ್ಕೆ ಮಾತ್ರ ಬರುವ 'ಸರ್ಕಾರ'ದ
ಕ್ರೂರ ವ್ಯವಸ್ಥೆಯಾಗಿ ಹುಲಿಯ ವಿಷಯ ಬಳಕೆಯಾಗಿದೆ.

ಧಾರಾಕಾರ ಮಳೆ, ಏರುವ ನೀರು, ಮುಳುಗುವ ಮನೆಗಳು, ದೂರವಾಗುವ
ಮನಗಳು-ಇವೆಲ್ಲಾ ನಮ್ಮ ಇಂದಿನ ಸ್ಥಿತಿಯನ್ನು ಸಮರ್ಥವಾಗಿ ಅಣಕ ಮಾಡುತ್ತವೆ.

ಹುಲಿ ಮನೆಯೊಳಗೆ ಬರಬಹುದೆಂಬ ಭೀತಿಯಿಂದ ನಾಗಿ ಮನೆ ಸುತ್ತಲೂ ಬೆಂಕಿ
ಹಾಕುವುದು, ಕೊಚ್ಚೆಯಿಂದ ನೀರು ಜಿಡಿಸಿ ಬೀಳುವ ಕೊಟ್ಟಿಗೆಯನ್ನು ಉಳಿಸಿಕೊಳ್ಳುವುದು
ಮುಂತಾದ ಮನುಷ್ಯ ಪ್ರಯತ್ನ, ದೇವರಿದ್ದಾನೆ, ಕೆಟ್ಟದ್ದೇನೂ ಆಗುವುದಿಲ್ಲ ಎಂದು ಕಂಬಳಿ
ಹೊದ್ದು ಮಲಗುವ ಗಣಪಯ್ಯನ ದೈವ ನಂಬಿಕೆ ಎರಡರ ನಡುವಿನ ಜಿಜ್ಞಾಸೆಯೊಂದಿಗೆ ಚಿತ್ರ
ಅಂತ್ಯಗೊಳ್ಳುವುದರಿಂದ ಇದುವರೆಗೂ ಪ್ರೇಕ್ಷಕನನ್ನು ಒಂದು ವಿಚಾರದಲ್ಲಿ ತಲ್ಲೀನಗೊಳಿಸಿ
ಮತ್ತೊಂದು ದಿಕ್ಕಿನತ್ತ ಚಲಿಸುವಂತೆ ಮಾಡುತ್ತದೆ. ಕೆಲಸಗಳನ್ನೆಲ್ಲಾ ಮಾಡಿದ್ದು 'ನಾನು' 'ನಾನು'
ಎನ್ನುವ ನಾಗಿಯ ಮಾತುಗಳಿಂದ ಆಧ್ಯಾತ್ಮದ ಬಾಗಿಲು ತಟ್ಟಿ ತನ್ನ ಮಾತುಗಳನ್ನು ಮುಗಿಸುತ್ತದೆ.
ಚಿತ್ರ, ಆಡದ ಮಾತುಗಳ ಅಲೆಗಳು ನಮ್ಮನ್ನೂ ತಟ್ಟುತ್ತವೆ.

ನಿರ್ದೇಶಕನ ಮನೋಚಿತ್ರಣವನ್ನು ನಮ್ಮ ಕಣ್ಣಿಗೆ ಇಳಿಸುವವನು ಛಾಯಾಗ್ರಾಹಕ.
ಮಲೆನಾಡಿನ ಮಳೆಯನ್ನೂ, ಮುಳುಗಡೆಯ ಭೀಕರತೆಯನ್ನೂ, ಹೆಚ್.ರಾಮಚಂದ್ರ ಎಷ್ಟು
ಪರಿಣಾಮಕಾರಿಯಾಗಿ ಸೆರೆ ಹಿಡಿದಿದ್ದಾರೆಂದರೆ ಪ್ರೇಕ್ಷಕ ಕೆಲವು ಸನ್ನಿವೇಶಗಳಲ್ಲಿ ಉಸಿರು ಬಿಗಿ
ಹಿಡಿದು ನೋಡುವಂತಿದೆ. ಪ್ರತಿ ಕೋನದಲ್ಲೂ ಛಾಯಾಗ್ರಾಹಕನ ಶ್ರಮ ಎದ್ದು ತೋರುತ್ತದೆ.
ಇದಕ್ಕಾಗಿ ರಾಮಚಂದ್ರ ಅಭಿನಂದನಾರ್ಹರು.

ಚಿತ್ರಕ್ಕೆ ಸರಿಹೊಂದುವ ಸಂಗೀತವೂ ಪರಿಣಾಮ ಉಂಟು ಮಾಡಿದೆ. ಚಿತ್ರ ಇಷ್ಟೆಲ್ಲಾ
ಪ್ರಶ್ನೆಗಳನ್ನುಂಟು ಮಾಡಿದ್ದಕ್ಕೆ ಗಿರೀಶರೂ ಅಭಿನಂದನಾರ್ಹರು.

ಇಲ್ಲಿನ ಪ್ರಭಾವ ಅನ್ಯರ ಮೇಲೆ ಏಕಾಗಿಲ್ಲ

■ ರಾಜಶೇಖರ ಆರ್. ಬಿಲ್ಲಪತ್ರಿ

ಸೃಜನಶೀಲತೆಗೆ ಪ್ರತಿಭೆಯೇ ಬೀಜಾಂಶವಾದರೂ ಅದರ ಬೆಳವಣಿಗೆಗೆಲ್ಲ ಹೊರ ಜಗತ್ತೇ. ಜೊತೆಗೆ ಪ್ರಜ್ಞೆ, ಕೌಶಲ, ಪರಿಸರ, ಪ್ರಭಾವ ಮುಂತಾದ ಪೋಷಕಾಂಶಗಳೂ ಬೇಕೇ ಬೇಕು. ಪ್ರಜ್ಞೆ ಮತ್ತು ಕೌಶಲಗಳು ಸೃಜನಶೀಲನೊಬ್ಬನ ಮನೋಬೌದ್ಧಿಕ ಮತ್ತು ಕ್ರಿಯಾತ್ಮಕ ಶಕ್ತಿ-ಪರಿಣತಿಗಳಾಗಿ ಅವನ ಒಳಗೇ ಇರುವ ಗುಣಗಳಾದರೆ ಪರಿಸರ ಮತ್ತು ಪ್ರಭಾವಗಳು ಹೊರಗಿನ ಪ್ರಚೋದಕ ಶಕ್ತಿಗಳು. ಅದರಲ್ಲೂ ಪರಿಸರವು ಸೃಜನಶೀಲನೊಬ್ಬನ ಬೆಳವಣಿಗೆಗೆ ಅತ್ಯಂತ ಅಗತ್ಯ ಮತ್ತು ಅನಿವಾರ್ಯ. ಆದರೆ ಎಲ್ಲ ಕಾಲಕ್ಕೂ ಪ್ರಭಾವ ಎನ್ನುವುದು ಅಪೇಕ್ಷಿತ, ಅನಿವಾರ್ಯ ಅಗತ್ಯವಲ್ಲ ಕೆಲವೊಮ್ಮೆ ಅಪೇಕ್ಷಿತ, ಅಗತ್ಯವಾದರೆ ಕೆಲವುಸಲ ಆಕಸ್ಮಿಕ. ಅನಿರೀಕ್ಷಿತ ವಾಗಿರುತ್ತದೆ.

ಸಾಂಸ್ಕೃತಿಕ ಬದಲಾವಣೆ ಬೆಳವಣಿಗೆಯ ನಿರಂತರ ಪ್ರಕ್ರಿಯೆಯಲ್ಲಿ ಪ್ರಭಾವವು ಬಹು ಮುಖ್ಯವಾದದ್ದೂ ಮತ್ತು ಹಲವು ಮೂಲದ್ದೂ ಆಗಿರಬಲ್ಲದು. ಯಾವುದೇ ಕ್ಷೇತ್ರವೊಂದು ಪಡೆದುಕೊಂಡ ಪ್ರಭಾವಗಳನ್ನು ಅಂತರ್ ಶಿಸ್ತಿನ ಮತ್ತು ಬಹಿರ್ ಶಿಸ್ತಿನ ಎಂದು ಸ್ಥೂಲವಾಗಿ ವರ್ಗೀಕರಿಸಬಹುದು. ಇನ್ನು ಶಿಷ್ಟ ಜಾನಪದ, ಆಂತರಿಕ ಬಾಹ್ಯ, ಮೂಲದ್ದೆಂದು ಮುಂತಾಗಿ ವರ್ಗೀಕರಣಕ್ಕೆ ಹಲವು ಮಾರ್ಗಗಳೊದಗುತ್ತವೆ. ಆ ಮಾತು ಬೇರೆ. ಅಂತರ್ ಶಿಸ್ತಿನ ಪ್ರಭಾವಗಳನ್ನು ಒಂದು ನಿರ್ದಿಷ್ಟ ಕ್ಷೇತ್ರವೊಂದರ ಸಮಗ್ರ ಸ್ವರೂಪದ ಮೇಲಾಗುವ ಬದುಕಿನ ವಿವಿಧ ನೆಲೆಗಳ (ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ತಿಕ ಮುಂತಾದ) ಪ್ರಭಾವಗಳೆನ್ನಬಹುದು. ಭಾರತೀಯ ಕಲೆ ಸಾಹಿತ್ಯಗಳ ಮೇಲೆ ಈ ಎರಡು ಬಗೆಯ ಪ್ರಭಾವಗಳೂ, ಅತಿ ಸ್ಪಷ್ಟವಾಗಿ, ಪರಿಣಾಮಕಾರಿಯಾಗಿಯೇ ಆಗಿವೆ. ಅದರಲ್ಲೂ ಬ್ರಿಟೀಷ

ಪೂರ್ವ ಭಾರತದ ಕಲೆ, ಸಾಹಿತ್ಯಗಳ ಮೇಲೆ ಈ ಎರಡುಬಗೆಯ ಪ್ರಭಾವಗಳನ್ನು ಸ್ಥೂಲವಾಗಿ ಆಂತರಿಕ ನೆಲೆಯಿಂದಲೇ ಎಂದರೆ ನಮ್ಮದೇ ದೇಶದ ಸಂಸ್ಕೃತಿ, ಸಾಮಾಜಿಕತೆಯ ಎಲ್ಲೆಗಳಲ್ಲಿಯೇ ಪಡೆದುಕೊಂಡರೆ, ಅನಂತರದ ಬಹುತೇಕ ಪ್ರಭಾವಗಳೆಲ್ಲವೂ ಬಾಹ್ಯನೆಲೆಯಿಂದ (ಹೊರಗಿನಿಂದ) ಬಂದವುಗಳಾಗಿವೆ.

ಯಾವನೇ ಒಬ್ಬ ವ್ಯಕ್ತಿ ತನ್ನ ಅನುಭವ, ಸಂಸ್ಕಾರ ಪ್ರಜ್ಞೆ, ಪ್ರತಿಭೆಗಳಿಂದಲೇ ಬೆಳೆಯಬೇಕು. ಹಾಗೆಯೇ ಯಾವುದೇ ಒಂದು ಪ್ರಕಾರವು ತನ್ನದೇ ನೆಲೆ, ಹಿನ್ನೆಲೆ, ಸಂಸ್ಕೃತಿ ಸಾಮಾಜಿಕತೆ, ಪ್ರಾದೇಶಿಕತೆಗಳನ್ನವಲಂಬಿಸಿರುವದು ಅದರ ಸ್ವರೂಪ ಶುದ್ಧತೆಗೆ, ವಿಶಿಷ್ಟತೆಗೆ, ಮೂಲ, -ಸ್ವಂತಿಕೆಗೆ ಕಾರಣವಾಗುತ್ತದೆ. ಅದು ಶ್ರೇಷ್ಠ. ಆದರೆ ವ್ಯಕ್ತಿ ಅಥವಾ ಪ್ರಕಾರವು ತನ್ನ ಬೆಳವಣಿಗೆಗೆ ತನ್ನದಲ್ಲದ ಬೇರೊಂದು ನೆಲೆಯ ಆಕರವನ್ನು ಅವಲಂಬಿಸುವದು. ಅಂದರೆ ಪ್ರಜ್ಞಾಪೂರ್ವಕವಾಗಿ ಬೇರೊಂದು ಮೂಲದ ಪ್ರಭಾವಗಳನ್ನು ಪಡೆದುಕೊಳ್ಳುವದು ಒಂದು ಹಂತದಲ್ಲಿ ಒಂದು ದೃಷ್ಟಿಯಿಂದ ಒಪ್ಪಿತವಾದುದೆ. ಆದರೆ ಇದು ಶ್ರೇಷ್ಠವಾದದ್ದೇನೂ ಅಲ್ಲ. ಅಲ್ಲದೆ ಕೆಲವೊಮ್ಮೆ ಪರೋಕ್ಷವಾಗಿ ತಾನೇ ತಾನಾಗಿ ಅನ್ಯ ಪ್ರಭಾವಗಳಿಗೆ ಒಳಗಾಗುವ ದೌರ್ಜನ್ಯವೂ ಹಲವರಿಗೆ ಹಲವು ಸಂದರ್ಭಗಳಲ್ಲಿ ಸಹಜವಾದುದೇ. ಇದೂ ಮತ್ತು ತನ್ನ ಪ್ರತಿಭೆ ಸಾಮರ್ಥ್ಯಗಳ ಕ್ಷೀಣ ಸ್ಥಿತಿಯಲ್ಲಿ ಕೇವಲ ಬಾಹ್ಯ ಪ್ರತಿಭೆಗಳಿಗೇ ದಾಸನಾಗುವದೂ ಅತ್ಯಂತ ಕನಿಷ್ಠತಮವಾದವುಗಳು. ಹೀಗೆ ವಿವಿಧ ಸಂದರ್ಭಗಳಲ್ಲಿ ವಿವಿಧ ಸ್ಥಾನ, ಮೌಲ್ಯವನ್ನು ಪಡೆಯುವ ಪ್ರಭಾವದ ಕಲ್ಪನೆಯು ವ್ಯಕ್ತಿ ಅಥವಾ ಕಲಾ ಪ್ರಕಾರವೊಂದು ತನ್ನದೇ ಸತ್ವದಿಂದ ಬೆಳೆದು ವ್ಯಾಪಕವಾಗಿ ಪಸರಿಸಿದಾಗ ಉಳಿದ ವ್ಯಕ್ತಿ ಅಥವಾ ಅಥವಾ ಅಂತಹುದೇ ಪ್ರಕಾರಗಳ ಮೇಲೆ ಪ್ರಭಾವಿಯಾಗಿ ಪರಿಣಮಿಸುತ್ತದೆ. ಆಗ ಅದು ಪಡೆಯುವ ಆಯಾಮ, ಮೌಲ್ಯವೂ ಮತ್ತೊಂದೇ ಬಗೆಯದಾಗಿರುತ್ತದೆ. ಪ್ರಭಾವಿಯಾಗಿ ಬೆಳೆದ ವ್ಯಕ್ತಿ ಅಥವಾ ಪ್ರಕಾರವು ತನ್ನ ಬೆಳವಣಿಗೆಯ ಎಲ್ಲ ಮೂಲಾಂಶಗಳ ಸಮೃದ್ಧಿಯನ್ನೂ ತನ್ನ ಪ್ರತಿಭೆ ಸಾಮರ್ಥ್ಯ, ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ. ಆದರೆ ಪ್ರಭಾವಗಳಿಗೊಳಗಾಗುವದೆಂದರೆ ಅದು ನಮ್ಮಲ್ಲಿನ ಪ್ರತಿಭೆ ಕತೃತ್ವಶಕ್ತಿ ಶಕ್ತಿಯ ಸಾಮರ್ಥ್ಯದ ಕೊರತೆಯೇ ಎಲ್ಲ ಪೂರಕ ಪೋಷಕಾಂಶಗಳ, ಸಮೃದ್ಧಿಯ ಕೊರತೆಯೇ ಎಂದರ್ಥ.

ಈ ಒಂದು ಹಿನ್ನೆಲೆಯಿಂದ ಭಾರತದ ಸಾಂಸ್ಕೃತಿಕ ಅಥವಾ ಇನ್ನಾವುದೇ ನೆಲೆಯನ್ನು ಅವಲೋಕಿಸುವಾಗಲೂ ಅದೆಲ್ಲವು ಹೊರಗಿನ ಅನೇಕ ಪ್ರಭಾವಗಳಿಗೆ ಸಾಕಷ್ಟು ಒಳಗಾಗಿದ್ದುದು ಸ್ಪಷ್ಟವಾಗುತ್ತದೆ. ಅಂತಹುದರಲ್ಲಿ ಬ್ರಿಟೀಷ್ ಪ್ರಭಾವವಂತು ಭಾರತೀಯ ಬದುಕಿಗೆ ಅಂಟಿದ ಎಲ್ಲ ಬಗೆಯ ಜಾಡ್ಯವನ್ನು ತೊಲಗಿಸಿ ಹೊಸ ಚೈತನ್ಯವನ್ನೇ ತುಂಬಿತು. ಅದು ಶಿಕ್ಷಣ, ಕಲೆ, ಸಾಹಿತ್ಯ, ವಿಜ್ಞಾನ, ಹೀಗೆ ಎಲ್ಲ ಕ್ಷೇತ್ರಗಳನ್ನು ವ್ಯಾಪಿಸಿತು. ಬ್ರಿಟೀಷ್ ಪೂರ್ವದ ಭಾರತದಲ್ಲಿಯೂ ಕಲೆ, ಸಾಹಿತ್ಯಗಳು ಉನ್ನತವಾಗೇ ಇದ್ದರೂ ಅವು ಬದಲಾಗುವ, ಕಾಲ ಮೌಲ್ಯಗಳೊಂದಿಗೆ ಹೊಂದಿಕೊಂಡು ಬದಲಾಗುವ, ಬೆಳೆಯುವ ಯಾವ ಲಕ್ಷಣವನ್ನೂ ಹೊಂದಿರಲಿಲ್ಲ. ಆದರೆ ಅದು ಸಾಧ್ಯವಾದದ್ದು ಪಶ್ಚಿಮದ ಹೊಸಗಾಳಿ ಬಡಿದ ನಂತರವೇ. ಬ್ರಿಟೀಷರ ಆಗಮನದಿಂದ ಆಧುನಿಕತೆಯ ಹೊಸಿಲನ್ನು ತುಳಿದ ಭಾರತದ ಕಲೆಯೂ ಆಧುನಿಕವಾಗತೊಡಗಿತು. ಭಾರತೀಯ ಕಲೆಯು ತದನಂತರದಲ್ಲಿ ಸ್ವಂತಿಕೆಯ ಪ್ರೌಢಿಮೆಯನ್ನು ಗಳಿಸಿದರೂ ಪಾಶ್ಚಾತ್ಯ ಪ್ರಭಾವಗಳ ನಿರ್ದೇಶನ, ನಿಯಂತ್ರಣಗಳಿಂದ

ಹೊರತಾಗಲಿಲ್ಲ. ತಾನೂ ಅದಕ್ಕೆ ಪ್ರತಿಯಾದ, ಸಂವಾದಿಯಾದ, ಸಮಾನ ಶಕ್ತಿಯಾಗಿ ಬೆಳೆದು ಪ್ರಭಾವದ ವ್ಯಾಪಕ ವಾತಾವರಣವನ್ನು ನಿರ್ಮಿಸುವುದು ಸಾಧ್ಯವಾಗಲಿಲ್ಲ. ಇಂತಹ ಸ್ಥಿತಿಯಲ್ಲಿ ಕರ್ನಾಟಕದ ಕಲೆಯ ಪ್ರಭಾವವನ್ನು ಹೊರ ರಾಜ್ಯಗಳಲ್ಲಿ ಗುರುತಿಸುವುದಕ್ಕೆ ತೊಡಗುವುದು ಯಾವ ಸಫಲ ಯತ್ನವೂ ಅಲ್ಲ.

ಇಲ್ಲಿನವರ ಇಲ್ಲದ ಪ್ರಭಾವಗಳನ್ನು ಹುಡುಕುವ ಸಾಹಸಕ್ಕೆ ಬದಲಾಗಿ ಇಲ್ಲಿನ ಪ್ರಭಾವ ಅನ್ಯರ ಮೇಲೆ ಏಕಾಗಲಿಲ್ಲವೆಂದು ಪ್ರಶ್ನಿಸಿಕೊಂಡು ಕಾರಣಗಳನ್ನು ಶೋಧಿಸಲು ಪ್ರಯತ್ನಿಸಿದ್ದೇನೆ. ಇಲ್ಲಿ ನಮ್ಮವರ ಪ್ರಭಾವ ಹೊರನಾಡಿನಲ್ಲಿ ಆಗಲಿಲ್ಲವೆಂದ ಮಾತ್ರಕ್ಕೆ ನಮ್ಮವರನ್ನು ನಾನು ಹಿಯ್ಯಾಳಿಸಿದಂತಲ್ಲ. ಅದನ್ನು ಯಾವ ಕೀಳರಿಮೆಯಾಗಿಯೂ ಭಾವಿಸಬಾರದು. ಹಾಗೆಂದು ಇಲ್ಲದ ಹೆಗ್ಗಳಿಕೆಯನ್ನು ಹೇಳಿಕೊಳ್ಳುವುದು ಮಿಥ್ಯಾಪ್ರತಿಷ್ಠೆಯೂ, ಆತ್ಮವಂಚನೆಯೂ ಆಗುವುದಿಲ್ಲದೇ ನಮ್ಮನ್ನು ಕಲಾವಲಯದ ಯಾವ ಉನ್ನತ ಸ್ಥಾನದಲ್ಲೂ ನಿಲ್ಲಿಸುವ ಯೋಗ್ಯತೆಯನ್ನು ತಂದು ಕೊಡಲಾರದು. ಹಾಗೇನು ನಿಷ್ಕ್ರಿಯವಾಗಿ, ಯಾವೊಂದು ಆಲೋಚನೆಯನ್ನು ಈ ದಿಸೆಯಲ್ಲಿ ಮಾಡದೇ ಸುಮ್ಮನಿರುವುದೂ ನಮ್ಮ ಮುಂದಿನ ಬೆಳವಣಿಗೆಯ ದೃಷ್ಟಿಯಿಂದ ಮಾರಕವೇ. ಆದ್ದರಿಂದ ನಾವೆಡವಿದ ಸ್ಥಾನಗಳನ್ನು, ಸೋತ ಸಂದರ್ಭಗಳನ್ನು, ವಿಫಲತೆಯ ಕಾರಣಗಳನ್ನು ತಿಳಿದುಕೊಂಡು ಬೆಳವಣಿಗೆಗೆ ಸೂಕ್ತ ಮಾರ್ಗವನ್ನು ನಿರ್ಮಿಸಿ ಕೊಳ್ಳುವುದೂ, ಅದಕ್ಕಾಗಿ ಮನೋ-ಬೌದ್ಧಿಕವಾಗಿ ಶ್ರಮಿಸುವುದು, ಮತ್ತು ಕಲೆಯನ್ನು ಅರ್ಥಪೂರ್ಣತೆಯ ಔನ್ನತ್ಯದಿಂದ ಕಾಣುವುದು ಕಲಾವಿದನ ಗುರಿಯಾಗಬೇಕು. ಈ ಕಾರಣದಿಂದ ಈ ಪ್ರಬಂಧವು ನನ್ನ ನಿರೂಪಣೆಯಲ್ಲಿ ಕರ್ನಾಟಕದ ಕಲೆ ತಾನು ಮಾಡಿ ಕೊಂಡ ಆತ್ಮಾವಲೋಕನವೇ ಹೊರತು ನನ್ನ ಯಾವ ಪೂರ್ವಾಗ್ರಹವು ಅಲ್ಲ. ಕರ್ನಾಟಕದ ಯಾವನೂ ತನ್ನ ಮನಸ್ಸಿನ ಪ್ರಾಂಜಲತೆಯಿಂದ ಕಂಡುಕೊಳ್ಳಬಹುದಾದ ಸತ್ಯವೇ ಹೊರತು ದೋಷವನ್ನೇ ನಾನು ಹೇಳಲೆಳಸಿರುವೆನೆಂದಲ್ಲ.

ಇಲ್ಲಿನವರ ಪ್ರಭಾವ ಅನ್ಯರ ಮೇಲೆ ಏಕಾಗಲಿಲ್ಲ ಎಂಬ ಪ್ರಶ್ನೆಯನ್ನು ಕೆಳಗೆ ಸೂಚಿಸಿದ ಕೆಲವು ಮೂಲ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು, ವಿಷಯದ ಇತಿ-ಮಿತಿಯಲ್ಲಿ ಕೂಲಂಕುಷವಾಗಿ ವಿಶ್ಲೇಷಿಸಲಾಗಿದೆ.

★ ಕಲಾಚಳುವಳಿಗಳು ಮತ್ತು ಕಲಾಚಟುವಟಿಕೆಗಳು ಉಂಟಾಗದಿರುವುದು

★ ಪ್ರಾರಂಭದಲ್ಲಿ ಕಲಾಶಾಲೆಗಳ ಅಭಾವ

★ ಶಿಕ್ಷಣದ ಗುಣಮಟ್ಟ- ಬೋಧಕರ ಸಾಮರ್ಥ್ಯ, ಪ್ರತಿಭೆ, ಪ್ರಸಿದ್ಧಿ.

★ ಕಲಾಶಾಲೆಗಳು ತಮ್ಮದೇ ಆದ ಕಲಾಪರಂಪರೆಯನ್ನು ನಿರ್ಮಿಸಿಕೊಳ್ಳದಿರುವುದು. ಉದಾ: ಬಾಂಬೆ ಸ್ಕೂಲ್, ಬರೋಡಾ ಸ್ಕೂಲ್, ಶಾಂತಿ ನಿಕೇತನ್ ಇತ್ಯಾದಿ.

★ ಪ್ರಜ್ಞೆ, ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಕೊರತೆ, ಇವುಗಳಿಗೆ ಇರಬಹುದಾದ ಕಾರಣಗಳು.

★ ಭೌಗೋಳಿಕ, ಸಾಮಾಜಿಕ , ಸಾಂಸ್ಕೃತಿಕ ಮುಂ....

★ ಇಂದಿನ ಸಂದರ್ಭದಲ್ಲಿ ಕಲಾವಲಯದಲ್ಲಿನ ವ್ಯಾಪಾರಿ ಮನೋಭಾವ.

-2-

ಕರ್ನಾಟಕದ ಕಲೆ ಮತ್ತು ಕಲಾವಿದರ ಪ್ರಭಾವ ಹೊರರಾಜ್ಯಗಳಲ್ಲಿ ಆಗಿದೆಯೇ ಎಂಬುದನ್ನು ಪರಿಶೀಲಿಸುವ ಈ ಸಂದರ್ಭದಲ್ಲಿ ಇದೇತರಹ, ಭಾರತದ ಕಲೆ-ಕಲಾವಿದರ ಪ್ರಭಾವ ಹೊರದೇಶಗಳಲ್ಲಾಗಿದೆಯೇ ಎಂಬ ಜಿಜ್ಞಾಸೆಯೂ ಸಹಜವಾಗಿಯೇ ಉಂಟಾಗುತ್ತದೆ. ಈ ಸಂಬಂಧದಲ್ಲಿ ಅದನ್ನೊಂದಿಷ್ಟು ಇಲ್ಲಿ ಪರಿಶೀಲಿಸುವುದು ಪ್ರಸ್ತುತವೆನಿಸುತ್ತದೆ. ಪ್ರಪಂಚದ ಯಾವುದೇ ದೇಶದಲ್ಲಿ ಭಾರತೀಯ ಕಲೆಯ ಪ್ರಸಾರ - ಪ್ರಭಾವವಾಗಿದೆಯೆಂದು ಹೇಳುವುದಾದಲ್ಲಿ ಅದು ಪ್ರಾಚೀನ ಭಾರತೀಯ ಕಲೆಗೆ, ಮತ್ತು ಮಧ್ಯಏಷ್ಯಾ, ನೇಪಾಳ, ಟಿಬೆಟ್, ಚೈನಾ, ಜಪಾನ್, ಶ್ರೀಲಂಕಾ, ಮತ್ತು ಆಗ್ನೇಯ ಏಷ್ಯಾದ ದೇಶಗಳಿಗೆ ಮಾತ್ರಾ ಸೀಮಿತವೆನ್ನಬೇಕಾಗುತ್ತದೆ. ಅದೂ ಬೌದ್ಧಧರ್ಮದ ಪ್ರಚಾರದಿಂದಾಗಿ -ಪ್ರಸಾರ ಸಾಧನವಾಗಿ. ಆದರೆ ಇಲ್ಲಿ ಅದು ಸೀಮಿತವೆಂದಾಕ್ಷಣ ಅದನ್ನು ಲಘುವಾಗಿ ಪರಿಗಣಿಸಬೇಕೆಂದಿಲ್ಲ. ಅದರ ಪ್ರಭಾವ, ಪರಿಣಾಮಗಳು. ಗರಿಷ್ಠ ಪ್ರಮಾಣದಲ್ಲಿಯೇ ಆಗಿ ಉಳಿದು - ಬೆಳೆದು ಬಂದಿದೆ. ಇಂದಿನವರೆಗೂ ಆ ದೇಶಗಳ ಸಂಸ್ಕೃತಿಯ ಮೂಲ ಸ್ರೋತವಾಗಿರುವುದು ಭಾರತೀಯ ಮೂಲ ಸಂಸ್ಕೃತಿಯೇ. ಭಾರತವು ಜಗತ್ತಿಗೆ ಬೌದ್ಧಧರ್ಮದ ಮೂಲಕ (ಹುಟ್ಟಿದ ನಾಡಿನಿಂದ ಹೊರಹಾಕಲ್ಪಟ್ಟರೂ) ನೀಡಿದ ದೊಡ್ಡ ಕೊಡುಗೆಯೇ. ಬೌದ್ಧಧರ್ಮ ನೆಲೆನಿಂತ ಅನೇಕ ಕಡೆಗಳಲ್ಲಿ ಹಿಂದೂ ಧರ್ಮವು ಹೋಗಿದ್ದರೂ ಅದರ ಮೂಲಕವಾದ ಕಲಾಪ್ರಸಾರ - ಪ್ರಭಾವಗಳು ಹೇಳಿಕೊಳ್ಳುವಂತದ್ದೇನು ಆಗಿಲ್ಲವೆಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಹೀಗೆ ಹೊರದೇಶದಲ್ಲಿ ಭಾರತೀಯ ಕಲೆಯ ಪ್ರಭಾವವನ್ನು ಗುರುತಿಸುವಾಗ ಬೌದ್ಧಧರ್ಮ ಅದರ ಪ್ರಧಾನ ಕಾರಣ ಮತ್ತು ಮಾಧ್ಯಮವಾಗಿತ್ತೆಂಬುದು ಮರೆಯಬಾರದು. ಮತ್ತು ವಿಶೇಷವಾಗಿ ಗುರುತು ಹಾಕಿಕೊಳ್ಳಬೇಕಾದ ಅಂಶ. ಭಾರತೇತರ ಬೌದ್ಧಜಗತ್ತಿಗೆ ಬೌದ್ಧ ಧರ್ಮದಲ್ಲಿ ಕಂಡ ವಿಶಿಷ್ಟತೆಯೇ ಮುಖ್ಯವಾಯ್ತು. ಆ ವಿಶಿಷ್ಟತೆಯ ಕಾರಣದಿಂದಾಗಿ, ಭಾರತೀಯವೆಂದು ಗುರುತಿಸುವ ಕಲೆಯು ಅಲ್ಲಿ ನೆಲೆಯೂರುವಂತಾಯಿತು. ಧರ್ಮದೊಂದಿಗೆ ತಳುಕು ಹಾಕಿಕೊಂಡ ಕಲೆ ಅದರ ತತ್ವಾದರ್ಶಗಳೊಂದಿಗೆ ತನ್ನ ಮೂಲ ಭಾರತೀಯ ಕಲಾಪರಿಕಲ್ಪನೆ, ಲಕ್ಷಣಗಳನ್ನು ಮೇಳೈಸಿಕೊಂಡ ಸಮಗ್ರತೆಯ ಪರಿಣಾಮವೇ ಅಲ್ಲಲ್ಲಿನ ಪ್ರಾದೇಶಿಕ ಕಲೆ-ಸಂಸ್ಕೃತಿಯ ಮೇಲಿನ ಪ್ರಭಾವವಾಗಿದೆ. ಇಲ್ಲಿ ಭಾರತೀಯ ಪ್ರಭಾವವೂ ಬೌದ್ಧ ಧರ್ಮದ ಹೀನಯಾನದ ಸಂದರ್ಭದಲ್ಲಿ ಅಚ್ಚಭಾರತೀಯವೂ ಮತ್ತು ಮಹಾಯಾನದ ಸಂದರ್ಭದಲ್ಲಿ ಗ್ರೀಕೊರೋಮನ್ ಪ್ರಭಾವದಿಂದೊಡಗೂಡಿದ ಮಿಶ್ರ ಭಾರತೀಯವೂ ಆಗಿತ್ತೆಂಬುದು ಅತೀ ಮುಖ್ಯವಾದ ಅಂಶವಾಗಿದೆ.

ಈ ಸಂದರ್ಭದಲ್ಲಿ ಒಂದು ಸಣ್ಣ ಸಂಶಯವೂ ಉಂಟಾಗುತ್ತದೆ; ಅದು, ಬೌದ್ಧಧರ್ಮದ ಪ್ರಸಾರ ಮತ್ತು ಭಾರತೀಯ ಕಲೆಯ ಪ್ರಭಾವ ಮಧ್ಯ, ಪೂರ್ವ ಮತ್ತು ಆಗ್ನೇಯ ಏಷ್ಯಾದಲ್ಲಿ ಮಾತ್ರವಾಗಿದೆಯೇ ಹೊರತು ಪಶ್ಚಿಮ ಏಷ್ಯಾ ಮತ್ತು ಯೂರೋಪ್‌ನ ದೇಶಗಳಲ್ಲೇಕಾಗಲಿಲ್ಲೆಂಬುದು. ಅದಕ್ಕೆ ಈ ಬಗೆಯ ಉತ್ತರ ಕಂಡುಕೊಳ್ಳಬಹುದು. ಪರ್ಶಿಯಾ, ಗ್ರೀಸ್ ಮುಂತಾದ ಪಶ್ಚಿಮದ ದೇಶಗಳು ತಮ್ಮಷ್ಟಕ್ಕೆ ಸ್ವತಂತ್ರವಾದ, ಪರಿಪೂರ್ಣವಾದ ಸಾಂಸ್ಕೃತಿಕ ಪ್ರಗತಿಯನ್ನು ತಕ್ಕ ಮಟ್ಟಿಗೆ ಸಾಧಿಸಿದ್ದು, ತಮ್ಮದಲ್ಲದ

ಮತ್ತೊಂದನ್ನು ಒಪ್ಪಿಕೊಳ್ಳದ ಮತ್ತು ಆಕ್ರಮಣಕಾರಿ ಮನೋಭಾವದದಾಗಿದ್ದವು.

ಸೈನಿಕ ಆಕ್ರಮಣಗಳ ಮೂಲಕ ತಾವು ಹೋದಲ್ಲೆಲ್ಲ ಸಾಂಸ್ಕೃತಿಕ ಆಕ್ರಮಣವನ್ನು ಗೈದು ತಮ್ಮ ಸಂಸ್ಕೃತಿಯ ಸ್ಥಾಪನೆಗೆ ಅವು ಬಹುಮಟ್ಟಿಗೆ ತೊಡಗಿದವು. ಹೀಗಾಗಿ ಭಾರತದ ಧಾರ್ಮಿಕ, ಸಾಂಸ್ಕೃತಿಕ ಪ್ರಭಾವಗಳೇನೇ ಇದ್ದರೂ ಅವು ಪೂರ್ವ ಮತ್ತು ಆಗ್ನೇಯದ ಕಡೆ ಮುಖ ಮಾಡಬೇಕಾಯಿತು. ಚೀನಾದಂತಹ ಪ್ರಾಚೀನ ದೇಶವೂ ಭಾರತೀಯ ಧಾರ್ಮಿಕ, ಆ ಮೂಲಕ ಕಲೆ ಮತ್ತಿತರ ಸಾಂಸ್ಕೃತಿಕ ಪ್ರಭಾವಗಳಿಗೆ ಶರಣಾಗಬೇಕಾದರೆ ಅಲ್ಲಿನ ಧಾರ್ಮಿಕ, ಸಾಂಸ್ಕೃತಿಕ ದೌರ್ಬಲ್ಯವೂ ಒಂದು ಪ್ರಧಾನವಾದ ಕಾರಣವೇ. ಇದೇ ದೌರ್ಬಲ್ಯ ಮತ್ತು ಅಗತ್ಯಗಳು ಇತರ ಪೂರ್ವ, ಆಗ್ನೇಯ ದೇಶಗಳದ್ದೂ ಆಗಿದ್ದವೆಂದು ವಿಶೇಷವಾಗೇನೂ ಹೇಳಬೇಕಾಗಿಲ್ಲ.

ಇಷ್ಟು ಮಾತ್ರ, ಹೊರದೇಶಗಳ ಮೇಲೆ ಭಾರತೀಯ ಪ್ರಭಾವವೆಂದು ವಿವರಿಸಿ, ಇನ್ನು ಮುಂದಿನ ಭಾರತೀಯ ಕಲಾ ಇತಿಹಾಸದ ಪ್ರಮುಖ ಘಟ್ಟಗಳೆಲ್ಲವೂ ಹೊರದೇಶಗಳ ಪ್ರಭಾವವನ್ನು ಪಡೆದುಕೊಂಡೇ ಬೆಳೆದುವೆಂದು ಹೇಳಬೇಕಾಗುತ್ತದೆ. ಅಂದರೆ ಹೊರದೇಶಗಳನ್ನು ಈ ದಿಸೆಯಲ್ಲಿ ನಿರ್ದೇಶಿಸುವ ಅವಕಾಶ ಮತ್ತು ಕಸುವುಗಳು ಖಾಲಿಯಾಗಿ ಅವುಗಳ ಅಭಾವ ಮತ್ತು ಅಗತ್ಯಗಳು ಆಗಿನ ಬದಲಾದ ರಾಜಕೀಯ, ಸಾಮಾಜಿಕ, ತಾತ್ವಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ಭಾರತಕ್ಕೆ ಬಂದೊದಗಿದವು. ಕುಶಾನರ ಕಾಲದಲ್ಲಿ ಗ್ರೀಕರಿಂದ ಪ್ರಾರಂಭವಾದ ಹೊರಗಿನ ಪ್ರಭಾವಗಳು ಮುಂದೆ ಮೊಗಲ್ ಮುಂತಾದ ಮುಸ್ಲಿಂ ಆಡಳಿತ ಕಾಲದಲ್ಲಿ ಪರ್ಶಿಯಾ ಮತ್ತಿತರ ಇಸ್ಲಾಂ ದೇಶಗಳ, ಹಾಗೂ ಮುಂದೆ ಬ್ರಿಟಿಷರ ಅವಧಿಯಲ್ಲಿ ಪಾಶ್ಚಿಮಾತ್ಯ ಸೈಜಕಲೆ (Western Realism)ಯ ಪ್ರಭಾವಗಳು ಕಾಲಕಾಲಕ್ಕೆ ಆಗುತ್ತಲೇ ಬಂದವು. ಅನಂತರದ ಸ್ವಾತಂತ್ರ್ಯೋತ್ತರದ ಭಾರತೀಯ ಆಧುನಿಕ ಕಲೆಯೇನೂ ಇಲ್ಲಿನದೇ ಮೂಲ ಕಲಾತ್ಮಕ ಪರಿಸರದಿಂದ, ಪರಿಕಲ್ಪನೆಗಳಿಂದ ಮೂಡಿ ಬಂದ ಅಚ್ಚ ಭಾರತೀಯವೇನಲ್ಲ. ಆಗ ಪ್ರಾರಂಭವಾದ ಪಾಶ್ಚಿಮಾತ್ಯರ ಆಧುನಿಕ ಮುಂತಾದ ಅಲೆಗಳಿಂದ ಮೊದಲಾಗಿ ಇಂದಿನ ಪ್ರಸ್ತುತ ಸಮಕಾಲೀನ ಎಲ್ಲ ಬಗೆಯ ಪ್ರಕಾರ ಪರಿಕಲ್ಪನೆಗಳವರೆಗೂ ನಿರಂತರವಾಗಿ ಹೊರಗಿನ ಪ್ರಭಾವವೇ ಹರಿದು ಬರುತ್ತಿರುವುದು ಸುಸ್ಪಷ್ಟ. ಇತ್ತೀಚಿನ ಹೊರಗಿನ ಪ್ರಭಾವಗಳೆಲ್ಲವೂ ಪ್ರವಾಹಗಳೇ ಆಗಿ ಮೂಲ ಭಾರತೀಯವೆಂಬುದೇ ಕೊಚ್ಚಿ ಹೋಗುತ್ತಿವೆ. ಇಂತಹುದರಲ್ಲಿ ಭಾರತೀಯವೆಂಬುದು ಎಲ್ಲಿದೆ ? ಅಥವಾ ಹಾಗೆಂದರೇನು ? ಎಂದು ಮತ್ತೆ ಪ್ರಶ್ನಿಸಿಕೊಳ್ಳಬೇಕಾದ ಸಂದರ್ಭವೆದುರಾಗಿದೆ.

-3-

ಕನ್ನಡ ನಾಡಿನ ಕಲೆ-ಕಲಾವಿದರು ಕರ್ನಾಟಕದ ಹೊರಗಡೆಗೆ ಪ್ರಭಾವಿಯಾಗಿ ಬೆಳೆಯದಿರುವುದಕ್ಕೆ ಮುಖ್ಯವಾದೊಂದು ಕಾರಣವಿದೆ. ಅದು, ಕಲಾ ಪರಿಸರ ಅಥವಾ ಕಲಾ ಶಿಕ್ಷಣಕ್ಕೆ ಸಂಬಂಧಿಸಿದ್ದು. ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ಮೂಲಭೂತ ಶಿಕ್ಷಣಕ್ಕೆ, ಅಗತ್ಯವಾಗಿದ್ದ ವಿದ್ಯೆಗಳಿಗೆ ಪ್ರಾಶಸ್ತ್ಯ ಸಿಕ್ಕಿತೇ ಹೊರತು ಕಲೆಯಂತಹ ವಿಶಿಷ್ಟ ಸಾಂಸ್ಕೃತಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯವೇನೂ ಸಿಗಲಿಲ್ಲ. ಕಾರಣ, ಸ್ವಾತಂತ್ರ್ಯ ಚಳುವಳಿಯೂ ಮತ್ತು ಮೂಲಭೂತ ಬದಲಾವಣೆ, ಅವಶ್ಯಕತೆಗಳೇ ಅಂದಿನ ಪ್ರಮುಖ ಅಗತ್ಯಗಳಾಗಿದ್ದವು. ಅಂತಹುದರಲ್ಲಿ ಅಲ್ಲೊಂದು ಇಲ್ಲೊಂದು ಉಳಿದಿದ್ದ ಸಣ್ಣ ಪುಟ್ಟ ಸಂಸ್ಥಾನಗಳು ತಮ್ಮ ರಾಜಕೀಯ

ಅಳಿವು-ಉಳಿವುಗಳೆಡೆ ಹೆಚ್ಚಿನ ಗಮನವಹಿಸಿದವೇ ಹೊರತು ಸಂಸ್ಕೃತಿಯ ಕಡೆಗಲ್ಲ. ಈ ಸಂದರ್ಭದಲ್ಲಿ ಹಲವು ತೆರದ ಸಂಪ್ರದಾಯದ ಜಡ್ಡುಗಟ್ಟಿದ ಭಾರತದಲ್ಲಿ ಹಲವು ಹೊಸತುಗಳಿಗೆ, ಪ್ರಮುಖ ಬದಲಾವಣೆಗಳಿಗೆ ಕಾರಣವಾಗಿದ್ದ ಬ್ರಿಟಿಷ್ ಸರಕಾರವೇ ಈಗ ಕಲಾಶಾಲೆಗಳನ್ನೂ ತೆರೆದು ದೇಶದ ಸಾಂಸ್ಕೃತಿಕ ಪರಿಸರದಲ್ಲಿ ಕಲೆಗೆ ಹೊಸಬಗೆಯ ಚಾಲನೆಯನ್ನು ನೀಡಿತು. ಲಾಹೋರ್, ಕಲ್ಕತ್ತಾ ಮುಂಬೈ ಮತ್ತು ಮದ್ರಾಸ್‌ಗಳಲ್ಲಿ ಬ್ರಿಟಿಷ್ ಸರಕಾರದ ಕಲಾಶಾಲೆಗಳೊಂದಿಗೆ ಶಾಂತಿನಿಕೇತನದಲ್ಲಿ ರವೀಂದ್ರನಾಥ್ ಠಾಕೂರರ ಕಲಾಭವನವೂ ಸ್ಥಾಪಿತವಾಗಿ ಕಲಾ ಶಿಕ್ಷಣವು ವ್ಯಾಪಕತೆಯನ್ನು ಪಡೆಯಿತು.

ಆದರೆ ಇದೇ ಸಂದರ್ಭದಲ್ಲಿ ಇಂತಹ ಯಾವ ಆಧುನಿಕ ಕಲಾ ವಿದ್ಯಾಲಯವೂ ಕರ್ನಾಟಕ ಅಥವಾ ಇನ್ಯಾವ ಇತರ ರಾಜ್ಯಗಳಲ್ಲಿ ಇರಲಿಲ್ಲವೆಂಬುದು ಈ ಮೇಲಿನ ವಿದ್ಯಾಲಯಗಳ ಉನ್ನತಿಗೆ, ವೈಶಿಷ್ಟ್ಯಕ್ಕೆ ಮತ್ತು ಮುಂದಿನ ಪ್ರಭಾವಗಳಿಗೆ ಕಾರಣವಾಯಿತು. ಎಲ್ಲೋ ಒಂದೆರಡು ಇದ್ದರೂ (ಉದಾ : ಮೈಸೂರಿನ ಸಿ.ಟಿ.ಐ - ಈಗಿನ ಕಾವಾ) ಕಲಾಪರಿಸರದಲ್ಲಿ ಅವುಗಳ ಪಾತ್ರ ಅಂತಹ ಮಹತ್ವದ್ದೇನೂ ಆಗಿರಲಿಲ್ಲ. ಹೀಗಾಗಿ ಕರ್ನಾಟಕವೂ ಸೇರಿದಂತೆ ಉಳಿದೆಲ್ಲ ರಾಜ್ಯಗಳ ವಿದ್ಯಾರ್ಥಿಗಳು ಈ ಮೇಲೆ ಸೂಚಿಸಿದ ಕಲಾವಿದ್ಯಾಲಯಗಳಲ್ಲೇ ಅಭ್ಯಾಸ ಮಾಡಿ ಅಲ್ಲಲ್ಲಿನ ಕಲಾವಿದರ ಪ್ರಭಾವಗಳನ್ನು ತಮ್ಮಲ್ಲಿಗೆ ಕೊಂಡೊಯ್ದರೇ ಹೊರತು ಅನ್ಯರ ಮೇಲೆ ಪ್ರಭಾವ ಬೀರುವಷ್ಟರ ಮಟ್ಟಿಗಿನ ತಮ್ಮತನ, ಅಥವಾ ಗಾಢವಾದ ಕಲಾಪರಿಸರ ತಮ್ಮ ರಾಜ್ಯಗಳಲ್ಲಿ ಹೊಂದಿರಲಿಲ್ಲ. ಹಾಗೇನಾದರೂ ಒಂದು ವೇಳೆ ಆಗಿನ ಸಂದರ್ಭದಲ್ಲಿ ಇಲ್ಲೂ ಅಂತಹ ಕಲಾ ವಿದ್ಯಾಲಯಗಳು, ಪರಿಸರ ಇದ್ದಿದ್ದರೆ ಇಲ್ಲಿನ ಕಲಾಪ್ರಭಾವವೂ ಹೊರನಾಡಿನ ಮೇಲಾಗುವ ಸಾಧ್ಯತೆ, ಅವಕಾಶಗಳನ್ನು ನಿರೀಕ್ಷಿಸಬಹುದಾಗಿತ್ತೇನೋ ! ಇದಕ್ಕೆ ವ್ಯತಿರಿಕ್ತವಾಗಿ ದಂಡಾವತಿಮಠ, ಮಿಣಜಗಿ, ಶಾಂತಲಿಂಗಪ್ಪ ಪಾಟೀಲ, ಎಂ.ಟಿ. ಭೋಸಲೆ, ಶಂಕರಗೌಡ ಬೆಟ್ಟದೂರು, ಎಸ್.ಎಂ. ಪಂಡಿತ್ ಹೆಬ್ಬಾರ್, ಹಡಪದ್, ಜೆ.ಎಸ್. ಖಂಡೇರಾವ್ ಮುಂತಾದವರು ಮುಂಬೈಗೂ, ವೆಂಕಟಪ್ಪ ಇತರರು ಕಲ್ಕತ್ತಾ ಮತ್ತು ಶಾಂತಿನಿಕೇತನಕ್ಕೂ ಕಲಾಭ್ಯಾಸಕ್ಕಾಗಿ ಹೋಗಬೇಕಾಯಿತು. ಹಾಗೆ ಹೋಗಿ ಬಂದವರಲ್ಲಿ ಒಬ್ಬಿಬ್ಬರನ್ನು ಹೊರತುಪಡಿಸಿ ಉಳಿದ ಯಾರೂ ಇಲ್ಲಿ ಇಲ್ಲಿನದೇ ಆದ ವಿಶಿಷ್ಟ ಕಲಾ ಪರಿಸರದ ನಿರ್ಮಾಣಕ್ಕೂ ತೊಡಗಲಿಲ್ಲವೆಂಬುದು ಅತ್ಯಂತ ಖೇದಕರ ಸಂಗತಿ. ಇಂತಹ ಸನ್ನಿವೇಶದಲ್ಲಿ ನಾವು ನಮ್ಮದೇ ಆದ ಪರಂಪರೆಯನ್ನೂ, ವಿಶಿಷ್ಟತೆಯನ್ನೂ ನಿರ್ಮಿಸುವುದೂ, ಪ್ರಭಾವಿಯಾಗಿ ಬೆಳೆಯುವುದೂ ಒತ್ತಟ್ಟಿಗಿರಲಿ, ಇವುಗಳ ಕಲ್ಪನೆಯೂ ಅವರಿಗಿರಲಿಲ್ಲವೆನಿಸುತ್ತದೆ.

ಇಂತಹುದೇ ಇನ್ನೊಂದು ಕಾರಣ ಅಥವಾ ಕೊರತೆಯನ್ನು ಇಲ್ಲಿಯೇ ಹೇಳುವುದು ಯುಕ್ತ. ಅದು ಕಲಾಚಳುವಳಿಗಳನ್ನು ಕುರಿತದ್ದು. ಕಳೆದ ಶತಮಾನದ ಭಾರತೀಯ ಕಲಾ ಇತಿಹಾಸವನ್ನವಲೋಕಿಸಿದರೆ ಹಲವು ಕಲಾಚಳುವಳಿಗಳು ಹುಟ್ಟಿಕೊಂಡುದೂ, ಬೃಹತ್ಪ್ರಮಾಣದ ಪ್ರಭಾವ ಬೀರಿದ್ದೂ ನಿಚ್ಚಳವಾಗಿಯೇ ಕಂಡುಬರುತ್ತದೆ. ಆಧುನಿಕ ಕಲೆಯ ಆರಂಭಿಕ ದೆಸೆಯಲ್ಲಿ ರವಿವರ್ಮ ಅತ್ಯಂತ ಪ್ರಮುಖ ವ್ಯಕ್ತಿ. ಅವನ ಕಲಾ ಚಟುವಟಿಕೆಯನ್ನು ಚಳುವಳಿಯ ಮಟ್ಟಕ್ಕೇರಿಸಲಾಗದಿದ್ದರೂ ಹಲವರ ಮೇಲಾದ ಅವನ ವೈಯಕ್ತಿಕ ಪ್ರಭಾವ ಕಡಮೆಯೇನಲ್ಲ. 'ಭಾರತೀಯತೆ'ಯ ಕಲ್ಪನೆಯ ಹಿನ್ನೆಲೆಯಲ್ಲಿ ಅವನ ಕೊಡುಗೆಯನ್ನು

ಯಾವ ರೀತಿಯಾದರೂ ಪರಿಗಣಿಸಲಿ ; ಅದು ಮುಖ್ಯವಲ್ಲ. ಆದರೆ ಆ ಕಾರಣದಿಂದಲೇ ಮುಂದಿನ ಪ್ರಮುಖ ಚಳುವಳಿಗೂ ಮತ್ತು 'ಭಾರತೀಯತೆ'ಯ ಕುರಿತ ಆಳವಾದ ಚಿಂತನೆಗೂ ಪ್ರೇರಣೆಗಳು ಬಂದುವೆಂಬುದನ್ನೂ ಮರೆಯುವಂತಿಲ್ಲ. ಹೀಗೆ ಒಬ್ಬ ವ್ಯಕ್ತಿಯಾಗಿ ಅವನು ಬೀರಿದಂತಹ ಪ್ರಭಾವವಾಗಲೀ, ಅಥವಾ ಅವನ ಕಾರಣದಿಂದಾಗಿಯೇ ಆದ ಮುಂದಿನ ವಿಶಿಷ್ಟ ಬೆಳವಣಿಗೆಯಾಗಲೀ ಕಲಾವಿದರ ದೊಡ್ಡ ಸಮೂಹವೇ ಆಗಿ ಕರ್ನಾಟಕಕ್ಕೆ ಅಥವಾ ಇತರ ರಾಜ್ಯಗಳಿಗೆ ಸಾಧಿಸಲಾಗಲಿಲ್ಲ. ಇದಕ್ಕೆ ಪ್ರತಿಭೆಯ ಕೊರತೆಯೂ, ವೈವಿಧ್ಯಮಯ ಆಲೋಚನೆಯ-ದೃಷ್ಟಿಕೋನದ ಕೊರತೆಯೂ ಮತ್ತು ದಿಟ್ಟ ಹೆಜ್ಜೆಯನ್ನಿಡಬೇಕಾದಲ್ಲಿನ ಅಧೈರ್ಯವೂ ಕಾರಣವೆನ್ನಬಹುದು.

ಇನ್ನು ಅಮೃತಾಶೇರ್‌ಗಿಲ್‌ಳಂತಹ ಕಲಾವಿದೆ ಪೂರ್ವ-ಪಶ್ಚಿಮಗಳ ದ್ವಂದ್ವಗಳ ಮಧ್ಯೆಯೂ ಯಶಸ್ವಿಯಾದ ಕಲಾವಿದೆ ; ಅಷ್ಟಲ್ಲದೆ ಕೆಲವು ಕಲಾವಿದರ ಮೇಲಾದ ಅವಳ ಪ್ರಭಾವವನ್ನೂ ಅಲ್ಲಗಳೆಯುವಂತಿಲ್ಲ. ಅವಳನ್ನು ಅನುಕರಿಸಿದ ಕಲಾವಿದರು ಕಣ್ಣು ಮುಚ್ಚಿಕೊಂಡು ಅನುಕರಿಸಿದರೆಂದು ಹೇಳಬೇಕಾಗುವುದೇ ಹೊರತು ಅವಳನ್ನು ಕಾಡಿದಂತಹ ಸಮಸ್ಯೆ, ದ್ವಂದ್ವಗಳು ಇವರನ್ನು ಕಾಡಿದಂತೆ ಕಂಡು ಬರುವುದಿಲ್ಲ. ಜೊತೆಗೆ ಅವಳಿಗೆ ದೊರೆತ ಉಚ್ಚಮಟ್ಟದ ಶಿಕ್ಷಣವೂ ಇಲ್ಲಿನವರಿಗೆ ದೊರೆಯಲಿಲ್ಲೆಂದು ಹೇಳಿದರೆ ತಪ್ಪಾಗಲಾರದೇನೋ? ಆದರೆ ಪರ್ಯಾಯವಾದ ವಿದ್ಯಾಲಯಗಳು ಇಲ್ಲಿಯೂ (ಬ್ರಿಟಿಷ್ ಸರಕಾರ ಸ್ಥಾಪಿಸಿದವುಗಳು) ಇದ್ದರೂ ಕಲಾವಿದರನ್ನು ಕಲಾತ್ಮಕ ಮತ್ತು ವೈಚಾರಿಕವಾಗಿ ಮೇಲೆತ್ತುವಲ್ಲಿ ಹಾಗೂ ಪರಿಪೂರ್ಣ ಬೆಳವಣಿಗೆಯನ್ನು ಸಾಧಿಸುವಲ್ಲಿ ಪಡೆಯಬೇಕಾದಷ್ಟು ಸಫಲತೆಯನ್ನು ಪಡೆಯಲಿಲ್ಲವೆನಿಸುತ್ತದೆ.

ಹೀಗಾಗಿ ಅಂತಹ ವಿದ್ಯಾಲಯಗಳಲ್ಲಿ ಕೇವಲ ಕೌಶಲದಲ್ಲಿ ಕಲಾವಿದರು ಪಳಗಿದರೇ ಹೊರತು ನಿಜವಾದ ಕಲೆಯ ದರ್ಶನದಿಂದ ದೂರವೇ ಉಳಿದರೆನ್ನಬೇಕಾಗುತ್ತದೆ. ಇಂತಹ ವಿದ್ಯಾಲಯಗಳಿಂದ ಹೊರಬಂದ ಕಲಾವಿದರೆಲ್ಲ ವೈಯಕ್ತಿಕವಾಗಿ ಅಷ್ಟಿಷ್ಟು ಸಾಧಿಸಿ ಕಾರಣಾಂತರಗಳಿಂದ ಖ್ಯಾತರಾದರೇ ಹೊರತು ಹೊಂದಬೇಕಿದ್ದ ಅಂತರ್ದೃಷ್ಟಿಗೆ ಹೊರತಾಗಿಯೇ ಬಹುತೇಕ ಸಂದರ್ಭದಲ್ಲಿ ಉಳಿದರು. ಇಂತಹ ಸಂದರ್ಭದಲ್ಲಿ ಯಾವ ಬಗೆಯ ಪ್ರಭಾವಗಳನ್ನು ನಿರೀಕ್ಷಿಸಲಾದೀತು? ಆದರೆ ಇಂದಿನ ಹಲವು ಕಲಾವಿದರು, ಮುಖ್ಯವಾಗಿ ಅಸಂಖ್ಯ ಯುವ ಕಲಾವಿದರು ಶಿಸ್ತುಬದ್ಧವಾದ ಶಿಕ್ಷಣವನ್ನು ಪಡೆದೂ ಸ್ವೋಪಜ್ಞ ಕಲಾವಿದರಾಗದೆ ಹಲವು ಪಾಶ್ಚಿಮಾತ್ಯ ಪ್ರಭಾವಗಳನ್ನು, ಪರಿಕಲ್ಪನೆಗಳನ್ನು ಕಣ್ಣಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಅನುಸರಿಸಿ ಆ ಪ್ರಭಾವದ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿರುವುದು ನಮ್ಮ ದುರಂತ. ಇದು ಪ್ರತಿಭೆಯ, ವೈಚಾರಿಕತೆಯ, ವಿವೇಕದ ಮತ್ತು ಸಾಮಾಜಿಕ ಪ್ರಜ್ಞೆ, ಕಳಕಳಿಯ ಕೊರತೆಯೇ. ಹೀಗಾಗಿ ಭವಿಷ್ಯದಲ್ಲಿ ನಾವು ಕಲಾ ಸ್ವೋಪಜ್ಞತೆಯನ್ನೂ ಮತ್ತು ಚಿಂತನಶೀಲ ಹಾಗೂ ಜನಪರವಾದ ಶ್ರೇಷ್ಠ ಕಲೆಯನ್ನು ಕಾಣದೇ ಹೋಗಬಹುದಾದ್ದರಿಂದ, ಇಂದಿನ ಈ ಯುವ ಕಲಾವಿದರಿಂದಲೂ ಅಂತಹ ಮಹತ್ವದ ಬೆಳವಣಿಗೆಯನ್ನು ಕಾಣಲಾಗದೇನೋ?! ಆದರೆ ಹಾಗಾಗದಿರಲೆಂದು ಹಾರೈಸೋಣ.

ಇನ್ನು ವ್ಯಾಪಕವಾದ ಕಲಾ ಪ್ರಭಾವಗಳಿಗೆ ಕಲೆ ಪಡೆದುಕೊಳ್ಳುವ ಚಳುವಳಿ ರೂಪವೂ ಅವಕಾಶವನ್ನೀಯುತ್ತದೆನ್ನುವುದನ್ನು ನಾವು ಗಮನಿಸಬೇಕು. ಇಂಥ ಪ್ರಭಾವಗಳಿಗೆ ಮೊದಲು

ಅವಕಾಶವಾದದ್ದು ಬಂಗಾಳದ ಕಲಾ ಪುನರುಜ್ಜೀವನ ಪ್ರಕ್ರಿಯೆಯಲ್ಲಿಯೇ. ಇದನ್ನು ಭಾರತೀಯ ಕಲಾ ಸಂದರ್ಭದಲ್ಲಿ ಮೊದಲ ಕಲಾಚಳುವಳಿಯೆನ್ನಬಹುದು. ಕಲೆಯ ವಸ್ತು ಮತ್ತು ಮುಖ್ಯವಾಗಿ ರೂಪದ ಹಿನ್ನೆಲೆಯಲ್ಲಿ ಉಂಟಾದ ಭಾರತೀಯತೆಯ ಪ್ರಶ್ನೆಯೇ ಜೀವಾಳವಾಗಿದ್ದ ಈ ಚಳುವಳಿಯ ಪ್ರೇರಣೆಗಳು ಬಂದದ್ದು ಎರಡು ಮೂಲಗಳಿಂದ - ಒಂದು, ರವಿವರ್ಮನ ದ್ವಂದ್ವ ಮೂಲ ಕಲೆ. ಇನ್ನೊಂದು, ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ಗಾಂಧೀಜಿಯವರು ಕರೆನೀಡಿದ 'ಸ್ವದೇಶಿ'ಯ ಕಲ್ಪನೆಯಿಂದ. ಇಲ್ಲಿಯೂ ರವಿವರ್ಮನ ಕಲೆಯೇ ಪ್ರಧಾನವಾಗಿ ಭಾರತೀಯತೆಯ ಪ್ರಜ್ಞೆಗೆ ಕಾರಣವಾಯಿತೆನ್ನುವುದಕ್ಕಿಂತ, ಇದಕ್ಕೆ, ರಾಷ್ಟ್ರೀಯತೆಯೇ ಮೂಲ ಪ್ರೇರಣೆಯಾಗಿ 'ಭಾರತೀಯತೆ'ಯ ಪರಿಕಲ್ಪನೆಯ ಅಸ್ತಿತ್ವಕ್ಕೆ ರವಿವರ್ಮನು ಈಡಾಗಬೇಕಾಯಿತೆನ್ನುವುದು ಸೂಕ್ತ. 'ಸ್ವದೇಶಿ'ಯ ಪ್ರೇರಣೆಯಿಂದ ಕಲಾಕ್ಷೇತ್ರದಲ್ಲಿ ರಾಷ್ಟ್ರೀಯತೆಯ ಧೋರಣೆ, ಪೋಷಣೆಗಳು ಎಷ್ಟರಮಟ್ಟಿಗೆ ಊರ್ಜಿತಗೊಂಡವೆಂದು ಪರಿಶೀಲಿಸಿದರೆ ಯಾವ ಮಹತ್ತರ ಪರಿಣಾಮಗಳೂ ಕಂಡು ಬರುವುದಿಲ್ಲ. ಆದರೆ, ಕೇವಲ ಭಾರತೀಯವೇ ಆದ ಕಲಾಪರಿಭಾಷೆ, ಶೈಲಿ ರೂಪುಗೊಳ್ಳುವಲ್ಲಿ ಅದರ ಪಾತ್ರ ಅತಿ ಮುಖ್ಯವಾಯಿತು. ಈ ದಿಸೆಯಲ್ಲಿ ಚಳುವಳಿಯ ನೇತಾರರಾದ ಅಬನೀಂದ್ರನಾಥ ಠಾಕೂರ್ ಮತ್ತಿನ್ನಿತರ ಕೆಲವರದು ಕಲಾತ್ಮಕತೆಯ ದೃಷ್ಟಿಯಿಂದ ಮಹತ್ವಪೂರ್ಣ ಎನ್ನಬಹುದಾದ ಸಾಧನೆಯೇನಲ್ಲವಿದ್ದರೂ ಮುಂದೆ ಬಂದ ಕೆಲವು ಪ್ರತಿಭಾನ್ವಿತ, ಸ್ವೋಪಜ್ಞ ಕಲಾವಿದರಿಗೆ ಒಂದು ನಿಶ್ಚಿತ, ಸ್ಪಷ್ಟ ಮಾರ್ಗದ ದರ್ಶಕರಾದರೆಂಬುದರಲ್ಲಿ ಎರಡು ಮಾತಿಲ್ಲ. ಈ ಚಳುವಳಿಯ ವ್ಯಾಪಕ ಪ್ರಭಾವದಿಂದಾಗಿ ಹಲವಾರು ಜನ ಕಲಾವಿದರು ಭಾರತೀಯತೆಯ ಪರಿಕಲ್ಪನೆಯಡಿಯಲ್ಲಿ ತಮ್ಮದೇ ಸ್ವಂತಿಕೆಯ ಹುಡುಕಾಟ ನಡೆಸುವಂತಾಯಿತು. ಇದಕ್ಕೆ ಕರ್ನಾಟಕದಿಂದಲೇ ಕೊಡಬಹುದಾದ ಉದಾಹರಣೆ - ಕಲಾವಿದ ವೆಂಕಟಪ್ಪನವರು.

ಈ ಚಳುವಳಿಗೆ ಮತ್ತು ಅದರ ವ್ಯಾಪಕ ಪ್ರಭಾವಗಳಿಗೆ ಮೂಲವಾದ ಪರಿಸರ ಆ ಸಂದರ್ಭದಲ್ಲಿ ನಿರ್ಮಿತವಾಗಿತ್ತು. ಸ್ವಾತಂತ್ರ್ಯ ಚಳುವಳಿಯ ತೀವ್ರತೆ ಮತ್ತು ಸಾಂಸ್ಕೃತಿಕ ಪರಂಪರೆ ಹಾಗೂ ಅದರ ಚೈತನ್ಯಶೀಲ ನಿರಂತರತೆಗಳು ಅಲ್ಲಿನ ನೆಲವನ್ನು ಸೃಜನಶೀಲ ಮತ್ತು ಕ್ರಿಯಾಶೀಲವಾಗಿ ಫಲವತ್ತುಗೊಳಿಸಿದ್ದವು. ಹೀಗಾಗಿ ಭಾರತೀಯ ಕಲಾಕ್ಷೇತ್ರದಲ್ಲಿ ಪರಿಷ್ಕೃತವಾದ ಹೊಸ ಬೀಜವೊಂದು ಸಮೃದ್ಧವಾದ ಮರವಾಗಿ ಬೆಳೆದು ತನ್ನ ಕಂಪನ್ನು ಇತರೆಡೆಗೂ ಬೀರುವುದಕ್ಕೆ ಸಾಧ್ಯವಾಯಿತು. ಆದರೆ ಅಂತಹ ಯಾವುದೇ ಪರಿಸರ, ಪೂರ್ವಸಿದ್ಧರಂಗವು ಕರ್ನಾಟಕಕ್ಕೆ (ಹೆಚ್ಚುಕಮ್ಮಿ ಇತರ ರಾಜ್ಯಗಳಿಗೂ) ದೊರಕದೆ ಇಲ್ಲಿಯೂ ಅಂತಹುದೊಂದು ಚಳುವಳಿಯು ಹುಟ್ಟಿ ಬರುವುದು ಸಾಧ್ಯವಾಗಲಿಲ್ಲ. ಹಾಗೆಂದು ಅಲ್ಲಿ ಏನೇನಾಯಿತೋ ಅದೆಲ್ಲವೂ ಇಲ್ಲಿಯೂ ಆಗಬೇಕಿತ್ತೆಂಬುದು ಇದರರ್ಥವಲ್ಲ. ಆದರೆ ಒಂದು ವಿಷಯದ ಕುರಿತು ಎರಡು ಭಿನ್ನ ಪ್ರದೇಶ-ಪರಿಸರ, ವ್ಯಕ್ತಿ ಅಥವಾ ಕಾಲದ ನಡುವಿನ ಬೆಳವಣಿಗೆ, ಹಿನ್ನಡೆ-ಮುನ್ನಡೆಗಳ ಕುರಿತ ತೌಲನಿಕ ಚರ್ಚೆಯಲ್ಲಿ ಆ ಎರಡರ ಹಿನ್ನೆಲೆಯ ಸಾದೃಶ್ಯ-ವೈದೃಶ್ಯಗಳನ್ನು ತೌಲನಿಕವಾಗಿ ಪರಿಶೀಲಿಸುವುದು ಸಹಜ ಮತ್ತು ವಾಸ್ತವ ದೃಷ್ಟಿಯನ್ನು ಕಂಡುಕೊಳ್ಳುವಲ್ಲಿ ಸಹಾಯಕ.

ಹಾಗೆ ಕರ್ನಾಟಕವನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಲ್ಲಿನ ಪೂರ್ವರಂಗ, ಹಿನ್ನೆಲೆಗಳನ್ನೇ

ಇಲ್ಲಿ ಹುಡುಕುತ್ತ ಹೋದರೆ ಭ್ರಮನಿರಸನವಾಗುವುದು ಖಂಡಿತ. ಅಲ್ಲಿನವರನ್ನು 'ಭಾರತೀಯತೆ'ಯ ಹುಡುಕಾಟಕ್ಕೆ ತೊಡಗಿಸಿದಂತಹ 'ಸ್ವದೇಶಿ'ಅಥವಾ 'ರಾಷ್ಟ್ರೀಯತೆ'ಯಂತಹ ಅಥವಾ ಅದಕ್ಕೆ ಪರ್ಯಾಯವಾದಂತಹ ಯಾವ ಕಲ್ಪನೆಯೂ ಬೆಳೆದು ಬರುವಂತಹ ವಾತಾವರಣ ಇಲ್ಲಿರಲಿಲ್ಲ. ಆ ಪರಿಕಲ್ಪನೆಗಳ ಹುಟ್ಟಿಗೆ ಕಾರಣವಾದ ಸ್ವಾತಂತ್ರ್ಯ ಚಳುವಳಿಯು ಮಧ್ಯ ಮತ್ತು ಉತ್ತರ ಭಾರತದಲ್ಲಿ ಹೊಂದಿದ್ದ ಉಗ್ರ ಮತ್ತು ತೀವ್ರ ಸ್ವರೂಪಗಳು ದಕ್ಷಿಣದಲ್ಲಿಯ ಕೆಲವೇ ಕೆಲವು ನಿದರ್ಶನಗಳನ್ನು ಹೊರತು ಪಡಿಸಿದರೆ, ಯಾವ ತೀವ್ರ ಪರಿಣಾಮವನ್ನೂ ಹೊಂದಿರಲಿಲ್ಲ. ಇದರಿಂದ ಸಮಾಜದ ಸಾಂಸ್ಕೃತಿಕ ವಲಯವು ಅಷ್ಟೇನೂ ಪ್ರಭಾವಿತವಾಗಲಿಲ್ಲ. ಅವೆಲ್ಲವೂ ಒಂದು ರೀತಿಯಲ್ಲಿ ನಿಷ್ಕ್ರೀಯವೇ ಆಗಿದ್ದವೆನ್ನಬಹುದು. ಅದಕ್ಕೆ ಇಲ್ಲಿನದೇ ಪ್ರಾದೇಶಿಕ ಸ್ವತಂತ್ರ ಸಂಸ್ಥಾನಗಳೂ ಕೆಲವು ಕಾರಣವಾಗಿದ್ದವು. ಪ್ರಸ್ತುತ ವಿಷಯಕ್ಕೆ ಮೂಲವಾದ ಕರ್ನಾಟಕವನ್ನೇ ಈ ಹಿನ್ನೆಲೆಯಲ್ಲಿ ನೋಡಿದಾಗ ಏಕೀಕರಣದ ಮೊದಲು ಮತ್ತು ಸ್ವಾತಂತ್ರ್ಯಪೂರ್ವದಲ್ಲಿ ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ ಮತ್ತು ಮೈಸೂರು ರಾಜ್ಯಗಳೆಂಬ ನಾಲ್ಕು ಒಡಕುಗಳಾಗಿ ಕಂಡು ಬರುತ್ತದೆ. ಈ ಬಗೆಯ ಪ್ರಾದೇಶಿಕ ಮತ್ತು ರಾಜಕೀಯ ಒಡಕಿನಿಂದ ನಾಡಿನಲ್ಲಿ ರಾಷ್ಟ್ರೀಯ ಚಳುವಳಿಯು ಏಕಸೂತ್ರತೆಯನ್ನು ಅಥವಾ ಸಮಗ್ರತೆಯನ್ನು ಹೊಂದಲಿಲ್ಲ. ಪ್ರಾಂತೀಯವಾಗಿ ನಡೆದ ಕೆಲವು ಸಣ್ಣ-ಪುಟ್ಟ ಚಳುವಳಿ, ದಂಗೆಗಳು ವ್ಯಾಪಕ ಪ್ರಭಾವ, ಅಸ್ತಿತ್ವಗಳನ್ನು ಹೊಂದದೆ ತಾತ್ಕಾಲಿಕವಾಗಿದ್ದವು. ನಾಡಿನ ಉತ್ತರದಲ್ಲಿನ ಕೆಲವು ಪ್ರದೇಶಗಳಲ್ಲಿನ ಹೈದರಾಬಾದಿನ ನಿಜಾಮನ ಆಡಳಿತದಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಹೇಳಿಕೊಳ್ಳುವಂತಹ ಮಟ್ಟದಲ್ಲೇನೂ ಉಂಟಾಗಲಿಲ್ಲ. ಬದಲಾಗಿ ಅವರ ಧರ್ಮಾಂಧತೆಯು ಅಥವಾ ಹಿಂದೂ ದ್ವೇಷ ನೀತಿಯು ಮತೀಯ ಘರ್ಷಣೆ, ಹಿಂಸಾಚಾರ, ಆ ಮೂಲಕ ನಿಜಾಮ ವಿರೋಧಿ ಚಳುವಳಿ ಹುಟ್ಟಿಕೊಳ್ಳಲು ಕಾರಣವಾಯಿತು. ಇನ್ನು ದಕ್ಷಿಣದಲ್ಲಿ ಬ್ರಿಟಿಷರಿಗೆ ಪ್ರಬಲ ವಿರೋಧವೊಡ್ಡಿದವನು ಟಿಪ್ಪುಸುಲ್ತಾನನೇ ಹೊರತು ಮೈಸೂರಿನ ಒಡೆಯರಲ್ಲ. ಒಡೆಯರ ಆಳ್ವಿಕೆಯ ಕಾಲಕ್ಕೆ ಕಂಡುಬರದ ರಾಷ್ಟ್ರೀಯ ಪ್ರಜ್ಞೆಯು ಬ್ರಿಟಿಷ್ ಆಳ್ವಿಕೆಯಲ್ಲಿಯೇ ಉಂಟಾಯಿತು. ಹೀಗೆ ಸ್ವಹಿತವೇ ಮುಖ್ಯವಾಗಿದ್ದ ನಿಜಾಮ ಮತ್ತು ಒಡೆಯರು ಸ್ವಾರ್ಥಪರರಾಗಿ ಬ್ರಿಟೀಷರಿಗೆ ಅನುಕೂಲರಾಗಿದ್ದ ಸಂದರ್ಭದಲ್ಲಿ ಯಾವ ರಾಷ್ಟ್ರೀಯತೆಗೂ ಇಲ್ಲಿ ಇಂಬಿರಲಿಲ್ಲ. ಇಂಥ ಸ್ಥಿತಿಯಲ್ಲಿ ಸಾಂಸ್ಕೃತಿಕ, ವೈಚಾರಿಕ ವಲಯಗಳು ಹೊಸದೊಂದು ಬಗೆಯ ಚಾಲನೆಗಳಿಗೆ ಒಳಪಡುವ - ಹೊಸ ಆಯಾಮಗಳನ್ನು ಪಡೆಯುವ ಅವಕಾಶಗಳು ಇರಲಿಲ್ಲ, ಅಥವಾ ಉಂಟಾಗಲಿಲ್ಲ. ಹೀಗಾಗಿ ಬಂಗಾಳದಲ್ಲಿ ಕಲೆ ಪಡೆದುಕೊಂಡ ಪ್ರೇರಣೆಗಳು, ಬದಲಾವಣೆಗಳನ್ನು ಅಥವಾ ಅದಕ್ಕೆ ಸಮಾನವಾದ ನೆಲೆಗಳನ್ನು ಕರ್ನಾಟಕದ ಕಲೆ ಪಡೆದುಕೊಳ್ಳದ ಸ್ಥಿತಿಯಲ್ಲಿ ಇಲ್ಲಿನ ಕಲಾವಿದರ ಪ್ರಜ್ಞೆ ಮೈಸೂರು ಮಹಾರಾಜರ ಮುಖಚಿತ್ರಗಳನ್ನೂ, ಆಸ್ಥಾನದ ವೈಭವ-ಇತರ ಕಾರ್ಯ ಚಟುವಟಿಕೆಗಳನ್ನು ಮತ್ತು ಪ್ರಕೃತಿಚಿತ್ರಗಳ ರಚನೆಗಿಂತಲೂ ಮೇಲಿನ ಸ್ತರಕ್ಕೆ ಬೆಳೆಯಲೇ ಇಲ್ಲ. ಕಲಾವಿದನಿಗೆ ಪರಂಪರೆಯ, ಸಮಕಾಲೀನತೆಯ, ಸಮಾಜದ ಪ್ರಜ್ಞೆಯಿಲ್ಲದೇ ಹೋದರೆ ಅವನ ಕೃತಿ ಯಾವ ಗಳಿಗೆಯಲ್ಲೂ ಯಾವಕಾರಣಕ್ಕೂ ಗಟ್ಟಿಯಾಗಿ ನಿಲ್ಲುವುದಿಲ್ಲ. ತತ್ಕಾಲದಲ್ಲಿ ತಾನೂ ಬೆಳೆಯದೆ ಮುಂದಿನ ಬೆಳವಣಿಗೆಗೂ ಮಾರಕವಾಗುತ್ತದೆ. ಸನ್ನಿವೇಶದೊಂದಿಗೆ ಸ್ಪಂದಿಸಿದ ಬಂಗಾಳದ

ಕಲೆ ಚಲನಶೀಲತೆ ಮತ್ತು ಚಾಲಕ ಶಕ್ತಿಗಳನ್ನು ಪಡೆಯಿತು. ಆದರೆ ಅದಕ್ಕೆ ವ್ಯತಿರಿಕ್ತವಾಗಿ, ಕಾಲದೊಂದಿಗೆ ಪ್ರತಿಕ್ರಿಯಿಸದ ಇಲ್ಲಿನ ಕಲೆ ತಾಟಸ್ಥ್ಯವನ್ನು ಹೊಂದಿದ ಸಂದರ್ಭದಲ್ಲಿ ಅದರಿಂದ ಚಾಲನೆಯ ಅಂಶಗಳನ್ನು, ಪ್ರೇರಣೆಗಳನ್ನೂ ಅಪೇಕ್ಷಿಸುವುದಾದರೂ ಹೇಗೆ ?

ಇನ್ನು ಬಂಗಾಳದ ಚಳುವಳಿಯ ನಂತರ ಅದಕ್ಕಿಂತಲೂ ತುಂಬ ಭಿನ್ನವಾದ, ವ್ಯಾಪಕವೂ ಆದ ಮತ್ತು ಭಾರತೀಯ ಕಲೆಗೆ ಹೊಸದಿಕ್ಕನ್ನೇ ತೋರಿದ ಚಳುವಳಿ ಮುಂಬಯಿಯ ಪ್ರಗತಿಶೀಲರದು (Progressive Artists Group-PAG). ಈ ಗುಂಪಿನ ಕಲಾವಿದರು ಕಲೆಯ ರೂಪ ಮತ್ತು ವಸ್ತುವಿನ ಕುರಿತು ಹೊಂದಿದ್ದ ಆಧುನಿಕ ವಿಚಾರಗಳು, ಭಾರತೀಯ ಸಂದರ್ಭದಲ್ಲಿ ಪಾಶ್ಚಾತ್ಯ ಪ್ರಭಾವಗಳಿಗೆ ತಮ್ಮನ್ನು ತೆರೆದುಕೊಂಡ ರೀತಿಯನ್ನು ವ್ಯಕ್ತಪಡಿಸುತ್ತದೆ. ಅವರ ನಡುವೆ ನಡೆಯುತ್ತಿದ್ದ ಚರ್ಚೆ, ವಿಚಾರ-ವಿಮರ್ಶೆಗಳು ಕೃತಿರೂಪದಲ್ಲಿ ವ್ಯಕ್ತವಾದಾಗ ಭಾರತೀಯ ಕಲೆ ಮತ್ತೊಂದೇ ಹೊಸ ಆಯಾಮವನ್ನು ಪಡೆಯಿತು. ಬಂಗಾಳದಕ್ಕಿಂತಲೂ ಹೆಚ್ಚು ಸ್ಪಷ್ಟವೂ, ತತ್ಕಾಲೀನ ಸಂದರ್ಭಕ್ಕೆ ಸೂಕ್ತ ಮತ್ತು ಅರ್ಥಪೂರ್ಣವೂ ಆದ 'ಆಧುನಿಕತೆ' ಭಾರತದಲ್ಲಿ ಮೂಡಿತು. ಇಡೀ ಕಲಾವಲಯವೇ ಚಕಿತವಾಗುವಂತಹ ವಿಸ್ತೃತ ಪ್ರಭಾವ, ಪರಿಣಾಮಗಳ ಪರಿಸರ ನಿರ್ಮಾಣವಾಯಿತು. ಬಹುತೇಕ ಸಮಕಾಲೀನ ಕಲಾವಿದರ ವಿಚಾರ, ಮಾರ್ಗಗಳು ಇದರಿಂದ ನಿರ್ದೇಶಿತವಾದವು. ಆದರೆ ಮುಂಬೈಯಲ್ಲಾದಂತಹ ಯಾವ ಚಟುವಟಿಕೆಗಳೂ ಕರ್ನಾಟಕದಲ್ಲಿ ನಡೆಯಲೇ ಇಲ್ಲ. ಹೇಳಬಹುದಾದ ಇನ್ನೊಂದು ಮಾತೆಂದರೆ, ಹಲವು ಜನ ಕನ್ನಡಿಗರು ಕಲಾಭ್ಯಾಸಕ್ಕಾಗಿ ಹೊರರಾಜ್ಯಗಳಿಗೆ ಹೋಗಿ ಬರುವ ಮುನ್ನ ಇಲ್ಲಿ ಆಧುನಿಕತೆಯ ಸ್ಪರ್ಶವೇ ಅದರ ಮೂಲಾರ್ಥದಲ್ಲಾಗಿರಲಿಲ್ಲ. ಹಾಗೆ ಹೋಗಿ ಬಂದವರಲ್ಲಿ ಕೆಲವರ ಶ್ರಮ-ಪ್ರಯತ್ನಗಳಿಂದಾಗಿ ಆಧುನಿಕ ಕಲಾಕ್ಷೇತ್ರದಲ್ಲಿ ಕರ್ನಾಟಕವೂ ಗುರುತಿಸಿಕೊಳ್ಳುವಂತಾದುದೂ ತೀರ ಇತ್ತೀಚೆಗೆ. ಇದರ ಇತಿಹಾಸವೇನಿದ್ದರೂ ಇಂದಿಗೆ ಮೂವತ್ತು ವರ್ಷಗಳ ಒಳಗಿನದೇ. ಪ್ರಾರಂಭಿಕ ಹಂತವನ್ನು ಇನ್ನೂ ಒಂದೆರಡು ದಶಕಗಳಷ್ಟು ಹಿಂತಳ್ಳಬಹುದಾದರೂ ಇಲ್ಲಿನ ಪ್ರಾರಂಭಿಕ ಅವಸ್ಥೆ ಅಲ್ಲಿನದಕ್ಕೆ ಸಂವಾದಿಯಾಗುವುದಿಲ್ಲ.

ದಕ್ಷಿಣದಲ್ಲಿ ಚೋಳಮಂಡಲ ಕಲಾಗ್ರಾಮದ ಪ್ರಭಾವವನ್ನೇನು, ಅಲ್ಲಗಳೆಯುವಂತಿಲ್ಲ. ಅಲ್ಲಿ ತೊಡಗಿ, ಅಲ್ಲಿನ ಕಲೆಯನ್ನು ಮೈತುಂಬಿಕೊಂಡ ಕಲಾವಿದರ ಕೊರತೆಯೇನೂ ಇಲ್ಲ. ಕರ್ನಾಟಕದಲ್ಲೂ ಅಂತಹ ಕಲಾವಿದರಿದ್ದಾರೆ. ಆದರೆ ಇಲ್ಲಿ ಅಂತಹ ಯಾವ ಸಾಮೂಹಿಕ ಕಲಾಚಟುವಟಿಕೆಗಳೂ ಜರುಗಲಿಲ್ಲೆಂಬುದನ್ನು ವಿಶೇಷವಾಗೇನೂ ಮತ್ತೆ ಹೇಳಬೇಕಿಲ್ಲ. ಅಲ್ಲದೆ ದೇಶದ ಇತರೆಡೆ, ಉದಾಹರಣೆಗೆ ಕಲ್ಕತ್ತಾ, ಬರೋಡಾ, ದೆಹಲಿಗಳಲ್ಲಿ-ಯಂತೆ ಇಲ್ಲಿ ಯಾವ ಸಾಮೂಹಿಕ ಚಟುವಟಿಕೆಗಳೂ ಸಾಗಲಿಲ್ಲ. ಹೀಗೆ ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಕಲೆಗೆ ಬೇಕಾಗಿದ್ದ ವಿಶಿಷ್ಟ ಪರಿಸರದ ಶೂನ್ಯತೆಯಿತ್ತು. ಇಂತಹ ಬರಗಾಲದಲ್ಲಿಯ ಬರಪೀಡಿತ ಕಲಾವಿದರು ಹೊರಗಡೆಯ ನೀರು, ಆಹಾರವನ್ನೇ ಪಡೆದು ತಮ್ಮ ಬರವನ್ನು ನಿವಾರಿಸಿಕೊಂಡರೇ ಹೊರತು ಹೊರಗಿನವರಿಗೆ ನೀಡಬಹುದಾದಷ್ಟು ಸಮೃದ್ಧಿಯನ್ನು ಸಾಧಿಸಲಿಲ್ಲ, ಅದಕ್ಕೆ ಬೇರೆ ರೀತಿಯ ಕಾರಣಗಳನ್ನು ಕೊಡಬಹುದು.

ಕಲೆಯ ಬೆಳವಣಿಗೆಯಲ್ಲಿ ಕಲಾವಿದ್ಯಾಲಯಗಳ ಪಾತ್ರ ಮಹತ್ವದ್ದಾಗಿದೆ. ಆಧುನಿಕ

ರೀತಿಯ ಕಲಾ ಶಿಕ್ಷಣವನ್ನು ನೀಡುವ ವಿದ್ಯಾಲಯಗಳು ಸ್ಥಾಪಿತವಾದುದರ ಬಗ್ಗೆ ಹಿಂದೆಯೇ ಪ್ರಸ್ತಾಪಿಸಿದ್ದೇನೆ. ಕೇವಲ ಸಾಲ್ಕೈದಿದ್ದ ಕಲಾವಿದ್ಯಾಲಯಗಳ ಸಂಖ್ಯೆ ಸ್ವಾತಂತ್ರ್ಯ ನಂತರ ಹೆಚ್ಚಾಗಿ ದೇಶದೆಲ್ಲೆಡೆ ಕಲೆಯ ಹೊಸ ಅಲೆಗಳು ಹಬ್ಬಿದವು. ಕರ್ನಾಟಕದಲ್ಲಿಯೂ ಹತ್ತಾರು ಕಲಾಶಾಲೆಗಳು (ಮೈಸೂರಿನ ಕಾವಾ-ಆಗ CTI - 19ನೇ ಶತಮಾನದ ಕೊನೆ, ಅ.ನ.ಸು.ರವರ - ಕಲಾಮಂದಿರ ಬೆಂಗಳೂರು, 1919, ಧಾರವಾಡದಲ್ಲಿ ಡಿ.ವಿ. ಹಾಲಭಾವಿ ಯವರ ಕಲಾಶಾಲೆ, 1930, ಗದಗದಲ್ಲಿ ಟಿ.ಪಿ. ಅಕ್ಕಿಯವರ ವಿಜಯ ಕಲಾಮಂದಿರ 1942 - ಇವುಗಳನ್ನು ಹೊರತುಪಡಿಸಿ) ಸ್ಥಾಪಿತವಾದದ್ದು ಸ್ವಾತಂತ್ರ್ಯ ನಂತರದಲ್ಲಿಯೇ. ಹೀಗಾಗಿ ಇಲ್ಲಿ ವ್ಯವಸ್ಥಿತವಾದ ಕಲಾಶಿಕ್ಷಣ, ಆಧುನಿಕ ಕಲೆಯ ಪ್ರಬುದ್ಧ ಬೆಳವಣಿಗೆ ಎಲ್ಲವೂ ಕಳೆದ ಶತಮಾನದ ಉತ್ತರಾರ್ಧಕ್ಕೇ ಸೇರಿದವುಗಳು. ಎಂದರೆ, ಇದಕ್ಕೆ ಐವತ್ತು ವರ್ಷಗಳಾಚೆನ ಇತಿಹಾಸ ಅಥವಾ ಅಸ್ತಿತ್ವವಿಲ್ಲ.

ಹೀಗಾಗಿ ಸಹಜವಾಗಿಯೇ ಕರ್ನಾಟಕದ ಮತ್ತು ಇತರ ಅಂತಹ ರಾಜ್ಯಗಳ ಹಾಗೂ ಈ ಮೊದಲೇ ವ್ಯವಸ್ಥಿತ ಶಿಕ್ಷಣ ನೀಡುತ್ತಿದ್ದ ರಾಜ್ಯಗಳ ಕಲಾ-ಪ್ರೌಢಿಮೆಯಲ್ಲಿ ತರ-ತಮವಿದ್ದುದು ಸಹಜವೇ. ಇದರಿಂದ ಸ್ವಾಭಾವಿಕವಾಗಿಯೇ ಕಲೆಯಲ್ಲಿ ಮುಂದುವರಿದ ಪ್ರದೇಶಗಳು ಇತರ ಪ್ರದೇಶಗಳನ್ನು ನಿರ್ದೇಶಿಸುವಂತಾಯಿತು. ಇಂತಹ ಪ್ರದೇಶಗಳಿಂದ ಕಲಿಯಲಿಕ್ಕೆ ಹೋದವರು ಅಲ್ಲಿಯ ರೀತಿ-ಪರಂಪರೆಯನ್ನೇ ಇಲ್ಲಿ ಮುಂದುವರಿಸಿದರು. ಹೀಗಾಗಿ ಅಲ್ಲಿಯ ಪ್ರಭಾವಗಳೇ ಇಲ್ಲೆಲ್ಲ ಬೆಳೆದು ನಿಂತವೇ ಹೊರತು ಇಲ್ಲಿನವರು ಬೆಳೆಸಿಕೊಳ್ಳಬಹುದಾಗಿದ್ದ ಸ್ವಂತಿಕೆಗೆ ಮತ್ತು ಪ್ರಭಾವಿಯಾಗಿ ಬೆಳೆಯುವುದಕ್ಕೆ ಅವಕಾಶಗಳಿರಲಿಲ್ಲ. ಇದೆಲ್ಲಕ್ಕೆ ಮೊದಲ ಕಾರಣ ಆ ಕಾಲದಲ್ಲಿ ಇಲ್ಲಿದ್ದ ಕಲಾಶಾಲೆಗಳ ಕೊರತೆ ಎನ್ನಬಹುದು.

ಇನ್ನು ಎರಡನೆಯ ಕಾರಣ, ಹೊಸದಾಗಿ ಇಲ್ಲಿ ಸ್ಥಾಪಿತವಾದ ಕಲಾಶಾಲೆಗಳಲ್ಲಿನ ಶಿಕ್ಷಣದ ಗುಣಮಟ್ಟವನ್ನು ಕುರಿತದ್ದು. ಇಲ್ಲಿ ಇನ್ನೊಂದು ಮಾತನ್ನು ಹೇಳಬೇಕು, ಪ್ರಭಾವಕ್ಕೆ ಸಂಬಂಧಿಸಿದಂತೆ ಯಾವುದೇ ಒಂದು ವಿದ್ಯಾಲಯವು ಹೊಂದಿರುವ ಖ್ಯಾತಿಯೂ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಹಲವು ವಿದ್ಯಾಲಯಗಳ ಸಂದರ್ಭದಲ್ಲಿ ಯಾವುದೇ ಒಂದನ್ನೇ ಹೆಚ್ಚು ಜನ ಅಪೇಕ್ಷಿಸುವುದು ಅದು ಹೊಂದಿರುವ ಖ್ಯಾತಿಯಿಂದಲೇ. ಅಂತೆಯೇ ನಮ್ಮಲ್ಲಿ ಹಲವರು ಇಂದಿಗೂ ಹೊರರಾಜ್ಯಗಳ, ಪ್ರಮುಖವಾಗಿ ಬರೋಡಾ ಮತ್ತು ಶಾಂತಿನಿಕೇತನದ ಕಲಾಶಾಲೆಗಳಲ್ಲಿಯೇ ವ್ಯಾಸಂಗ ಮಾಡಲು ಇಚ್ಛಿಸುವುದು. ಹೀಗೆ ಯಾವುದೇ ವಿದ್ಯಾಲಯದ ಖ್ಯಾತಿ, ಮುಖ್ಯವಾಗಿ ಅದು ನೀಡುವ ಶಿಕ್ಷಣದ ಗುಣಮಟ್ಟ ಮತ್ತು ಹೊಂದಿರುವ ಅಧ್ಯಾಪಕರ ಪ್ರಸಿದ್ಧಿ ಪ್ರತಿಭೆಗಳನ್ನವಲಂಬಿಸಿದೆ. ಈ ದೃಷ್ಟಿಯಿಂದ ನಮ್ಮ ನಾಡಿನ ಕಲಾಶಾಲೆಗಳನ್ನು ಅವಲೋಕಿಸಿದಲ್ಲಿ ಕಂಡುಬರುವುದು ಬರೀ ಹೊರಗಿನ ಭವ್ಯತೆ ಮಾತ್ರ, ಅವುಗಳ ಕಟ್ಟಡಗಳಿಂದಾಗಿ. ಕೆಲವು ಕಾರಣಗಳಿಂದ ಸ್ವಲ್ಪ ಮಟ್ಟಿನ ಪ್ರಚಾರವನ್ನು (ಖ್ಯಾತಿಯಲ್ಲ) ಪಡೆದಿದ್ದರೂ ಯಾವ ಕಾರಣಕ್ಕೂ ಎಂತಹ ಗುಣ ಮಟ್ಟವನ್ನೂ ಇವುಗಳಲ್ಲಿ ಈ ಹಿಂದೆ ಕಾಣಲಿಲ್ಲ, ಮತ್ತು ಸದ್ಯದ ಪರಿಸ್ಥಿತಿಯೂ ಹಿಂದಿಗಿಂತ ಹೆಚ್ಚೇನೂ ಭಿನ್ನವಾಗಿಲ್ಲವೆಂದು ನಿಶ್ಚಿತವಾಗಿ ಹೇಳಬಹುದು. ಇಂದಿನ ದಿನಗಳಲ್ಲಿ ಕೆಲವೊಂದು ಹಳ್ಳಿ, ಕುಗ್ರಾಮಗಳಲ್ಲಿ ಸರಕಾರದ ಕೆಲವು ಸಮಸ್ಯೆಗಳಿಂದಾಗಿ ಏಕೋಪಾಧ್ಯಾಯ ಶಾಲೆಗಳಿರುವುದು ಸಾಮಾನ್ಯವೆ. ಆದರೆ ಅದು ಯಾವ ಗುಣಮಟ್ಟವನ್ನೂ ಶಿಕ್ಷಣದಲ್ಲಿ ಹೇಳಿಕೊಳ್ಳುವ ಹಾಗೆ ಸಾಧಿಸುವುದಿಲ್ಲ.

ಅಂತೆಯೇ ಅನುದಾನವಿರದ ಹಲವಾರು ಕಾಲೇಜುಗಳು ಕೆಲವೇ ಕೆಲವು ಉಪನ್ಯಾಸಕರ ಮೇಲೆಯೇ ನಡೆದಿರುವುದು ಅಚ್ಚರಿ ತರುವ ವಿಷಯವೇನಲ್ಲ. ಆದರೆ ಸರಕಾರದ ಅನುದಾನವಿರುವ, ಇಲ್ಲದಿರುವ ಎಲ್ಲ ಕಲಾಶಾಲೆಗಳೂ ಅತ್ಯಂತ ಕಡಿಮೆ ಸಂಬಳಕ್ಕೆ ಅಗತ್ಯಕ್ಕಿಂತ ಅತ್ಯಂತ ಕಡಿಮೆ ಉಪನ್ಯಾಸಕರನ್ನು ನೇಮಿಸಿಕೊಂಡು ವಿದ್ಯಾಲಯದ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಿರುವುದು ಯಾವ ರೀತಿಯಿಂದಲೂ ಆರೋಗ್ಯಕಾರಿ ವಾತಾವರಣವನ್ನು ಬೆಳೆಸುತ್ತಿಲ್ಲ. ಹೀಗಾಗಿ ಅವುಗಳಿಂದ ಶೈಕ್ಷಣಿಕ ಗುಣಮಟ್ಟವನ್ನು ಅಪೇಕ್ಷಿಸುವುದು ನಿರರ್ಥಕ. ಆದರೆ ಪ್ರಾರಂಭದಲ್ಲಿಯೇ ರಾಜ್ಯದ ಉತ್ತರದಲ್ಲಿ ಶ್ರೀ ಜೆ.ಎಸ್. ಖಂಡೇರಾವ್ ಅವರು ಕಲಬುರ್ಗಿಯಲ್ಲಿಯೂ, ದಕ್ಷಿಣದಲ್ಲಿ ಡಾ॥ ಆರ್.ಎಂ.ಹಡಪದ್ ಮತ್ತು ಪ್ರೊ॥ ಎಂ.ಎಸ್. ನಂಜುಂಡರಾಯರು ಬೆಂಗಳೂರಿನಲ್ಲೂ ಕಲಾಶಾಲೆಗಳನ್ನು ತೆರೆದು ಕಲಾಶಿಕ್ಷಣದ ವ್ಯಾಪಕತೆಗೆ ಕಾರಣರಾದರು. ಈ ದಿಸೆಯಲ್ಲಿ ಶ್ರೀಯುತ ನಂಜುಂಡರಾಯರೂ, ಡಾ॥ ಹಡಪದರವರೂ ಮತ್ತು ಅಂದಾನಿಯವರೂ ಸಾಕಷ್ಟು ಶ್ರಮಿಸಿದುದರ ಫಲವಾಗಿ ಕೆಲವೇ ಜನ ಉತ್ತಮ ಕಲಾವಿದರು ಇವರ ಶಾಲೆಗಳಿಂದ ಹೊರಬಂದರಾದರೂ ಅಷ್ಟು ಕಾರಣಕ್ಕೇ ಕರ್ನಾಟಕದ ಕಲಾಶಾಲೆಗಳು ಹೊರಗಡೆಯೆಲ್ಲೂ ಗಣನೀಯವೆನಿಸಲಿಲ್ಲ. ಖ್ಯಾತಿಯು ಬರೋಡಾ, ಶಾಂತಿನಿಕೇತನದಂತೆ ಪಸರಿಸಲಿಲ್ಲ.

ಇಲ್ಲಿನ, ಎಂದರೆ ಇವೇ ಕಾಲೇಜುಗಳ ವಿದ್ಯಾರ್ಥಿಗಳು ಬರೋಡಾ ಮತ್ತು ಶಾಂತಿನಿಕೇತನಗಳೆಡೆಗೇ ತಮ್ಮ ಒಲವನ್ನು ತೋರಿಸುತ್ತಾರೆಯೇ ಹೊರತು ಇವರಂತೆ ಹೊರ ರಾಜ್ಯದ ವಿದ್ಯಾರ್ಥಿಗಳು ಈ ಕಡೆ ಬರುವುದಿಲ್ಲ. ಹಾಗೆ ಅಪರೂಪಕ್ಕೆ ಕೆಲವರು ಬಂದರೂ ಅದಕ್ಕೆ ಬೇರೆ ಕಾರಣಗಳೇ ಇರುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಅನ್ಯರ ಮೇಲೆ ಛಾಪು ಮೂಡಿಸುವಂತಹ ಯಾವ ಬೆಳವಣಿಗೆಯೂ ಇಲ್ಲಿ ಆಗಲಿಲ್ಲ. ಇಲ್ಲಿನವರು ಹೊರಗಡೆ ಕಲಿತು ಅಲ್ಲಿನ ಪ್ರಭಾವವನ್ನು ಮೈಗೂಡಿಸಿಕೊಂಡು ಬರುವಂತೆ ಇಲ್ಲಿನ ಪ್ರಭಾವವನ್ನು ಮೈಗೂಡಿಸಿಕೊಂಡು ಹೋಗುವುದಕ್ಕೆ ಹೊರಗಿನವರೂ ಇಲ್ಲಿಗೆ ಬರಬೇಕು. ಆದರೆ ಆದಾಯಿತೇ?

ಆದಾಗಬೇಕಾದರೆ ಉತ್ತಮ ಶಿಕ್ಷಕರು ಬೇಕು. ಅವರ ಬೋಧನಾ ಸಾಮರ್ಥ್ಯ-ವಿಧಾನ ಮತ್ತು ಪಡೆದಿರುವ ಪ್ರತಿಭೆ, ಪ್ರಸಿದ್ಧಿಗಳು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತವೆ. ಅದಕ್ಕೆ ಉತ್ತಮ ಉದಾಹರಣೆಯಾಗಿ ಬರೋಡಾ ಮತ್ತು ಶಾಂತಿನಿಕೇತನಗಳನ್ನು ನೋಡಬಹುದು. ಭಾರತದ ಖ್ಯಾತ ಕಲಾವಿದರೇ ಅಲ್ಲಿ ಬೋಧಕರಾಗಿರುವಾಗ ಅಂಥ ಗುರುಗಳಿಂದ ಪಡೆಯುವ ವಿದ್ಯೆಯಿಂದ ಯಾವನೂ ವಂಚಿತನಾಗಬಯಸುವುದಿಲ್ಲ. ಇಂತಹ ಕೊರತೆ ಇಲ್ಲಿರುವುದರಿಂದಲೇ ಕರ್ನಾಟಕದ ಕಲಾವಿದರು ತಮ್ಮ ಬರವನ್ನು ನಿವಾರಿಸಿಕೊಂಡರೇ ಹೊರತು ಮತ್ತೊಬ್ಬರಿಗಿಕ್ಕುವಷ್ಟು ಸಮೃದ್ಧಿಯನ್ನು ಸಾಧಿಸಲಿಲ್ಲವೆಂದು ಹಿಂದೆ ಹೇಳಿದೆ.

ಕಲಾಶಾಲೆಗಳನ್ನು ಸಂಬಂಧಿಸಿದಂತೆಯೇ ಹೇಳಬಹುದಾದ ಮತ್ತೊಂದು ಕಾರಣವೆಂದರೆ ಬರೋಡಾ, ಶಾಂತಿನಿಕೇತನ, ಮುಂಬೈ ಮೊದಲಾದವುಗಳಂತೆ ಇಲ್ಲಿನ ಯಾವ ಮುಖ್ಯ ಕಲಾಶಾಲೆಯೂ ಅಥವಾ ಇಡಿಯಾಗಿ ಕರ್ನಾಟಕದವೇ ತನ್ನದೇ ಆದ ಒಂದು ವಿಶಿಷ್ಟ ಶೈಲಿ ಅಥವಾ ಪರಂಪರೆಯನ್ನು (school ಎಂಬ ಅರ್ಥದಲ್ಲಿ) ಬೆಳೆಸಿಕೊಳ್ಳಲೇ ಇಲ್ಲವೆಂಬುದು. ಕೆ.ಜಿ. ಸುಬ್ರಹ್ಮಣ್ಯಂ, ಗುಲಾಮ್ ಮೊಹಮ್ಮದ್ ಶೇಖ್‌ರಂತಹವರ ಪ್ರಭಾವದಿಂದ ಸಂಪೂರ್ಣ

ಭಿನ್ನತೆಯನ್ನು ಹೊಂದುವುದು ಅವರವರ ವಿದ್ಯಾರ್ಥಿಗಳಿಗೆ ಅಷ್ಟು ಸುಲಭವೇನಲ್ಲ. ಹೀಗಾಗಿ ಅಂತಹವರ ಹೆಸರಿನಿಂದಲೇ ಆಯಾ ಪರಂಪರೆಯನ್ನು ಗುರತಿಸುವಷ್ಟು ಪ್ರಬಲವಾದ ಪರಂಪರೆಗಳು ಅಲ್ಲಿ ಬೆಳೆದಿವೆ. ಇಲ್ಲಿಯೂ ಅಂದಾನಿಯವರ ಕೆಲವು ವಿದ್ಯಾರ್ಥಿಗಳಲ್ಲಿ ಅವರ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಹಲವರ ಕೃತಿಗಳನ್ನು ಗಮನಿಸುತ್ತಲೇ ಅವುಗಳಲ್ಲಿ ಹಡಪದವರವರ ಛಾಪನ್ನು ತಟ್ಟನೆ ಗುರುತಿಸಬಹುದು. ಆದರೆ ಇಲ್ಲಿನ ಯಾವ ಶಾಲೆಯ ಪ್ರಭಾವವೂ ಅಲ್ಲಿನಂತೆ ಒಂದು ಪ್ರಬಲ ಪರಂಪರೆಯಾಗಿ ಬೆಳೆಯಲಿಲ್ಲ. ಅಥವಾ ಇಲ್ಲಿನ ಅಂತಹ ಎಲ್ಲ ಪ್ರಭಾವಗಳನ್ನು ಒಟ್ಟಾಗಿ ಗುರುತಿಸುವಂತಹ, ಕರ್ನಾಟಕಕ್ಕೇ ವಿಶಿಷ್ಟವೆಂದು ಹೇಳುವಂತಹ, ಇದೆಲ್ಲವನ್ನೂ ಸಮಗ್ರವಾಗಿ ಪ್ರತಿನಿಸುವಂತಹ ಶೈಲೀಕೃತ ಬೆಳವಣಿಗೆ - ಪರಂಪರೆ ಇಲ್ಲಿ ಬೆಳೆಯಲೇ ಇಲ್ಲ. ಹೀಗಾಗಿ ಭಾರತೀಯ ಆಧುನಿಕ ಕಲಾ ಪರಂಪರೆಯಲ್ಲಿ ಕರ್ನಾಟಕಕ್ಕೆ (ಕೇವಲ ಈ ದೃಷ್ಟಿಯಿಂದ ಮಾತ್ರ)ದಕ್ಕಬೇಕಾದ ಸ್ಥಾನ ದಕ್ಕಲಿಲ್ಲವೆಂದೇ ಹೇಳಬೇಕಾಗುತ್ತದೆ. ಇನ್ನು ಈ ಬಗೆಯಿಂದಾಗ ಬಹುದಾಗಿದ್ದ ಅನ್ಯರ ಮೇಲಿನ ನಮ್ಮ ಪ್ರಭಾವಗಳನ್ನು ಊಹಿಸುವುದೂ ಸರಿಯಲ್ಲ.

- 5 -

ಕರ್ನಾಟಕದ ಈ ರೀತಿಯ ಹಿನ್ನಡೆಗೆ ನಮ್ಮ ಕಲಾವಿದರಲ್ಲಿನ ಪ್ರಜ್ಞೆ ಮತ್ತು ಸೃಜನಶೀಲತೆ (ಪ್ರತಿಭೆ)ಗಳ ಕೊರತೆಯೂ ಮುಖ್ಯಕಾರಣವೇ. ಪ್ರಜ್ಞೆಯೆನ್ನುವುದು ಪ್ರತಿಯೊಬ್ಬನಲ್ಲೂ ಇರುವ ತಿಳುವಳಿಕೆಯ, ಅನುಭವದ ಸಂಸ್ಕರಿತ ರೂಪ. ಅದು ಸೃಜನಶೀಲರಂತಹ ಸೂಕ್ಷ್ಮ ಸಂವೇದಿಗಳಲ್ಲಿ ಅತ್ಯಂತ ಸೂಕ್ಷ್ಮ ರೂಪದಲ್ಲಿ ತೀಕ್ಷ್ಣತೆಯಿಂದ ಕೂಡಿದ್ದು, ಗಾಢವಾಗಿ ಇರಲೇಬೇಕು. ಪ್ರತಿಯೊಂದು ವಿಚಾರವೂ ಮತ್ತು ಭಾವನೆಯೂ ತನ್ನ ಮೂಲ ಕಚ್ಚಾರೂಪವನ್ನು ಎಂದರೆ ಸ್ಥೂಲತೆಯನ್ನು ಕಳೆದುಕೊಂಡು ಮತ್ತು ಲೋಕಸಂದರ್ಭದ ಎಲ್ಲ ಅಡೆತಡೆಗಳನ್ನೂ, ನೇರವಾದ ಲೌಕಿಕ ಪ್ರತಿಕ್ರಿಯೆಗಳನ್ನೂ ಕಳೆದುಕೊಂಡು ಸಂಸ್ಕರಿತವಾಗಿ ಸೂಕ್ಷ್ಮಸ್ವರೂಪವನ್ನು ಪಡೆದುಕೊಂಡು ಅವೂ ಪ್ರಜ್ಞೆಯೇ ಆಗಿ ಪರಿವರ್ತಿತವಾಗುತ್ತವೆ. ಆ ಕಾರಣದಿಂದಲೇ ನಾವು ಬಾಹ್ಯಪ್ರಚೋದನೆಗೊಳಗಾಗದ ಸಂದರ್ಭದಲ್ಲೂ ಒಂದು ಭಾವವನ್ನು ಕೇವಲ ಅದರ ಕಲ್ಪನಾ ಮಾತ್ರದಿಂದಲೇ (ನೆನಪಷ್ಟರಿಂದಲೇ - ಸಂಕಲ್ಪ ಮಾತ್ರದಿಂದಲೇ) ಆಸ್ವಾದಿಸಲು ಸಾಧ್ಯವಾಗುವುದು.

ಇನ್ನು ಪ್ರಜ್ಞೆ-ಸೃಜನೆಗಳ ಕೊರತೆಗಿದ್ದ - ಇರುವ ಕೆಲವು ಕಾರಣಗಳನ್ನು ಸಾಮಾಜಿಕ ನೆಲೆಯಲ್ಲಿಯೂ ಅರಸಬಹುದು. ಕಲೆ ಅಥವಾ ಸಾಹಿತ್ಯ ಪಡೆದುಕೊಳ್ಳುವ ಆಯಾಮಗಳಿಗೆ ಸಾಮಾಜಿಕ ಜೀವನವೂ, ಜನವರ್ಗವೂ, ವ್ಯವಸ್ಥೆಯೂ ಕಾರಣವಾಗುತ್ತವೆ. ಆದರೆ ಇವುಗಳ ಸೂಕ್ಷ್ಮಜ್ಞಾನ, ಪ್ರಜ್ಞೆ, ವಿಶ್ಲೇಷಣಾತ್ಮಕ ದೃಷ್ಟಿ ಮತ್ತು ಸಮಾಜದ ಕುರಿತ ಸಚ್ಚಿಂತನೆ, ಕಾಳಜಿ, ತುಡಿತ-ಮಿಡಿತಗಳು ಕಲಾವಿದರಿಗಿರಬೇಕು. ಆದರೆ ಇವಿದ್ದವೇ ? ಕನ್ನಡ ನಾಡಿನ ಮಿತಿಯಲ್ಲಿ ಹೇಳುವುದಾದರೆ ಇವ್ಯಾವುವೂ ಇರಲಿಲ್ಲ. ಇಡೀ ಭಾರತವನ್ನು ಪರಿಗಣಿಸಿದರೆ ಕೆಲವಾದರೂ ಉದಾಹರಣೆಗಳನ್ನು ಹೆಕ್ಕಿ ತೆಗೆಯಬಹುದು.

ಬಂಗಾಲದ ಪ್ರಾರಂಭಿಕ ಕೆಲ ಜನ ಕಲಾವಿದರಲ್ಲೇ ಇಂಥ ಒಂದು ಮನೋಭಾವವಿದ್ದುದು ಕಂಡುಬರುತ್ತದೆ. ನಂದಲಾಲ್ ಬೋಸ್, ಜಾಮಿನಿ ರಾಯ್, ಬಿನೋದ್ ಬಿಹಾರಿ ಮುಖರ್ಜಿ, ರಾಮ್‌ಕಿಂಕರ್ ಬೈಜ್ ಮೊದಲಾದ ಕೆಲವೇ ಜನರು, ಸಮಾಜಪರ ಭಾವನೆಗಳನ್ನು

ಸ್ಪಷ್ಟವಾಗಿಯೇ ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರಲ್ಲಿದ್ದ ಜನಪರ ಕಾಳಜಿ, ಅವರ ಪರಿಸರ-ವ್ಯವಸ್ಥೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುವಂತೆ ಮಾಡಿತು. ಸಂತಾಲರ ನಡುವಿನ ಅವರ ಬದುಕು-ಅನುಭವಗಳು, ಅವರ ಬದುಕು-ಬವಣೆಗಳನ್ನು ಸಮರ್ಥವಾಗಿ ಚಿತ್ರಿಸಿ ಆ ಜನವರ್ಗದ ಸಾಮಾಜಿಕ ನೆಲೆ-ಬೆಲೆ, ಸ್ಥಿತಿ-ಗತಿಗಳ ಏಳುಬೀಳುಗಳನ್ನೇ ಬಿಚ್ಚಿಡುತ್ತವೆ. ಅವರ ಆ ಬಗೆಯ ಕಾಳಜಿ-ಪ್ರಜ್ಞೆಗಳಿಗೆ ಸ್ವಾತಂತ್ರ್ಯ ಚಳುವಳಿಯೂ ಒಂದು ಹಿನ್ನೆಲೆಯನ್ನೊದಗಿಸಿರಬೇಕು. ಇವರಿಗಿಂತ ಇನ್ನೂ ಮೊದಲು ಭಾರತೀಯ ಸಮಾಜವನ್ನು, ಶೋಷಿತ ಗ್ರಾಮೀಣರ, ಸ್ತ್ರೀಯರ ಬದುಕನ್ನೂ ಪರಿಣಾಮಕಾರಿಯಾಗಿ ಮೊತ್ತಮೊದಲು ಚಿತ್ರಿಸಿದಾಕೆ ಅಮೃತಾಶೇರ್‌ಗಿಲ್. ತನ್ನ ಪಾಶ್ಚಾತ್ಯ ಮತ್ತು ಭಾರತೀಯ ಜೀವನಾನುಭಗಳ ಹಿನ್ನೆಲೆಯಲ್ಲಿ ತನ್ನ ಪ್ರಗತಿಪರ, ಮತ್ತು ಶೋಷಣೆಯ ವಿರುದ್ಧದ ವಿಚಾರಗಳನ್ನು ಆಳವಾದ ಮರುಕ, ಅನುಕಂಪವನ್ನು ಅಭಿವ್ಯಕ್ತಿಸಿರುವ ರೀತಿ ಹೃದಯವನ್ನು ಆರ್ದ್ರಗೊಳಿಸುತ್ತದೆ.

ಕರ್ನಾಟಕದಲ್ಲಿ ಎಷ್ಟು ಬಗೆಯ ಜನ ವರ್ಗವಿಲ್ಲ, ಕಲಾವಿದರಿಗೆ ಆಕರವಾಗುವುದಕ್ಕೆ. ಅಥವಾ ಅವರೆಲ್ಲರ ಬದುಕು ಸುಖ, ಸಮೃದ್ಧಿ, ನೆಮ್ಮದಿ, ಸಮಾನತೆಗಳಿಂದ ಕೂಡಿ ಕಲಾವಿದ ಪಡೆದುಕೊಳ್ಳ ಬಹುದಾಗಿದ್ದ ಪ್ರೇರಣೆಯ ಅಂಶಗಳನ್ನು ಕಳೆದುಕೊಂಡವೆ?. ಆದರೆ ಸಾಹಿತ್ಯವನ್ನು ಗಮನಿಸಿ. ಎಷ್ಟೊಂದು ಜಾತಿ-ಪಂಗಡಗಳ ಹೀನಾವಸ್ಥೆ, ದುರ್ಭರ ಬದುಕು, ಸಮಸ್ಯೆಗಳು ಸಾಹಿತಿಗಳಿಗೆ ನಿರಂತರ ಪ್ರೇರಣೆಗಳನ್ನು ನೀಡುತ್ತಿವೆಯೆಂದರೆ ನವೋದಯ ಕಾಲದಿಂದ ಇಂದಿನ ಹಲವು ಸಾಹಿತ್ಯ ಚಳುವಳಿಗಳವರೆಗೆ ಇದೇ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಬಹುಮುಖ್ಯ ಪಾತ್ರ ಮತ್ತು ಪಾಲನ್ನು ಪಡೆದಿದೆ. ದಲಿತ, ಬಂಡಾಯದಂತಹ ವಿಶೇಷ ಪ್ರಕಾರಗಳಿಗೂ ಅವು ಕಾರಣವಾದವು. ಜಾತಿ , ವರ್ಗ ಸಂಘರ್ಷ, ವಿರೋಧ, ದಮನ, ಇಂತಹ ಜೀವಂತ - ಜಲ್ವಂತ ಪ್ರಕ್ರಿಯೆಗಳು ನಮ್ಮ ಸಮಾಜದಲ್ಲಿ ಹಿಂದಿನಿಂದ ಇಂದಿನವರೆಗೂ ದೈತ್ಯಾಕಾರದ ಸಮಸ್ಯೆಗಳಾಗಿ ತಂಡವಾಡುತ್ತಿದೆ. ಹಿಂದಿನ ಶಿವ ಶರಣರಿಗೂ, ಕೆಲವು ಜನ ಸಂತ -ಸುಧಾರಕರಿಗೂ ಪ್ರಗತಿಪರ -ಜನಪರ ಸಾಹಿತಿಗಳಿಗೂ ಕಂಡ ನಗ್ನ ಸತ್ಯ ಕಲಾವಿದರಿಗೆ ಏಕೆ ಕಾಣಲಿಲ್ಲವೆಂಬ ಬೆರಗುಂಟಾಗುವುದು ಯಾವ ಅತಿಯೂ ಅಲ್ಲ. ಕಲಾವಿದರಿಗೆ ನಮ್ಮ ಪರಂಪರೆಯಲ್ಲಿ, ಪುರಾಣಗಳಲ್ಲಿ ಹೆಚ್ಚಾಗಿ ಚಿತ್ತಲ್ಲಿಯೇ ಕಂಡು ಬಂತೇ ಹೊರತು ಇತಿಹಾಸ, ವರ್ತಮಾನಗಳ ಚಿತ್ತಲ್ಲಿ ಸತ್ಯ ಗೋಚರವಾಗಲಿಲ್ಲ. ಕಾರಣ, ವಿಷಯಲೋಲುಪರಿಗೆ ಸೌಂದರ್ಯವಷ್ಟೇ ಕಾಣುವುದೇ ಹೊರತು ಕುರೂಪ ಕಾಣುವ ಸಾಧ್ಯತೆಯಿದ್ದರೂ ಅದನ್ನು ಕಾಣಲಿಚ್ಛಿಸುವುದಿಲ್ಲ. ಹೀಗಾಗಿ ನಮ್ಮವರ ಬದುಕೆಲ್ಲ ಬೇಸೂರಿನ ಸಂಗೀತವಾಯಿತೇ ಹೊರತು ಸುಬದ್ಧ ಸಂಗೀತವಾಲಿಲ್ಲ. ಅವರ ಕೃತಿ ವಿ-ಚಿತ್ರವಾಯಿತೇ ವಿನಃ ಸುಂದರದ ಚಿತ್ತಾರವಾಗಲಿಲ್ಲ.

ನಮ್ಮ ಬದುಕು, ಸಮಾಜವನ್ನು ನಿರ್ದೇಶಿಸುವ, ನಿಯಂತ್ರಿಸುವ ಯಾವ ಶಕ್ತಿಗಳೂ ಸಾಮಾನ್ಯವಾದುವೇನಲ್ಲ. ಅದು ಅಧಿಕಾರಶಾಹಿ, ಪುರೋಹಿತಶಾಹಿ, ಬಂಡವಾಳಶಾಹಿ ಹೀಗೆ ಬೆಳೆಯುತ್ತಲೇ ಹೋಗುವ, ಸಮಾಜಕ್ಕೆ ಮಾರಕವಾಗುವ ದುಷ್ಟಶಕ್ತಿಗಳು ನಮ್ಮ ಸುತ್ತಲಿಲ್ಲವೇ ? ಇದ್ದರೆ ಅವುಗಳು ಇವರ ಕಣ್ಣಿಗೇಕೆ ಬೀಳಲಿಲ್ಲ?

ಮುಖ್ಯವಾಗಿ ಯಾವನು ಪ್ರಜ್ಞಾವಂತನೋ ಮತ್ತು ಜನಪರನೋ ಅವನಿಗೆ ಕಂಡೇ ಕಾಣುತ್ತವೆ. ಆದರೆ ಇಲ್ಲಿ ಈ ಅಂಶಗಳು ಕಂಡಿಲ್ಲವೆಂದರೆ ನಮ್ಮವರೆಲ್ಲರೂ

ಪ್ರಜ್ಞಾಹೀನರೂ, ಜನವಿರೋಧಿಗಳು ಕೇವಲ ಸೌಂದರ್ಯಾಸಕ್ತರೂ, ಸ್ವಾರ್ಥಿಗಳೂ ಎಂದೇ ಹೇಳಬೇಕಾಗುತ್ತಿದೆ. ಮನುಷ್ಯನ ಒಳಗಣ್ಣನ್ನು ತೆರೆಸಿ ಆವನ ನೋಟಕ್ಕೆ ತೀಕ್ಷ್ಣತೆಯನ್ನು ನೀಡಿ, ಆತ್ಮಪ್ರಜ್ಞೆಯನ್ನು ಕೆರಳಿಸಿ ಆತ್ಮಾಭಿಮಾನವನ್ನು ಕೆಚ್ಚು- ಉತ್ಸಾಹಗಳನ್ನು ಉದ್ದೀಪಿಸಿ ಕ್ರಿಯಾಶೀಲಗೊಳಿಸುವುದೇ ಇಂಥ ಅಂಶಗಳು ಕ್ರಿಯಾಶೀಲತೆ ಇಲ್ಲದೆ ಬೆಳೆಯುವುದಿಲ್ಲ. ಅದು ನಿಧಾನ ಮರಣದೆಡೆ ಸಾಗುತ್ತದೆ. ಹೀಗೆ ಕಲಾವಿದರ ಸಮೂಹವು ತಾನಿರುವ ಸಮಾಜದೊಂದಿಗೆ ಕಲ್ಪಿಸಿಕೊಂಡ ಅಂತರದ ಕಾರಣದಿಂದಾಗಿ ಬದುಕಿನ ಸೆಲೆ-ಆಶೋತ್ತರಗಳಿಗೆ ಸ್ಪಂದಿಸದೇ, ಹೊಂದಿದ್ದ ದಿವ್ಯ ನಿರ್ಲಕ್ಷ ಮತ್ತು ಆಲಸ್ಯಗಳ ಕಾರಣದಿಂದ ಅವರ ಪ್ರಖರವಾಗಿ ಬೆಳೆದು, ಬೆಳಗಬೇಕಿದ್ದ ದೃಷ್ಟಿ- ಸೃಷ್ಟಿಗಳು ಮಂಕಾದವು.

ನಮ್ಮ ನೆರೆಯ ಆಂಧ್ರ ಕೇರಳಗಳಲ್ಲಿನ ಜನರ ಜೀವನವನ್ನೇ ಹಿಂಡಿ ನೆತ್ತರೀಂಟಿಬೆಳೆದ ಜಮೀನ್ದಾರೀ ಪದ್ಧತಿಯ ಕ್ರೂರ ಪರಿಣಾಮಗಳು ಅಲ್ಲಿನ ಸಾಹಿತ್ಯದಲ್ಲಿ ಬಹುಮುಖ್ಯ-ಸ್ಥಾನವನ್ನೇ ಪಡೆದಿವೆ. ಆದರೆ ಅಲ್ಲಿನ ಯಾವ ಮುಖ್ಯ ಕಲಾವಿದನ ತಲೆಗೂ ಅಂಥ ವಿಚಾರಗಳು ಹೋಗಲೇ ಇಲ್ಲ. ಕರ್ನಾಟಕದಲ್ಲೂ ಅಲ್ಪ ಪ್ರಮಾಣದಲ್ಲಿದ್ದ ಇದು ಇಲ್ಲಿನ ಸಾಹಿತ್ಯದಲ್ಲೂ ಪ್ರವೇಶ ಪಡೆಯಲಿಲ್ಲ. ಆದರೆ ಭಾರತದ ಶ್ರೇಷ್ಠ ಕಲಾವಿದ ಸೋಮನಾಥ್ ಹೋರ್ ಜಮೀನ್ದಾರಿಯ ಭೀಕರತೆ, ಬರ್ಬರತೆಗಳ ವಿರುದ್ಧ, ಆ ಮೂಲಕ ಬ್ರಿಟೀಷರ ವಿರುದ್ಧ ಹೋರಾಡಿ ಅವರ ಕ್ರೂರದೃಷ್ಟಿಗೊಳಗಾಗಿಯೂ ತಲೆಮರೆಸಿಕೊಂಡು ರೈತರ ಸಾಮಾನ್ಯ ಜನರ ಒಳಿತಿಗಾಗಿ ಶ್ರಮಿಸಿ ಶ್ರೇಷ್ಠ ಬದುಕನ್ನು ಬಾಳಿದವರು. ಹೋರಾಟ, ಸೇವೆಗಳೇ ಬದುಕಾಗಿದ್ದ ಅವರು ಸಮಾಜದ ಬಗ್ಗೆ ಹೊಂದಿದ್ದ ಕಾಳಜಿ ಅಪಾರ. ಅವರ ಯಾವ ಚಿತ್ರ ಶಿಲ್ಪವೂ ಸಾಮಾನ್ಯರ, ಶೋಷಿತರ, ದುಃಖಿತರ, ದುರ್ಬಲರ ಬದುಕೇ ಹೊರತು ಮತ್ತೇನಲ್ಲ.

ಇಂಥಲ್ಲಿ ನಾವು ಪರಿಶೀಲಿಸಬೇಕಾದ ಮತ್ತೊಂದು ಅಂಶ, ಕಲಾವಿದನ ಅಭಿರುಚಿ, ಅಗತ್ಯಗಳನ್ನು ಕುರಿತದ್ದು. ಕರ್ನಾಟಕ ಅಥವಾ ಭಾರತೀಯ ಆಧುನಿಕ ಕಲೆ ಎಂಬ ಕೂಸೇನೂ ಇಲ್ಲಿನದೇ ಸಂಸ್ಕೃತಿ-ಪರಂಪರೆಗಳ ವಂಶ ವಾಹಿಗಳನ್ನು ಪಡೆದು ಕೊಂಡು ಹುಟ್ಟಲಿಲ್ಲ. ಅದರ ವಂಶವಾಹಿಯೆಲ್ಲ ಪಾಶ್ಚಾತ್ಯ ರಾಷ್ಟ್ರಗಳದ್ದೇ. ಕಳೆದ ಶತಮಾನದ (20 ನೇ ಶತಮಾನದ) ಪೂರ್ವಾರ್ಧದ ಮಧ್ಯಕಾಲದಲ್ಲಿ ಒಂದು ಬಗೆಯಾಗಿ ತಿರುವು ಪಡೆದುಕೊಂಡ ಭಾರತೀಯ ಕಲೆ ಮೂಲ ಅರ್ಥದ ಆಧುನಿಕತೆಯನ್ನು ಪಡೆದದ್ದು ಸ್ವಾತಂತ್ರ್ಯನಂತರವೇ. ವಸಾಹತುಶಾಹಿಯ ಸಂಧರ್ಭದಲ್ಲಿ ಬ್ರಿಟೀಷ್ ಸಂಪರ್ಕ. ಪ್ರಭಾವಗಳಿಂದ ಕ್ರಮೇಣ ತನ್ನ ರೂಪವನ್ನು ಹೊಸ ಕಾಲಕ್ಕನುಗುಣವಾಗಿ ಬದಲಾಯಿಸಿಕೊಳ್ಳುತ್ತಿದ್ದ ಸಾಂಪ್ರದಾಯವನ್ನು ಸಂಪೂರ್ಣವಾಗೇನೂ ಕಳೆದುಕೊಳ್ಳಲಿಲ್ಲ. ಆ ಕಾಲದ ವ್ಯವಸ್ಥೆ ಮತ್ತು ಎಲ್ಲ ಹೊಸ ಬದಲಾವಣೆಗಳೊಂದಿಗೆ ತಮ್ಮ ಜೀವನದೆಲ್ಲ ಸಂಬಂಧಗಳನ್ನು ಬೆಳೆಸಿಕೊಂಡ ಜನ ಕಲಾತ್ಮಕವಾಗಿಯೂ ಬದಲಾವಣೆಗೆ ಸ್ಪಂದಿಸಿದರು. ಆದರೆ ಕೆಲವು ಅರಸೊತ್ತಿಗೆಗಳ ಆಶ್ರಯದಲ್ಲಿದ್ದ ಕಲಾವಿದರು ಸಂಪ್ರದಾಯವನ್ನು ಸಂಪೂರ್ಣವಾಗಿ ಬಿಟ್ಟಿರಲಿಲ್ಲ. ಅವರು ಸಾಂಪ್ರದಾಯಿಕ ಶೈಲಿಯನ್ನು ಸ್ವಲ್ಪಮಟ್ಟಿಗೆ ಬಿಟ್ಟು ಪಾಶ್ಚಾತ್ಯ ನೈಜತೆಯನ್ನು ತಮ್ಮ ಶೈಲಿ, ಕೃತಿಗಳಲ್ಲಿ ತಂದುಕೊಂಡಿದ್ದಾಗ್ಯೂ ಅದು ಅರಮನೆಯ ಒಳ-ಹೊರಗಣ ಪರಿಸರವನ್ನು ವರ್ಣರಂಜಿತವಾಗಿ-ವೈಭವದಿಂದ ಚಿತ್ರಿಸುವಲ್ಲಿನ ಉಪಕರಣವಾಯಿತೇ ಹೊರತು ಊರ ಸಾಮಾನ್ಯ ಬೀದಿಗಳಿಗೆ ಇಳಿದು ಬರಲಿಲ್ಲ. ಅರಸನಿಕ್ಕುತ್ತಿದ್ದ ದ್ರವ್ಯಾಹಾರಗಳ ಸಮೃದ್ಧಿಯಲ್ಲಿ

ಇಂಥ ಕಲಾವಿದರಿಗೆ ಬೀದಿಗಿಳಿಯುವ ಅಗತ್ಯವಿರಲಿಲ್ಲ. ಜೀವಂತ ಕ್ರಿಯಾಶೀಲ ಜನರ ಜೀವನದಿಂದ ದೂರಾದ ಇವರ ಅಭಿರುಚಿಗಳು ಸಮಾಜ, ಸಮಾಜ ಪ್ರಜ್ಞೆ, ಮತ್ತು ಸಮಷ್ಟಿಹಿತಗಳಿಂದ ಬಹು ದೂರವೇ ಉಳಿದವು.

ಇನ್ನು ಅರಸೊತ್ತಿಗೆಯ ಹೊರಗಣ ಕಲಾವಿದರೂ ತಮ್ಮ ಸಮಕಾಲಿನ ಸಮಾಜವನ್ನು ಗ್ರಹಿಸುವ ಪ್ರಯತ್ನಕ್ಕೆ ತೊಡಗಲಿಲ್ಲ. ಅವರ ಗ್ರಹಿಕೆಯ ಕಲಾಲೋಕವೇ ಭಿನ್ನವಾಗಿತ್ತು. ನಮ್ಮದೇ ಸಂಸ್ಕೃತಿ- ಪರಂಪರೆಗಳನ್ನು, ಇವುಗಳ ಪಾಶ್ಚಾತ್ಯ ಸಹಗಾಮಿಗಳನ್ನು ಈ ಎರಡೂ ಹಿನ್ನಲೆಯ ಕಲೆಯನ್ನು ಮತ್ತು ಪಾಶ್ಚಾತ್ಯ ಪ್ರಭಾವಗಳನ್ನು ಅರೆಬರೆಯಾಗಿ ಗ್ರಹಿಸಿ ಅಥವಾ ಅವೆಲ್ಲವುಗಳ ಜ್ಞಾನ ತಮಗಿದೆಯೆಂಬ ಅಜ್ಞಾನದಲ್ಲಿಯೇ ಕಲಾಕೃಷಿಗೆ ತೊಡಗಿದರು. ನಮ್ಮ ಆಧುನಿಕ ಕಲೆಯ ಹಾದಿಯಲ್ಲಿ ನಡೆದ ಮೊದಲಿಗರೆಂಬುದನ್ನು ಬಿಟ್ಟರೆ ಇನ್ಯಾವ ಗೊತ್ತುಗುರಿಗೂ ಇವರನ್ನು ಸೇರಿಸಲಿಕ್ಕಾಗುವುದಿಲ್ಲ. ಇಂಥ ಕಲಾವಿದರ ಪೀಳಿಗೆಯ ಪೀಳಿಗೆಯೇ ಇಂದಿನ ಕಲಾವಿದರು. ಅವರ ಪರಂಪರೆಯಲ್ಲಿ ಸಾಗಿ ಬಂದ ಇವರಲ್ಲಿ ಕಾಲಕ್ಕನುಸರಿಸಿ ತಾವು ಪಡೆದ ಉಚ್ಚ ಶಿಕ್ಷಣದಿಂದ ಹೊರ ದೇಶಗಳ ಪ್ರಭಾವದಿಂದ ಕೊಂಚ ಮಟ್ಟಿಗಿನ ಬೆಳವಣಿಗೆಯನ್ನು, ರೂಪಾಕಾರಗಳ ಸೃಷ್ಟಿಯಲ್ಲಿ, ಅಭಿವ್ಯಕ್ತಿವಿಧಾನದಲ್ಲಿ ಕೊಂಚ ಬಿನ್ನತೆಯನ್ನು ಸಾಧಿಸಿದರೂ ಮೂಲ ಮನೋಗುಣದಿಂದ ಯಾವ ರೀತಿಯಲ್ಲೂ ಅವರಿಂದ ದೂರ ಸರಿದು ನಿಲ್ಲುವುದಿಲ್ಲ. ಇಲ್ಲಿ ಕಲೆ ಕೇವಲ ಸೌಂದರ್ಯೋಪಾಸನೆಯಾಯಿತೇ ಹೊರತು ಜೀವನೋಪಾಸನೆಯಾಗಲಿಲ್ಲ. ಒಂದು ಕ್ಯಾನ್‌ವಾಸಿನಲ್ಲಿ ಕಲಾವಿದ ಮಾಡುವ ಸ್ಥಳ ವಿಭಜನೆಯ ಕೌಶಲ, ಯೋಜಿತ ವರ್ಣಕ್ರಮ, ಚಮತ್ಕಾರಿಕ ರೇಖಾವಿನ್ಯಾಸ, ಮತ್ತು ಕೆಲವು ಮನೋನ್ಮಾದಗಳ ಕಲಸು ಮೇಲೋಗರವಾಯಿತೇ ಹೊರತು ಯಾವ ಮಹತ್ತಿನ ಮೂಲವೂ ಅದಾಗಲಿಲ್ಲ. ಕಾರಣ, ಕಲಾವಿದನ ಅಭಿರುಚಿ ಅಗತ್ಯಗಳೇ ಆ ತೆರನಾಗಿದ್ದವು- ಇವೆ. ಇಂಥಲ್ಲಿ ಕಲಾವಿದನೊಬ್ಬ ದೇಶ-ಭಾಷೆಗಳ ಗಡಿಗಳನ್ನು, ತನ್ನೆಲ್ಲ ಇತಿ-ಮಿತಿಗಳನ್ನು ದಾಟಿ ಚಿರಸ್ಥಾಯಿಯಾಗಿ ನಿಲ್ಲುವ, ಇತರರಿಗೆ ಆದರ್ಶವಾಗುವ ಮಾತು ನಮ್ಮ ಇಂದಿನ ಸಂದರ್ಭದಲ್ಲಿ ನಮ್ಮ ಕಲ್ಪನೆಗೂ ನಿಲುಕುವುದಿಲ್ಲ.

-6-

ಕಲೆ ಮತ್ತು ಕಲಾವಿದ ಔನತ್ಯಕ್ಕೇರಬೇಕಾದರೆ ಕೆಲವೊಂದು ಆಸೆ-ಆಮಿಷಗಳಿಂದ, ಜನಪ್ರಿಯತೆಯಂತಹ ಕ್ಷುದ್ರಬಯಕೆಗಳಿಂದ ಮುಕ್ತವಾಗಿರಬೇಕು. ಇವೆಲ್ಲ ಅವನ್ನರಸಿ ಬರುವಂತಹವೇ ಹೊರತು ಇವುಗಳ ಬೆನ್ನು ಹತ್ತಿದ ಕಲಾವಿದರಿಂದ ಯಾವ ಮಹತ್ಕಾಣಿಕೆಯನ್ನು ನಿರೀಕ್ಷಿಸಲಾಗುವುದಿಲ್ಲ. ಆದರೆ ಇಂದಿನ ಸಂದರ್ಭದಲ್ಲಿ ಪ್ರತಿಭೆಯಿದ್ದ ಇಲ್ಲದ ಎಲ್ಲರೂ ಅಗ್ಗದ ಜನಪ್ರಿಯತೆಗಾಗಿ ಮತ್ತು ದುಡ್ಡಿನ ಆಸೆಗಾಗಿ ಏನೆಲ್ಲಾಬಗೆಯ ಕ್ಷುಲ್ಲಕ ಚಟುವಟಿಕೆಗಳಲ್ಲಿ ತೊಡುಗುವರೆಂಬುದು ಕಲಾಕ್ಷೇತ್ರದ ಒಳಹೊರಗನ್ನು ಬಲ್ಲ ಎಲ್ಲರಿಗೂ ಗೊತ್ತು. ಕಲೆಯೂ, ಕಲಾಶಿಕ್ಷಣವೂ ವ್ಯಾಪಾರವಾಗಿ ಬೆಳೆದ ಈ ದಿನಗಳಲ್ಲಿ ಕಲಾತ್ಮಕ ಔನ್ನತ್ಯವಂತಿರಲಿ, ಕಲಾಪ್ರೌಢಿಮೆಯನ್ನು ನಿರೀಕ್ಷಿಸುವುದು ಕಷ್ಟವಾಗಿದೆ. ಕಲಾಪ್ರದರ್ಶನಾಲಯಗಳೆಲ್ಲವೂ ಕಲಾಮಳಿಗೆಗಳೇ ಆಗಿ ಹೋಗಿವೆ. ಪ್ರದರ್ಶನಗಳನ್ನಾಯೋಜಿಸುವ ಎಲ್ಲ ಪ್ರದರ್ಶನಾಲಯಗಳವರೂ ಗಿರಾಕಿಗಳನ್ನು ಹುಡುಕಿ ಕೃತಿಗಳನ್ನು ಮಾರಿಸುವ ಮೂಲಕ ಕಲಾವಿದನಿಗೂ, ಕೊಳ್ಳುವವರಿಗೂ ನಡುವಿನ ದಲಾಲರಾಗಿ (ಕಮೀಶನ್ ಏಜೆಂಟ್)

ವರ್ತಿಸುವ ಸಂದರ್ಭದಲ್ಲಿ ಮಾರಿ ಹಣ ಗಳಿಸುವ ವಾಂಛೆಯನ್ನಿಟ್ಟುಕೊಂಡೇ ಕೃತಿ ರಚನೆಗೆ ತೊಡಗುವ, ಆದನ್ನೊಂದು ಜೀವನೋಪಾಯ-ಧಂದೆಯೆಂದೇ ಪರಿಗಣಿಸುವ ಕಲಾವಿದರ ಕೃತಿಗಳಲ್ಲಿ ಎಂತಹ ಕಲಾತ್ಮಕ ಪ್ರೌಢಿಮೆಯನ್ನು ಕಂಡಿದ್ದೇವೆ. ಅಥವಾ ಕಾಣುತ್ತಿದ್ದೇವೆ. ನ್ಯೂನ್ಯತೆಯನ್ನು ವ್ಯವಸ್ಥೆಯನ್ನು ವಾಸ್ತವವನ್ನು ಸಂದರ್ಭಕ್ಕನುಸಾರವಾಗಿ ಎತ್ತಿ ಹೇಳಲೇಬೇಕಾದ ವಿಮರ್ಶಕನೂ, ಕಲಾವಿದರನ್ನು ಹೊಗಳುವುದರಲ್ಲೇ ಅಥವಾ ಅಸತ್ಯವನ್ನು ಬಿಚ್ಚಿಡದ ಮುಚ್ಚು-ಮೆಚ್ಚುಬರಹ ಎಂದರೆ ಮೃದು ವಿಮರ್ಶೆಗಳಲ್ಲಿ ತಮ್ಮ ಅಸ್ತಿತ್ವದ ಬೇರುಗಳನ್ನು ಕಂಡು ಕೊಳ್ಳುವುದಾದರೆ ವಿಮರ್ಶೆಯು ಅವರ ಕುಣಿತಕ್ಕೆ ಇವರ ತಾಳವಾಗುತ್ತದೆಯೇ ಹೊರತು ಈ ಎರಡರ ಸೂಕ್ತ ಸಮರ್ಪಕ ಮುಖಾಮುಖಿಯಿಂದ ನಮಗೆ ದಕ್ಕ ಬಹುದಾದ ಇವುಗಳ ಸಮೃದ್ಧತೆಯಲ್ಲ. ನಮ್ಮ ನಾಡನ್ನು ಹೊರತು ಪಡಿಸದೇ ಸಾಮಾನ್ಯವಾಗಿ ಎಲ್ಲ ಕಡೆಯೂ ಪ್ರಸ್ತುತ ವಸ್ತುಸ್ಥಿತಿ ಹೀಗಿರುವುದರಿಂದ ಕಲಾತ್ಮಕ ಪ್ರೌಢಿಮೆಯೂ, ಔನ್ನತ್ಯವೂ ಯಾವ ಕಾರಣದಿಂದಲೂ ಸಾಧ್ಯವಾಗದೇ ಪ್ರಭಾವಿಯಾಗಿ, ಆದರ್ಶವಾಗಿ ನಿಲ್ಲುವುದಾದರೂ ಹೇಗೆ ಸಾಧ್ಯ.?

-7-

ಹೊರನಾಡಿನಲ್ಲಿ ಕರ್ನಾಟಕದ ಕಲೆ, ಕಲಾವಿದರ ಪ್ರಭಾವವನ್ನು ಸಕಾರಣಗಳನ್ನು ಕೊಟ್ಟು ಅಲ್ಲಗಳೆದ ಲೇಖನದ ಈ ಸಂದರ್ಭದಲ್ಲಿ , ಇಲ್ಲಿನ ಪ್ರಭಾವ ಅನ್ಯರ ಮೇಲೆ ಇಲ್ಲವೇ ಇಲ್ಲವೆಂದು ನಾನೆಂದಾಗ ಇಲ್ಲಿನ ಕೆಲಜನ ಹಳೆ, ಹೊಸ, ಕಲಾವಿದರ ಹೊರನಾಡ ವಾಸವನ್ನೇ ಉಲ್ಲೇಖಿಸಿ ಅಂತಹವರಿಂದ ಅಲ್ಲೇನಾದರೂ ಪ್ರಭಾವವಾಗಿರಬಹುದುದಾದುದನ್ನು ಪರಿಶೀಲಿಸಲು ನೀಡಿದ ಕೆಲವರ ಸೂಚನೆಗಳನ್ನು ಗಮನಿಸಿ ಕೆಲವು ಮಾತುಗಳನ್ನು ಹೇಳುತ್ತಿದ್ದೇನೆ.

ಕಾರಣಾಂತರಗಳಿಂದ ಹಲವಾರು ಜನ ಕಲಾವಿದರು ಕರ್ನಾಟಕವನ್ನು ತೊರೆದು ಹೊರನಾಡುಗಳಿಗೆ ವಲಸೆ ಹೋಗಿದ್ದಾರೆ.ರುದ್ರ ಹಂಜಿ, ದಂಡಾವತಿ ಮಠ, ಹೆಬ್ಬಾರ್ ಮುಂತಾದ ಹಳಬರು, ಬಿ.ವಿ. ಸುರೇಶ್, ಕೆ. ಆರ್. ಸುಬ್ಬಣ್ಣ ನಟರಾಜ್ ಶರ್ಮ, ವಿಜಯ ಬಾಗೋಡಿ, ಈರಣ್ಣ ಜಿ. ಆರ್. ಮುಂತಾದ ಹೊಸಬರೂ ದೇಶದ ಬೇರೆ ಬೇರೆ ಸ್ಥಳಗಳೊಂದಿಗೆ ತಮ್ಮನ್ನು ಬೆಸೆದು ಕೊಂಡವರು. ಇಂಥ ವಲಸೆಗೆ ಭೋಧನೆ, ಇನ್ನಿತರ ವೃತ್ತಿಗಳು ಮತ್ತು ತಮ್ಮ ವೈಯಕ್ತಿಕ ಬೆಳವಣಿಗೆಯ ದೃಷ್ಟಿಯಿಂದ ಅವರಿಗನುಕೂಲವಾದ ಪರಿಸರಗಳು ಕಾರಣವಾಗುತ್ತವೆ. ಈ ಕಾರಣದಿಂದ ಇಂಥ ವಲಸೆಯನ್ನು ಅಲ್ಲಗೆಳೆಯುವುದೂ, ವಿರೋಧಿಸುವುದೂ ತಪ್ಪು. ಆದರೆ ಹೀಗೆ ಒಮ್ಮೆ ಹೊರಹೋದ, ಇಲ್ಲಿ ಹುಟ್ಟಿಬೆಳೆದು ಮತ್ತೆಲ್ಲೋ ಶಾಶ್ವತವಾಗಿ ನೆಲೆನಿಲ್ಲುವ , ಅಲ್ಲಿನ ಮತದಾರರ ಪಟ್ಟಿಯಲ್ಲೂ, ಎಲ್ಲಾ ದಾಖಲಾತಿಗಳಲ್ಲೂ ಸೇರಿ ಹೋಗಿ ಅಲ್ಲಿನದೇ ಜನವಾಗುವ ಇಂತಹವರನ್ನು ಮೂಲವಾಗಿ ಯಾವ ರಾಜ್ಯದೊಂದಿಗೆ ಗುರುತಿಸಬೇಕೆನ್ನುವ ಸಮಸ್ಯೆಯಿದೆ. ಕೇವಲ ನಮ್ಮ ರಾಜ್ಯವೊಂದರ ಮಿತಿಯಲ್ಲಿಯೇ ನಮ್ಮ ಪ್ರಸ್ತುತ ಚರ್ಚೆಯಿರುವುದರಿಂದ , ಯಾವ ಬಗೆಯಲ್ಲಿ ನಮ್ಮದೆಂದು ಪರಿಗಣಿಸ ಬೇಕೊ ? ಯಾವ ಸಮರ್ಥನೆಗಳು ಸಿಕ್ಕುವುದಿಲ್ಲ. ಇಂಥಹವರನ್ನು ಒಂದು ವೇಳೆ ನಮಗನುಕೂಲವಾಗುವ ರೀತಿಯಲ್ಲೇ ಪರಿಗಣಿಸಿ ಇಂಥವರಿಂದ ಆಗಬಹುದಾದ ಪ್ರಭಾವದ ಪರಿಶೀಲನೆಗೆ ತೊಡಗುವುದಾದರೆ ಏನಂತಹ ಬೆಳವಣಗೆ- ಫಲವೂ ಕಂಡು ಬರುವುದಿಲ್ಲ.

ಹೆಬ್ಬಾರರು ತಮ್ಮ ಶಿಕ್ಷಣ, ವೃತ್ತಿ ಮೊದಲಾದ ಕಾರಣಗಳಿಂದ ಇಡೀ ತಮ್ಮ ಜೀವಮಾನವನ್ನೇ ಮುಂಬೈನಲ್ಲಿ ಕಳೆದವರು ಸಣ್ಣದೊಂದು ಕಲಾಶಾಲೆ ತೆರೆದು ಅಲ್ಲೇ ತಮ್ಮ ಬಾಳನ್ನು ಸವೆಸಿದ ಮತ್ತೊಬ್ಬರು ದಂಡಾವತಿ ಮಠರು. ಇವರ ಎಂತಹುದೇ ಪ್ರಭಾವವೂ ಇವರ ವಿದ್ಯಾರ್ಥಿಗಳ ಮೇಲೆ , ಇವರ ಪರಿಸರದಲ್ಲಿದ್ದವರ ಮೇಲೆ ಆಗಿದ್ದೇ ಇದ್ದರೆ, ಅದು ನಿಚ್ಚಳವಾಗಿ ಕಂಡು ಬರುವ ಒಬ್ಬ ಕಲಾವಿದನಾದರೂ ನಮಗೆ ದೊರಕಬಾರದೇ? ಕಲಾವಲಯದಲ್ಲಿ ಗುರುತಿಸಲ್ಪಡದಂಥ ಯಾವನೋ ಒಬ್ಬ ನಗಣ್ಯನ ಮೇಲಿನ ಪ್ರಭಾವವನ್ನು ಗಂಭೀರ ಸ್ವರೂಪದಲ್ಲಿ ಪರಿಗಣಿಸಲಾಗುವುದಿಲ್ಲ. ಅದೇನಿದ್ದರೂ ಕಣ್ಣಿಗೆದ್ದು ಕಾಣವಂತಿದ್ದು ಕಲಾವಲಯದಲ್ಲಿ ಅವನಿಗೊಂದು ಸ್ಥಾನವನ್ನು ನಿರ್ದೇಶಿಸಿರಬೇಕು ಕಾರಣ, ಇಂಥ ಒಂದು ಚರ್ಚೆಯು ಅಂಥವರ ಮೇಲಾದ ಪ್ರಭಾವದ ಕಾರಣ ಮತ್ತು ಮುಖ್ಯವಾಗಿ ಸ್ವರೂಪವನ್ನು ಕುರಿತು ಚರ್ಚಿಸುವುದೇ ಹೊರತು ಸುಮ್ಮನೇ ಕೆಲವು ಹೆಸರುಗಳನ್ನು ಪಟ್ಟಿ ಮಾಡುವುದಲ್ಲ. ಇನ್ನು ವಲಸೆ ಹೋದ ಹೊಸಬರ ವಿಷಯದಲ್ಲೇನು ಹೊಸತಾಗಿ ಹೇಳುವುದಿಲ್ಲ. ಭಾರತೀಯ ನೆಲೆಯಲ್ಲಿ , ಅವರಿಗೇ ವಿಶಿಷ್ಟವೆಂದು ಹೇಳ ಬಹುದಾದ ನೆಲೆಯೇನು ಸದ್ಯಕ್ಕೆ ಕಂಡು ಬರುವುದಿಲ್ಲ.

ಎಸ್. ಎಂ. ಪಂಡಿತರೂ ಮುಂಬೈಯೊಂದಿಗೇ ಹೆಚ್ಚಿನ ನಂಟನ್ನು ಹೊಂದಿದ್ದವರು. ರವಿವರ್ಮನ ವಸ್ತು-ಶೈಲಿಗಳೇ ಮತ್ತೆ ಅವನಿಗಿಂತ ಬಹಳ ಅನಂತರದ ಕಾಲದಲ್ಲಿ ಇವರಲ್ಲಿ ಪುನರಾವರ್ತಿತವಾದವು. ಅವನ ಕೃತಿಗಳಿಗಿಂತ ಹೆಚ್ಚಿನ ಥಳಕು-ಬಳಕು, ಲಾಲಿತ್ಯದಿಂದ ಕೂಡಿದ ಇವರ ರೋಕೋಕೊ ಶೈಲಿಯ ಕೃತಿಗಳು ಚಿತ್ರಗಳೆಂದರೆ ಕೇವಲ ಚಿತ್ರಪಟಗಳಾಗಿಯೇ ಉಳಿದವು. ಸುತ್ತಲಿನ ಜಗತ್ತು ಆಧುನಿಕತೆಯನ್ನು ಹಲವು ರೀತಿಯಲ್ಲಿ ಮೈಗೂಡಿಸಿಕೊಂಡು ಬೆಳೆಯುತ್ತಿದ್ದಾಗ, ಯಾವುದಾಗಲೇ ಬಂಗಾಳಿ ಕಲಾವಿದರಿಂದ ತಿರಸ್ಕೃತವಾಗಿತ್ತೋ ಅದೇ ಮತ್ತೆ ಇವರಲ್ಲಿ ತಲೆಯೆತ್ತಿತ್ತು. ಅದು ಮತ್ತು ಇಂದಿನ ಸಮಕಾಲೀನತೆ, ಅವಶ್ಯಕತೆ, ಮತ್ತು ಸಾಂಸ್ಕೃತಿಕ ನೆಲೆಯಿಂದ ಪ್ರಸ್ತುತವಾಗದೇ ಹೋಗುವ ಇವರ ಕಲೆಗಳು ಮುಂಬಯಿಯ ಚಲನಚಿತ್ರ ಜಗತ್ತಿನ ನಂಟನ್ನು ಬೆಳೆಸಿಕೊಂಡು ಹೊಸದೊಂದೇ ಆಯಾಮವನ್ನು ಪಡೆಯಿತು. ಹಿಂದಿ ಚಿತ್ರಗಳ ಮೊದಮೊದಲ ಪೋಸ್ಟರುಗಳನ್ನು ಇವರೂ ರಚಿಸಿರುವುದರಿಂದ ಪೋಸ್ಟರು ಕಲಾವಿದರ ವಲಯದಲ್ಲೇ ಅವರ ಪ್ರಭಾವವಾದರೂ ಆಗಿರಬಹುದೇನೋ! ಅದನ್ನು ನಿಶ್ಚಿತ ಗೊಳಿಸುವುದಕ್ಕೆ ದಾಖಲೆಗಳು ನಮಗೆ ಸಿಗುವುದಿಲ್ಲ. ಒಂದು ವೇಳೆ ಅಂತಹ ಪ್ರಭಾವವಿದ್ದರೂ ಅದು ಭಾರತೀಯ ನೆಲೆಯಲ್ಲಿ ಅತ್ಯಂತ ನಗಣ್ಯ. ಇತರ ವಲಯಗಳಿಗೆ ಕೊಡುವಂತಹ ಮಹತ್ವವನ್ನು ಇದಕ್ಕೆ ಕೊಡಲಾಗುವುದಿಲ್ಲ. ವಿ. ಸೀ ಯವರ ಬರಹವೊಂದರಿಂದ ಈ ಕೆಳಗಿನ ಅಂಶವೊಂದು ತಿಳಿದು ಬರುತ್ತದೆ. ಅದು ಕಲಾವಿದ ಕೆ. ವೆಂಕಟಪ್ಪನವರಲ್ಲಿ ಕಲಿಯಲು ಅಪೇಕ್ಷಿಸಿ ಆಂಧ್ರದಿಂದ ಬಂದ ಇಬ್ಬರನ್ನು ವೆಂಕಟಪ್ಪನವರೇ ತಿರಸ್ಕರಿಸಿ ವಾಪಸ್ಸು ಕಳಿಸಿದರೆಂಬುದು. ಅನ್ಯರ ಮೇಲಿನ ಇಲ್ಲಿನ ಪ್ರಭಾವಕ್ಕೆ ಅನುವಾಗುವ ಒಂದೇ ಒಂದು ಸಂದರ್ಭವೊದಗಿ ಬಂದಿದ್ದರೂ ಅದೂ ಈ ರೀತಿಯಾಗಿ ದೂರಾಯಿತು.

ಇಂದಿನ ನಮ್ಮ ಕಲಾಪರಿಸರವು ಎಷ್ಟು ಕೆಟ್ಟು ಹೋಗಿದೆಯೆಂದರೆ ಅದರ ಸೃಜನ ಶೀಲತೆಯ

ಎಲ್ಲ ನೆಲೆ-ಸೆಲೆಗಳು ನಷ್ಟವಾಗಿ ಕೇವಲ ಅನುಕರಣೆಯಲ್ಲೇ ತನ್ನ ಅಸ್ತಿತ್ವವನ್ನು ಕಂಡು ಕೊಂಡಿದೆ. ಇಲ್ಲಿಯವರೆಗೆ ಕೇವಲ ಪಾಶ್ಚಾತ್ಯರನ್ನೇ ಅನುಕರಿಸಿ, ಅನುಸರಿಸಿ ಅಲ್ಲಿನ ಮಟ್ಟುಗಳಿಗೆ ಶರಣಾದ ಇಲ್ಲಿನವರಿಗೆ ತಮ್ಮದೇ ಸೃಷ್ಟಿಯೆಂಬಂತಹ ಹೊಸ ಪ್ರಕಾರವನ್ನು ನಿರ್ಮಿಸುವುದು ಊಹೆಗತೀತವಾದ ಮಾತು. ವೈವಿಧ್ಯತೆಗಾಗಿ ಪಶ್ಚಿಮದ ಕಡೆಗೇ ಮುಖ ಮಾಡುವ ಎಲ್ಲರೂ ಅಲ್ಲಿ ಏನೇನಾಗುವುದೋ ಅವೆಲ್ಲವುಗಳಿಗೆ ಕಣ್ಣು ಮುಚ್ಚಿ ಕೊಂಡು ಶರಣಾಗುತ್ತಿದ್ದಾರೆಯೇ ಹೊರತು ನಮ್ಮ ಸಂಸ್ಕೃತಿಯ ನೆಲೆಯಲ್ಲಿ ನಮ್ಮ ಅಭಿರುಚಿ-ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು, ಅದರ ಅರ್ಥಪೂರ್ಣತೆಯನ್ನು ಪರೀಕ್ಷಿಸಿ ಬರ ಮಾಡಿಕೊಳ್ಳುವ ವಿವೇಕ ಪೂರ್ಣ ವ್ಯವಹಾರವಾಗುತ್ತಿಲ್ಲ. ವಿಜ್ಞಾನ- ತಂತ್ರಜ್ಞಾನಗಳಲ್ಲಿ , ಮುಂದುವರೆದ ದೇಶಗಳಲ್ಲಿ ವಿದ್ಯುತ್-ವಿದ್ಯುನ್ಮಾನೋಪಕರಣಗಳನ್ನು, ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅವುಗಳನ್ನೊಂದು ಇಚ್ಛಿತ ರೂಪದಲ್ಲಿ ಪ್ರಸ್ತುತಪಡಿಸಿ ತತ್ಕಾಲೀನ ಕ್ಷಣಿಕ ಚಮತ್ಕಾರವನ್ನು ಪ್ರದರ್ಶಿಸುವುದೇ ಕಲೆಯೆಂದು ಬಗೆದು ಆಚರಿಸುವಲ್ಲಿ, ಅಲ್ಲಿ ತೊಡಗಿದ ಮನುಷ್ಯನ ಸೃಜನಶೀಲತೆ, ಹಾರ್ದಿಕತೆ, ಪಡೆದು ಕೊಳ್ಳದ ಕಲಾತ್ಮಕ ಆಯಾಮಗಳನ್ನು ವಿವೇಚಿಸದೇ ಕೇವಲ ಅಂತಹ ಪ್ರತಿಭೆ ಮತ್ತು ಸೃಜನಹೀನತೆಯ (Lack of Imagination and Creativity) ಕೆಲಸವನ್ನೇ ಕಲೆಯೆಂದು ಕರೆದು ಅನುಕರಿಸುವ ದಿವ್ಯ ಅಜ್ಞಾನದ ಪ್ರವೃತ್ತಿ , ನಮ್ಮ ದೇಶಕ್ಕೂ ಅಂಟಿಕೊಂಡಿದೆ ಇಂದಿನ ಮತ್ತು ಮುಂದಿನ ಕಲಾವಿದರು ಪ್ರಜ್ಞಾವಂತರಾಗಿ ಕಲೆಯನ್ನು ತಮ್ಮ ಪ್ರತಿಭೆ-ಸೃಜನಶೀಲತೆಯ ಬಲದಿಂದಲೇ ಔನತ್ಯಕ್ಕೊಯ್ಯುವಂತಾಗಬೇಕು. ಕಲಾವಿದನ ಶಿಕ್ಷಣ, ಓದು, ಪ್ರಯತ್ನಗಳು ಆ ದಿಸೆಯಲ್ಲಾಗಬೇಕು.



ಅವರು ಬೆಳೆಸಿದ ಗಿಡಗಳು



ಚಿ. ಶ್ರೀನಿವಾಸರಾಜು ಸದ್ದಿಲ್ಲದೇ ಸಂಸ್ಕೃತಿ ಪೋಷಣೆಗೆ ನೆರವಾದವರು. ಎ.ಆರ್.ಕೃ., ರಾಜರತ್ನಂ, ಮುಂತಾದ ಸಾಹಿತ್ಯ ಪರಿಚಾರಕರ ಪರಂಪರೆಯ ಮುಂದುವರಿಕೆಯಾಗಿರುವ ರಾಜು ಮೇಷ್ಟ್ರಿಗೆ ಅರವತ್ತು ತುಂಬಿದ ಸಂದರ್ಭಕ್ಕೆ ಈ ಅಭಿಮಾನದ ಗುಚ್ಛ.

ಶ್ರೀನಿವಾಸರಾಜು : ಸಾಹಿತ್ಯದ ಅಂತರ್ಜಾಲ

ಸುಮಾರು ನಾಲ್ಕು ದಶಕಗಳಿಂದಲೂ ಕನ್ನಡ ಸಾಹಿತ್ಯ ಸಂಸ್ಕೃತಿಯ ಸದಭಿರುಚಿಯನ್ನು ನಿರಂತರವಾಗಿ ಕರ್ನಾಟಕದ ಎಲ್ಲ ಮೂಲೆಗಳಲ್ಲಿಯೂ ಹರಡುತ್ತಿರುವ ಬೆರಳೆಣಿಕೆಯ ಹೆಸರುಗಳಲ್ಲಿ ಚಿ. ಶ್ರೀನಿವಾಸರಾಜು ಅವರದು ಎದ್ದುಕಾಣುವ ಹೆಸರು. ಯಾವಾಗಲೂ ಅವರ ಹೆಗಲಿಗೆ ಜೋತುಬಿದ್ದಿರುವ ಪುಸ್ತಕಗಳು ತುಂಬಿರುವ ಬ್ಯಾಗು ಶ್ರೀನಿವಾಸರಾಜು ಅವರ ಕಾರ್ಯ ಚಟುವಟಿಕೆಯ ಸಂಕೇತ. ಸಾಹಿತ್ಯಸೃಷ್ಟಿಯ ಬಗ್ಗೆ ರಾಜು ಅವರದು ವಿಶಿಷ್ಟವಾದ ನಂಬಿಕೆ. ಸೃಜನಶೀಲತೆಗಿರುವ ವಿಶಿಷ್ಟ ವೈಯಕ್ತಿಕ ವ್ಯಕ್ತಿತ್ವವನ್ನು ಒಪ್ಪಿಯೂ ಅದು ಒಂದು ಸಾಮುದಾಯಕ ಚಟುವಟಿಕೆಯೆಂದು ಶ್ರೀನಿವಾಸರಾಜು ಅವರು ಗಾಢವಾಗಿ ನಂಬಿದ್ದಾರೆ. ಈ ನಂಬಿಕೆಯೇ - ಕನ್ನಡದ ಸೃಜನಶೀಲತೆಯಲ್ಲಿ ಹೊಸ ಹಾಗೂ ಉತ್ಕೃಷ್ಟ ಮನಸ್ಸುಗಳನ್ನು ಹುಡುಕಿ ಬೆಳೆಸುವತ್ತ ಅವರನ್ನು ಕಾರ್ಯಪ್ರವೃತ್ತಗೊಳಿಸಿದೆ. ಇಂಥ ಹೊಸ ಬೆಳಸುಗಳನ್ನು ಅನ್ವೇಷಿಸಲು ಅವರು ಕರ್ನಾಟಕದ ತುಂಬ ಓಡಾಡಿದ್ದು ಎಷ್ಟೋ! ಶ್ರೀನಿವಾಸರಾಜು ಅವರು ಹುಡುಕಿ, ಆಯ್ದು ಬೆಳೆಸಿದ ಅನೇಕ ಪ್ರತಿಭೆಗಳು ಇಂದು ಕನ್ನಡದಲ್ಲಿ ಪ್ರಮುಖ ಹೆಸರುಗಳೂ ಆಗಿವೆ. ರಾಜು ಅವರ ಇಂಥ ಕಾರ್ಯವು, ಕನ್ನಡದಲ್ಲಿ ಬರೆಯುವ ಮನಸ್ಸುಗಳ ಮೇಲೆ ಎಂಥ ಪವಿತ್ರವಾದ ವಾತಾವರಣವನ್ನು ನಿರ್ಮಾಣ ಮಾಡಿದೆ ಎನ್ನುವುದು, ಇವರೆಲ್ಲರೂ ರಾಜು ಅವರ ಬಗ್ಗೆ ತಾಳಿರುವ ವಾತ್ಸಲ್ಯ ಭಾವದಿಂದಲೇ ವ್ಯಕ್ತವಾಗುತ್ತದೆ. ಒಂದು ಬಗೆಯ ಪೋಷಕ ಗುಣದಿಂದಾಗಿ ಪಿತೃವಾತ್ಸಲ್ಯವು ಇಲ್ಲಿ ತಾನೇ ತಾನಾಗಿ ಮೆರೆದಿದೆ. ಸೃಷ್ಟಿಶೀಲ ಮನಸ್ಸಿಗೆ ಇಂಥ ಒಂದು ಪ್ರಚೋದನೆ ಎಂಥ ಅಗತ್ಯವೆಂದು ವಿವರಿಸಬೇಕಾಗಿಲ್ಲ. ಮಲೆನಾಡಿನ ಕಾಡಿನ ನಡುವೆ ಮನೆ ಮಾಡಿ ಬರೆಯಲು ಹಾತೊರೆಯುವ ಹುಡುಗರಿಂದ ಹಿಡಿದು, ಬಯಲುಸೀಮೆಯ ಸುಡುಬಿಸಿಲಿನ ತಪ್ತ ಕುದಿಯುವ ಮನಸ್ಸುಗಳನ್ನು ಹುಡುಕಿ ತೆಗೆದ ಸಾಧನೆ ರಾಜು ಅವರದು.

ಕನ್ನಡದಲ್ಲಿ ಅರಿವು ಮತ್ತು ಅಭಿರುಚಿ ನಿರ್ಮಾಣದ ಕ್ರಿಯೆಯನ್ನು ಒಂದು ಪವಿತ್ರವಾದ ಕಾರ್ಯವೆಂದು ತಿಳಿದಿರುವ ಗಾಢ ಪರಂಪರೆ ಇದೆ. ಇಂಥ ಪರಂಪರೆಯಲ್ಲಿ ರಾಜರತ್ನಂ ಅವರದು ದೊಡ್ಡ ಹೆಸರು. ರಾಜರತ್ನಂ ಅವರ ಜೊತೆಗಿನ ಸಂಬಂಧವು ಶ್ರೀನಿವಾಸರಾಜು ಅವರಲ್ಲಿ ಸೃಜನಶೀಲತೆಯ ಹಲವು ಆಯಾಮಗಳನ್ನು ಕಾಣುವಂತೆ ಮಾಡಿದೆ ಎನ್ನುವಷ್ಟರಲ್ಲಿ ಅನುಮಾನವಿಲ್ಲ.

ಆಧುನಿಕ ಕನ್ನಡ ಸಾಹಿತ್ಯವು ಕಂಡುಕೊಂಡ ಸೂಕ್ಷ್ಮ ಸಾಂಸ್ಕೃತಿಕ ಸಂವೇದನೆಗಳಿಗೆ ಪ್ರಮುಖ ಕಾರಣಗಳು ಕಿರು ಸಾಹಿತ್ಯಕ ಪತ್ರಿಕೆಗಳು. ಸಾಂಪ್ರದಾಯಿಕ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಆಲೋಚನೆಗಳಿಗೆ ಪರ್ಯಾಯವಾಗಿ ಹೊಸ ಚಿಂತನೆಗೆ ದಾರಿ ಮಾಡಿ ಕೊಟ್ಟವುಗಳು ಇವು ಹೊಸ ಸಾಹಿತ್ಯ ಸೃಷ್ಟಿ ಮತ್ತು ಸಾಂಸ್ಕೃತಿಕ ಸಂವೇದನೆಗಳ ಅರ್ಥಪೂರ್ಣ ಸಂಬಂಧಗಳ ಹುಡುಕಾಟಕ್ಕಾಗಿ ತೀವ್ರ ಪ್ರಯತ್ನವನ್ನೂ ಇವು ಮಾಡಿದವು. ಎಪ್ಪತ್ತರ ದಶಕದಿಂದ ಸುಮಾರು ಕಾಲು ಶತಮಾನದ ಕಾಲ ಇವುಗಳು ನಮ್ಮ ಬದುಕನ್ನು ನಿರ್ಮಿಸಿದ, ಬೆಳೆಸಿದ ಬಗೆ ಅನ್ಯಾದೃಶ ವಾದದ್ದು. ಶ್ರೀನಿವಾಸರಾಜು ಅವರು ಇಂಥ ಹಲವಾರು ಕಿರು ಸಾಹಿತ್ಯಕ ಪತ್ರಿಕೆಗಳ ಉಗಮ, ಬೆಳವಣಿಗೆ ಹಾಗೂ ಪ್ರಸಾರಕ್ಕೆ ಹಲವಾರು ರೀತಿಯಲ್ಲಿ ಕಾರಣರೂ, ಪ್ರಚೋದಕರೂ ಆಗಿದ್ದಾರೆ. ಇವರು ಗೆಳೆಯರ ಜೊತೆಗೂಡಿ ಹುಟ್ಟುಹಾಕಿ ಬೆಳೆಸಿದ ಪಿ.ಪಿ. ಬಳಗದ 'ಅಂಕಣ' ಪತ್ರಿಕೆಯು ಜೊತೆಗೆ ಕ್ರಿಯಾತ್ಮಕವಾಗಿ ಸಂಬಂಧವನ್ನು ಇಟ್ಟುಕೊಂಡಿದ್ದವನು ನಾನು. 'ಅಂಕಣ' ಪತ್ರಿಕೆಯು ಎಂಬತ್ತರ ದಶಕದಲ್ಲಿ ಸಾಹಿತ್ಯ ಮತ್ತು ಅಂತರ್‌ಸಂಬಂಧೀಯ ಅರಿವಿನ ಹಲವು ನೆಲೆಗಳ ಪ್ರಮುಖ ವಾಗ್ವಾದದ ವೇದಿಕೆಯಾಗಿತ್ತು. ಶ್ರೀನಿವಾಸರಾಜು ಅವರು ಈ ಪತ್ರಿಕೆಯ ಹಿಂದಿನ ಕ್ರಿಯಾಶಕ್ತಿಯಾಗಿದ್ದರು. ಅವರ ಮನೆಯ ಬಳಗವೆಲ್ಲ 'ಅಂಕಣ' ವನ್ನು ಅಂಚೆಗೆ ಹಾಕಲು ಸಿದ್ಧಪಡಿಸುತ್ತಿದ್ದ ರೀತಿಯು ನನ್ನಲ್ಲಿ ಈಗಲೂ ಮೃದುವಾದ ಭಾವನೆಗಳನ್ನು ಉನ್ಮೀಲನಗೊಳಿಸುವಂತೆ ಮಾಡುತ್ತಿದೆ. ಅದನ್ನೊಂದು ಪ್ರೀತಿಯ ಹಾಗೂ ಪವಿತ್ರ ಕೆಲಸದಂತೆ ಪರಿವರ್ತಿಸುತ್ತಿದ್ದ ಆ ಬಳಗ ಈಗಲೂ ಅರಿವಿನ ಸಂವಾದವನ್ನು ಹಾಗೆಂದೇ ಭಾವಿಸುತ್ತದೆ. ಅದು ಆ ಮನೆಯ ವಾತಾವರಣದ ಪುಣ್ಯ ವಿಶೇಷ.

ಶ್ರೀನಿವಾಸರಾಜು ಹಾಗೂ ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘದ ಸಂಬಂಧ ಅವರ ಕಾರ್ಯ ಚಟುವಟಿಕೆಯ ಮತ್ತೊಂದು ಪ್ರಮುಖವಾದ ಅಂಗ. ಕ್ರೈಸ್ಟ ಕಾಲೇಜಿನಲ್ಲಿ ಕನ್ನಡ ಸಂಘದ ಸ್ಥಾಪನೆ ಮತ್ತು ಅದು ಹಾಕಿಕೊಂಡ ಸಾಹಿತ್ಯ ಸಂಸ್ಕೃತಿ ಪ್ರಸಾರ ಕುರಿತಾದ ಹತ್ತು ಹಲವು ಯೋಜನೆಗಳು ಶ್ರೀನಿವಾಸರಾಜು ಹಾಗೂ ಅವರ ಗೆಳೆಯರ ಬಳಗದ ದೂರ ದೃಷ್ಟಿಕೋನಕ್ಕೆ ಉದಾಹರಣೆಗಳು. ಅವರಿಂದ ಕ್ರೈಸ್ಟ್ ಕಾಲೇಜಿನ ಈ ಸಂಘಕ್ಕೆ ಕರ್ನಾಟಕ ವ್ಯಾಪ್ತಿಯ ಖ್ಯಾತಿ ಬರುವಂತಾಯಿತು. ಕನ್ನಡ ಸಂಘದ ಹಲವು ಯೋಜನೆಗಳೂ ಸಹ ಶ್ರೀನಿವಾಸರಾಜು ಅವರ ವ್ಯಕ್ತಿತ್ವದ ಹಲವು ಮುಖಗಳ ಬೆಳವಣಿಗೆಗೆ ಕಾರಣವಾದವು. ಕನ್ನಡ ಸಂಘ ಶ್ರೀನಿವಾಸರಾಜುರವರನ್ನು ಎತ್ತರಕ್ಕೆ ಬೆಳೆಸಿದ್ದು ಹಾಗೂ ರಾಜೂ ಅವರು ಅದರ ಖ್ಯಾತಿಗೆ ಕಾರಣರಾದದ್ದು ಒಂದು ಯೋಗಾಯೋಗವೆಂದೇ ಹೇಳಬೇಕು. ಎಷ್ಟು ಉದಯೋನ್ಮುಖ ಲೇಖಕರು ಎಷ್ಟು ಖ್ಯಾತಿವೆತ್ತ ಲೇಖಕರು ಕನ್ನಡ ಸಂಘದ ಪ್ರಕಟಣೆಯ ಭಾಗವಾಗಲು ಹಾತೊರೆದರು. ಕನ್ನಡ ಮಹತ್ವದ ಲೇಖಕರ ಮಹತ್ವವನ್ನು ತಿಳಿ ಹೇಳುವ ಕೆಲಸವನ್ನು ಪ್ರತಿವರ್ಷ ಹಬ್ಬದಂತೆ ಆಚರಿಸುವ ಕನ್ನಡ ಸಂಘ , ಸಾಂಸ್ಕೃತಿಕ ವಾತಾವರಣ ಮೂಡಿಸುವುದರಲ್ಲಿ ಪ್ರಧಾನ ಪಾತ್ರ ವಹಿಸಿತ್ತು.

ಶ್ರೀನಿವಾಸರಾಜು ಅವರ ಇನ್ನೊಂದು ಮಹತ್ವದ ಮುಖವೆಂದರೆ ಅವರೇ ಸ್ವತಃ ಸೃಜನಶೀಲ ಲೇಖಕರು ಆಗಿರುವುದು ಕವಿ ಹಾಗೂ ನಾಟಕಕಾರರಾಗಿ ವಿಶಿಷ್ಟ ಸಂವೇದನೆಗಳನ್ನು ಅವರು ಕನ್ನಡ ಸಾಹಿತ್ಯದಲ್ಲಿ ಮೂಡಿಸಿದ್ದಾರೆ. 'ಛಸನಾಲ ಬಂಧು' ಎಂಬ ಕವನ ಸಂಕಲನ ಅವರ ಕಾವ್ಯ ವಸ್ತುವಿನ ಪ್ರಮುಖ ನೆಲೆಗಳನ್ನೂ, ಸಾಮಾಜಿಕ ಕಾಳಜಿಯ ಮುಖ್ಯ ಧೋರಣೆಯನ್ನು ರೂಪಿಸುತ್ತದೆ. ರಾಜುಅವರು ಸೃಷ್ಟಿಸಿದ 'ಮೂಕ ನಾಟಕಗಳು' ಕನ್ನಡ ಸಾಹಿತ್ಯದ ಈ

ಪ್ರಕಾರದಲ್ಲಿ ವಿಶಿಷ್ಟವಾದ ರಚನೆಗಳೆಂದೇ ಹೇಳಬೇಕು. ಶಬ್ದಗಳಿಗಿಂತ ಮೌನ ಹಾಗೂ ಕ್ರಿಯೆ ಬಹು ಮುಖ್ಯವೆನ್ನುವ ರಾಜು ಅವರ ವ್ಯಕ್ತಿತ್ವದ ಸಂವೇದನೆಯೇ ಒಂದು ರೂಪಕವಾಗಿದೆ ಯೆನ್ನುವಂತೆ ಈ ನಾಟಕಗಳ ಸೃಷ್ಟಿ ಸಾಹಿತ್ಯ ಸೃಷ್ಟಿಯ ಸಂದರ್ಭಗಳಲ್ಲಿಯೂ ಆಳದಲ್ಲಿ ರಾಜು ಅವರ ವ್ಯಕ್ತಿತ್ವದ ಹಲವಾರು ನೆಲೆಗಳು ಪರೋಕ್ಷವಾಗಿ ತಮ್ಮ ಸ್ಥಾನವನ್ನು ಪಡೆದುಕೊಳ್ಳುವುದು ಅವರ ಬರವಣಿಗೆಯ ವಿಶೇಷ ಮತ್ತು ಸತ್ವವಾಗಿದೆ. ಮಾತು ಕಡಿಮೆಯಾಗಿ ಮೌನ ಬಂಗಾರವಾಗುತ್ತ ಕ್ರಿಯೆಗೆ ಆಸ್ಪದವೀಯುವುದು ರಾಜು ಅವರ ಒಟ್ಟು ಕಾರ್ಯಸಾಧನೆಯ ವಿಶಿಷ್ಟ ಗುಣ. ಕನ್ನಡ ಸಂಸ್ಕೃತಿಯ ಪ್ರಮುಖ ವ್ಯಕ್ತಿಯಾಗಿರುವ ರಾಜು ಅವರಿಗೆ ಕನ್ನಡದ ಕೆಲಸಕ್ಕಾಗಿ ಮೊತ್ತಮೊದಲ ಎಸ್.ವಿ.ಪಿ. ಪ್ರಶಸ್ತಿ ಸಿಕ್ಕಿರುವುದು ಸಹಜವಾಗಿದೆ. ಅವರ ಕಾರ್ಯ ಸಾಧನೆಗಳು ಇಂಥ ಹಲವಾರು ಪ್ರಶಸ್ತಿಗಳಿಗೆ ಘನತೆ ತರುತ್ತವೆ ಎಂದರೆ ಅತಿಶಯೋಕ್ತಿಯಲ್ಲ.

ಡಾ. ಬಸವರಾಜ ಕಲ್ಗುಡಿ

(ಕೃಪೆ : ವಿಜಯಕರ್ನಾಟಕ)

ಅವರು ಬೆಳೆಸಿದ ಗಿಡಗಳು

"Good name in man and woman my lord, is the immediate jewel of their souls'

- Shakespeare

ಈ ಮಾತಿಗೆ ಅರ್ಥ ಹಚ್ಚಲು ಹೊರಟರೆ ಮಹಾಕಾವ್ಯವೇ ಹುಟ್ಟೀತು. ವ್ಯಕ್ತಿ ಮತ್ತು ಅವನ ಹೆಸರಿಗೆ ಇರುವ ಸಂಬಂಧವೇ ಹೀಗೆ. ಕೆಲವರ ಹೆಸರು ಕೇಳಿದರೆ ಅಥವಾ ಕೆಲವರ ಬಗ್ಗೆ ಹೇಳಲು ಹೊರಟರೆ ಶಬ್ದಗಳು ತೀರಾ ನಿಶಕ್ತ ಎನಿಸುತ್ತವೆ. 'ಮೇಷ್ಟು' ಎಂದೇ ಆತ್ಮೀಯರಾದ ಶ್ರೀ. ಚಿ. ಶ್ರೀನಿವಾಸರಾಜುರವರ ಬಗ್ಗೆ 'ಏನು' ಬರೆಯಲಿ ಎಂಬ ಪ್ರಶ್ನೆಗೆ ನನ್ನನ್ನು ಕಾಡುತ್ತಿದೆ.

ಈ ಹೊತ್ತಿನ ಕನ್ನಡ ಸಾಂಸ್ಕೃತಿಕ, ಸಾಹಿತ್ಯಕ ಸಂದರ್ಭದಲ್ಲಿ 'ಹೊಗಳಿಕೆ' ಎನ್ನುವುದು ಲಾಬಿ, ಗುಂಪುಗಾರಿಕೆ, ಚೇಲಾ, ಬಾಲಬಡುಕ ಎಂಬ ಹತ್ತಾರು ಅಪಾಯಕರ ಪರಿಕಲ್ಪನೆಗಳನ್ನು ಹುಟ್ಟು ಹಾಕುತ್ತಿದೆ. 'ಹೊಗಳುವ' 'ಹೊಗಳಿಸಿಕೊಳ್ಳುವ' ಈ ಕ್ರಿಯೆಯಲ್ಲಿ 'ನಿಜದ ಸಜ್ಜನಿಕೆ' ಮುಜು ಗರ ಪಟ್ಟುಕೊಳ್ಳುತ್ತದೆ. ಆದರೆ ಕೆಲವೊಮ್ಮೆ, ಕೆಲವು ವ್ಯಕ್ತಿಗಳನ್ನು ಕುರಿತು 'ಪ್ರಶಂಸಿಸುವುದು' ವ್ಯಕ್ತಿಗೇ ಸಲ್ಲಿಸುವ ನ್ಯಾಯ, ಜೊತೆಗೆ 'ಪ್ರಶಂಸಿಸದೇ ಸುಮ್ಮನಿರುವುದು' ಮನುಷ್ಯ ಸಂಸ್ಕೃತಿಗೆ ಮಾಡುವ ಅನ್ಯಾಯ!

ಶ್ರೀ ಚಿ. ಶ್ರೀನಿವಾಸರಾಜುರವರ ಬಗೆಗೆ ಹೇಳಲು ಹೊರಡುವ ಮುನ್ನ ನಾನು ಸಿದ್ಧನಾಗು ವುದು ಹೀಗೆ ಅಗತ್ಯ ಎನ್ನಿಸಿದೆ. ಜನವರಿ 31 ಬಂತೆಂದರೆ ಕ್ರೈಸ್ಟ್ ಕಾಲೇಜಿನ ಅಂಗಳದಲ್ಲಿ ಕನಸು - ಕಲ್ಪನೆಗಳು ಮೂರ್ತಗೊಂಡು ಆಟವಾಡುವ ಸಮಯ! ಬೇಂದ್ರೆ ಕಾವ್ಯಸ್ಪರ್ಧೆ, ಅನಕೃ ಲೇಖನ ಸ್ಪರ್ಧೆಗಳಲ್ಲಿ ವಿಜೇತರಾಗಿ 'ಸೇರಿದವರ' ಗದ್ದಲದ ದಿನವದು. ಇದ್ದಕ್ಕಿದ್ದಂತೆ ಕೊಂಬು ಗಳನ್ನು ಮೂಡಿಸಿಕೊಂಡು, ಆಕಾಶದಲ್ಲಿ ಹಾರಾಡುವ ಮನಸ್ಸುಗಳನ್ನು ಸೃಷ್ಟಿ ಮಾಡುವ ಕ್ಷಣ ವದು! 'ಮೇಷ್ಟು ನನ್ನಂತಹವನಿಗೆ ವೇದಿಕೆ ಕಲ್ಪಿಸಿಕೊಟ್ಟಿದ್ದೇ ಹೀಗೆ. 1991-94 ನನ್ನ ಜೀವನದ ಸುವರ್ಣ ದಿನಗಳವು. ಕವಿತೆ-ಲೇಖನ ಸ್ಪರ್ಧೆಗಳಲ್ಲಿ ಬಹುಮಾನ ಗಿಟ್ಟಿಸಿಕೊಂಡು ಮೇಷ್ಟ ಪ್ರೀತಿಗೆ ಕಾರಣನಾಗಿಬಿಟ್ಟೆ ಪ್ರತಿಬಾರಿ ಬಹುಮಾನ ಪಡೆಯುವಾಗಲೂ, ಕೈತುಂಬಾ ಪುಸ್ತಕ ಗಳು, ಹೃದಯದ ತುಂಬಾ ಭರವಸೆಗಳು, ಮನಸ್ಸಿನ ತುಂಬಾ ಕನಸುಗಳನ್ನು ಕೊಟ್ಟು ಕಳಿಸುತ್ತಿ

ದ್ದರು. ಪು.ತಿ.ನ. ರ ಮನೆಯಂಗಳದಲ್ಲಿ, ಕಾರಂತರ ಸಾಮಿಪ್ಯದಲ್ಲಿ, ಕನ್ನಡ ವಿ.ವಿ.ಯ ಆವರಣದಲ್ಲಿ 'ಉಬ್ಬಿ' ಬಹುಮಾನ ಗಿಟ್ಟಿಸಿಕೊಳ್ಳುವಂತೆ ಅವಕಾಶ ಮಾಡಿಕೊಟ್ಟ ಮೇಷ್ಟು 'ಬರೀಬೇಕು' ಎಂಬ ಹಂಬಲವನ್ನು ನನ್ನಲ್ಲಿ ಉಳಿಸಿ, ಬೆಂಬಿಡದೇ ಕಾಯುವ ಶಕ್ತಿಯಂತೆ. ಅಕಸ್ಮಾತ್ ವರ್ಷಗಟ್ಟಲೆ ಏನೂ ಬರೆಯದೇ ಇದ್ದಾಗ, ಇದ್ದಕ್ಕಿದ್ದಂತೆ ಎಲ್ಲೋ ಮೇಷ್ಟು 'ಎದುರು ನೋಡುತ್ತಿದ್ದಾರೆ' ಅಂತಾದರೂ ಬರೆದು ಬಿಟ್ಟಿದ್ದೇನೆ!

ವಿದ್ಯಾರ್ಥಿ ಜೀವನ ದೆಸೆಯಲ್ಲಿರುವ ಸೃಜನಶೀಲ ಮನಸ್ಸುಗಳನ್ನು ಹುಡುಕಿ, ಒಂದೆಡೆ ಕಲೆ ಹಾಕುವ ಮೇಷ್ಟು ಶ್ರೀನಿವಾಸರಾಜುರವರಲ್ಲಿ ಎದ್ದುಕಾಣುವ ಗುಣ ಸೌಜನ್ಯ. ಢಾಣಾ ಡಂಗುರ ಗದ್ದಲದಿಂದ ದೂರ ಇದ್ದುಕೊಂಡೇ ಮಹತ್ತದ್ದನ್ನು ಮೌನವಾಗಿ ಸಾಧಿಸುವ ಮೇಷ್ಟಿಂದ ನಾನು ಕಲಿತ ಪಾಠ ಇದೇ. 'ಅತ್ಯಂತ ವಿನಯವಂತಿಕೆ'ಗೆ ಮತ್ತೊಂದು ಹೆಸರೇ ಚಿ. ಶ್ರೀನಿವಾಸರಾಜುರವರು. ಆಗೆಲ್ಲ ನನ್ನಂತಹ ಹುಡುಗರು ಯೂನಿವರ್ಸಿಟಿಯ 'ಬಿಂಕ-ಬಿಗುಮಾನ'ದ ಪರಿಸರದಲ್ಲಿ ಅನುಭವಿಸಿದ ಉಸಿರುಗಟ್ಟಿಸುವ ಯಾತನೆಗಳು ಹಗುರಾಗುತ್ತಿದ್ದುದು ಜನವರಿ 31ರ ಶ್ರೀನಿವಾಸರಾಜುರವರ ಸಮ್ಮುಖದಲ್ಲಿ. ಸಾಹಿತ್ಯ-ಸಾಹಿತಿ ಎಂಬ ಜಂಭ, ಬಿನ್ನಾಣಗಳೆಲ್ಲವೂ 'ಠುಸ್ಸೆನ್ನುತ್ತಿದ್ದವು'. 'ಎನಗಿಂತ ಕಿರಿಯರಿಲ್ಲ' ಎಂಬ ಮಾತನ್ನು ಅದರೊಂದಿಗೆ ಪ್ರಯೋಗಕ್ಕೆ ಒಳಪಡಿಸಿಕೊಳ್ಳಲು ಕಲಿತದ್ದು ಹೀಗೆ.

ನನ್ನ ಪಾಡಿಗೆ ನಾನು ಆಡುತ್ತಿದ್ದೆ. ಮೇಷ್ಟು ಕರೆದು ಬರೆಸಿದರು. ಚೂರುಪಾರು ಮುಜುಗರದ ಮೊದಲಿನ ಪಿಸುಕಾಟಕ್ಕೆ ಅರ್ಥ ಕೊಡಿಸಿದರು. ಎಲ್ಲಿಗೋ ಹೊರಟಿದ್ದ ಕಾಡನವಿಲಿನ ಹೆಜ್ಜೆ 'ಬೆರಗು'ಗಳ ಹಿಂಬಾಲಿಸಿದಂತಾಗಿತ್ತು. ಅಂತಹ ಬೆರಗುಗಳಿಗೆ ಗರಿ ಮೂಡಿಸಿದವರು ಮೇಷ್ಟು. 8 ವರ್ಷಗಳ ಹಿಂದೆ ಕಾಲೇಜು ಜೀವನ ಮುಗಿದಾಗ ಆ ಕ್ಷಣ ಅನ್ನಿಸಿದ್ದು- ಛೇ, ಕಳೆದು ಹೋಯಿತಲ್ಲ ಆ ದಿನ? ಅವರು ಬೆಳೆಸಿದ ಗಿಡಗಳಲ್ಲಿ ನಾನೂ ಒಬ್ಬ. ದಿಬ್ಬಣದ ದಾರಿಯಲಿ ನಡೆದಿದ್ದೇನೆ.....

■ **ವಾಸುದೇವ ನಾಡಿಗ್**

ಕಾಲುದಾರಿಯ ಹೆಜ್ಜೆಗಳಿಗೆ, ಜೋಡಿಕಣ್ಣುಗಳ ಬ್ಯಾಟರಿ

ಒಂದು ನೆನಪಿಗೆ; ಸಂತೋಷಕ್ಕೆ; ಮುಜುಗರ ಬೆರಗಿಗೆ; ಖುಷಿ ಮತ್ತು ಋಣದ ಭಾವಕ್ಕೆ ಶಬ್ದ ಕೊಡುವ ಪ್ರಯತ್ನ ನನ್ನದು. ಆದರೆ ಇದು ನನ್ನದೊಂದೆ ಅಲ್ಲ, ನನ್ನಂತಹ ಹಲವರದ್ದು. ಹಾಗಾಗಿ ಇದು ವೈಯಕ್ತಿಕ ನೆಲೆಯಲ್ಲಿ ಮಾತ್ರ ನಿಲ್ಲಲಾರದು. ಇದು ಏಕಕಾಲಕ್ಕೆ ಖಾಸಗಿಯೂ ಹೌದು. ಸಾರ್ವತ್ರಿಕವೂ ಹೌದು.

ಕ್ರೈಸ್ಟ್ ಕಾಲೇಜು ಕನ್ನಡ ಸಂಘವೇ ಆದ ಪ್ರೊ. ಚಿ. ಶ್ರೀನಿವಾಸರಾಜು ಅವರ ಒಡನಾಟದ ಆಪ್ತತೆ ಬಲ್ಲ ಮನಸ್ಸುಗಳಿಗೆ ಅವರ ವ್ಯಕ್ತಿತ್ವದ ಬಗ್ಗೆ, ತೋರಿದ ಪ್ರೀತಿ ವಿಶ್ವಾಸದ ಬಗ್ಗೆ, ಕಾಳಜಿ, ಮಮತೆ, ನಿಸ್ಪೃಹತೆಯನ್ನು ಶಬ್ದಗಳಲ್ಲಿ ಅಕ್ಷರಗಳಲ್ಲಿ ತೆರೆದಿಡುವುದು ಕಷ್ಟ. ನಮ್ಮ ಅನುಭವಕ್ಕೆ ದಕ್ಕಿದ ಸಂಗತಿಗಳ ಮೂಲಕ ಘಟನೆಗಳ ಮೂಲಕ ಒಡನಾಟದ ಸನ್ನಿವೇಶ, ಸಂದರ್ಭ ಮಾತುಗಳ ಮೂಲಕ ನಮ್ಮ ಗ್ರಹಿಕೆಯ ಚಿತ್ರವನ್ನು ಇಡಲು ಸಾಧ್ಯ. ಇದು ಅಂತಹ ಒಂದು ಚಿತ್ರ.

ನಮಗೆ ಕಾಲೇಜಿನಲ್ಲಿ ಕ್ರೈಸ್ಟ್ ಕಾಲೇಜಿನಿಂದ ಕವನ ಸ್ಪರ್ಧೆಯಲ್ಲಿ ಬಹುಮಾನ ಪಡೆಯುವುದು ಯಾಕೆ ಖುಷಿಯಾಗಿತ್ತೆಂದರೆ ಆಮೇಲೆ ಸಿಗುವ ಪುಸ್ತಕಗಳು; ನಮ್ಮ ಕವಿತೆಗಳು ಪುಟ್ಟ ಸಂಕಲನದಲ್ಲಿ ಅಡಕವಾಗುವುದರೊಂದಿಗೆ ಅದರಲ್ಲಿ ನಮ್ಮ ವಿಳಾಸ ಬೇರೆ ಇರುತ್ತಿತ್ತು.

ಆ ಸಂಕಲನವನ್ನು ಸ್ನೇಹಿತರಿಗೆ; ನಮಗೆ ಕಲಿಸಿದ ಗುರುಗಳಿಗೆ ನೀಡುವುದು ಕವಿತೆ ಬರೆದಿದ್ದಕ್ಕೂ ಸಾರ್ಥಕ ಎನ್ನುವ ಭಾವ.

ಆಗೆಲ್ಲ ನಮಗೆ ಶ್ರೀನಿವಾಸರಾಜುರವರು ಪತ್ರಗಳ ಮೂಲಕ ಮಾತ್ರ ಗೊತ್ತು. ಹೇಗಿರಬಹುದು ಎಂಬುದು ಒಂದು ಕಲ್ಪನೆಯ ಚಿತ್ರ ಮಾತ್ರ. ಧಾರವಾಡದ ಕಲಾಭವನದಲ್ಲಿ ನಡೆದ ಕ್ರೈಸ್ಟ್ ಕಾಲೇಜು ಕನ್ನಡ ಸಂಘದಿಂದ ನಡೆದ ಕವಿಗೋಷ್ಠಿಯಲ್ಲಿ ಅವರನ್ನು ನೋಡಿದ್ದು. ಎಷ್ಟು Simple ಅಲ್ವಾ? ನಾನು ಹೀಗೆ ಅಂದ್ಕೊಂಡಿರಲಿಲ್ಲ ಅನ್ನಿಸಿತು. ಅವತ್ತು ನಾನು ಕವಿತೆ ಓದಿದ್ದೆ. ಹಾಸ್ಟೆಲ್‌ಗೆ ಹೋಗುವ ಅವಸರ. ಆಗ ಕೇಳಿದ್ರು ಮೇಷ್ಟ್ರು 'ನೀವೇನಾದ್ರೂ ಕವನ ಸಂಕಲನ ತರೋ ಯೋಚನೆ ಇದೆಯಾ? ನಾವು ತರ್ತೀವಿ' ನನಗೆ ಇದು ಅನಿರೀಕ್ಷಿತ. ಏನು ಹೇಳಬೇಕೊ ತೋಚಲಿಲ್ಲ 'ಹೌದು' ಎಂದಷ್ಟೇ ಹೇಳಿದೆ. ನಾನು ಬರೆದದ್ದು ನಿಜವಾಗ಼್ೂ ಕವಿತೆಯಾ? ಎಂದು ಅಳುಕಿನಲ್ಲಿದ್ದ ನನಗೆ ಸಂಕಲನ ತರುವ ಯೋಚನೆ ಇರಲಿಲ್ಲ. ಆ ಯೋಗ್ಯತೆಯೂ ನನಗಿಲ್ಲ ಎಂದೇ ಅಂದುಕೊಂಡಿದ್ದವಳ ಸಂತೋಷಕ್ಕೆ ಮಿತಿ ಇರಲಿಲ್ಲ. ಆದ್ರೂ ಒಂದು ಅನುಮಾನ, ಬಹುಶಃ ಇವ್ರು ನನ್ನನ್ನು ಪ್ರೋತ್ಸಾಹಿಸಲಿಕ್ಕೆ ಹೇಳಿದ್ದಾರೆ, ಸಂಕಲನ ತರ್ತಾರೋ ಇಲ್ವೋ - ಹೀಗೆ.

ಆದರೆ ನಾನು ಕವಿತೆಗಳನ್ನು ಪೋಸ್ಟ್ ಮಾಡ್ದೆ ಅಷ್ಟೆ. ಪುಸ್ತಕ ಬಿಡುಗಡೆ ಸಮಾರಂಭದಿಂದ ಹಿಡಿದು ಎಲ್ಲ ಮಾಡಿದವರು ಶ್ರೀನಿವಾಸರಾಜು ಅವರು.

ಬೆಂಗಳೂರಿನ 'ವಿಸ್ತಾರ' ಅರಿಯದ, ಪ್ರಕಟಣೆಯ ತಲೆಬಿಸಿ ಗೊತ್ತಿರದ ನಾನು ಎಷ್ಟು ನಿರುಮ್ಮಳವಾಗುಳಿದೆ. ಈಗ ಯೋಚಿಸಿದರೆ ಮೇಷ್ಟ್ರು ಕವರ್ ಪೇಜ್‌ಗಾಗಿ; ಪ್ರಕಟಣೆಗಾಗಿ; ಪ್ರತಿಗಳನ್ನು ಓದೋದಕ್ಕಾಗಿ ಎಷ್ಟು ತೊಂದ್ರೆ ತಗೊಂಡ್ರಲ್ವಾ? ಇದೆಲ್ಲ ದೃಶ್ಯಾವಳಿಗಳ ಹಾಗೆ ಕಣ್ಣ ಮುಂದೆ ಬರತ್ತೆ. ಇದು ಒಂದೆರಡಲು ವರ್ಷದ ಒಜ್ಜಿಬ್ಬರ ಗೋಳಲ್ಲ. ಪ್ರತಿವರ್ಷದ್ದು. ಕಾಲೇಜು ಕೆಲಸ, ಮನೆ, ವೈಯಕ್ತಿಕ ಸಂಗತಿಗಳಾಚೆ ಮೇಷ್ಟ್ರು ಇದನ್ನೆಲ್ಲ ಹೇಗೆ ನಿಭಾಯಿಸಿದ್ರು. ಬೇಸರಿಸಕೊಳ್ಳದೆ; ಕೋಪಿಸಿಕೊಳ್ಳದೆ, ನಿರಾಶರಾಗದೆ. ನನ್ನ ಸಂಕಲನ ತರಲು ನಾನು ಏನೂ ಮಾಡ್ದೆ ಎಲ್ಲ ಮೇಷ್ಟ್ರ ಮೇಲೆ ಬಿಟ್ಟಬಿಟ್ಟೆ ಅಲ್ವಾ ಅನ್ನೋ ಅಪರಾಧಿ ಭಾವ ಕಾಡತ್ತೆ.


ಅವತ್ತು ಮಧ್ಯಾಹ್ನ ಕ್ರೈಸ್ಟ್ ಕಾಲೇಜಿಗೆ ಹೋಗಿದ್ದೆ. ಮೇಷ್ಟ್ರು ನನ್ನ ಸಂಕಲನದ ಹಲವು ಪ್ರತಿಗಳ ಕಟ್ಟು ಕೊಟ್ರು. ಜೊತೆಗೆ ಕ್ರೈಸ್ಟ್ ಕಾಲೇಜಿನ ಹಲವು ವರ್ಷಗಳ ಪ್ರಕಟಣೆಯ ಪುಸ್ತಕಗಳು. ಮನೆಗೆ ಬಂದವಳಿಗೆ ಅರಿಶಿನ ಕುಂಕುಮ ತಾಂಬೂಲ ಕೊಟ್ಟಂತೆ. ಇಷ್ಟೆಲ್ಲ ಪುಸ್ತಕಗಳನ್ನು ಹಾಗೇ ಪಡೆಯಲು ಸಂಕೋಚ. ಆದ್ರೆ ಅವರು ವಿಶ್ವಾಸದಿಂದ ಕೊಡುತ್ತಿರುವುದಕ್ಕೆ ದುಡ್ಡಲ್ಲಿ ಅಳೆಂದತಾದರೆ. ಹಾಗಾಗಿ ಮುಜುಗರದಿಂದ ನಾನೇನು ಕೊಡ್ಲಿ ಸಾರ್ ಅಂದೆ.

'ನೀವು ಮತ್ತೆ ಕವಿತೆ ಬರಿಬೇಕು'

ಕವಿತೆ ಓದವ್ರ್ಯಾರು? ಬರಿಬೇಕೇಕೆ? ನನಗ್ಯಾಕೋ ಬರೆಯುವ ತೀವ್ರತೆ ಇಲ್ಲ ಎನ್ನಿಸಿದ ಕ್ಷಣಗಳಲ್ಲಿ ನನಗೆ ಈ ಮಾತು ನೆನಪಾಗುತ್ತದೆ. ಬರೆಯುವುದು ಅಕ್ಕರೆಯ ಕೆಲಸದ ಹಾಗೆ ಅನ್ನಿಸುತ್ತದೆ. ನನ್ನ ಕವನ ಸಂಕಲನಕ್ಕೆ ಬಹುಮಾನ ಬಂತು. ಮೇಷ್ಟ್ರಿಗೆ ಫೋನ್ ಮಾಡಿ ನಂದೇ ನಾನು ಹೇಳ್ಕೊಳೋಕೆ ಸಂಕೋಚ; ಆದ್ರೆ ಅವ್ರೇ ಫೋನ್ ಮಾಡಿ ಅಭಿನಂದಿಸಿದ್ರು, ಮತ್ತೆ ಬರಿ ಅಂದ್ರು. ಏನ್ ಮಾಡದಿದ್ರೂ ಎಲ್ಲ ನಾನೇ ಮಾಡ್ದೆ ಎನ್ನುವ, ನನ್ನಿಂದಾನೇ ಆಯ್ತು ಎನ್ನುವವರ ಮಧ್ಯೆ ಮೇಷ್ಟ್ರು ಎಷ್ಟು ಭಿನ್ನವಾಗ್ತಾರಲ್ವಾ? ನಾವು ಅವ್ರೆದುರು ಎಷ್ಟು ಕುಬ್ಜರಾಗಿ ಬಿಡ್ತೀವಿ.

ದೊಡ್ಡ ರಸ್ತೆಗಳಿಗೆ ಎರಡೂ ಪಕ್ಕಗಳಲ್ಲಿ ದೀಪಗಳಿರುತ್ತವೆ. ಅಲ್ಲಿ ನಡಿಗೆ ಸುಲಭ. ಆದರೆ ಎಲ್ಲರೆದುರು ರಹದಾರಿಗಳೇ ತೆರೆದಿರುವುದಿಲ್ಲ. ಕಾಲುದಾರಿಗಳಿಗೆ ಹೆಜ್ಜೆ ಇಟ್ಟಷ್ಟೇ ಜಾಗ. ಈ ಹೆಜ್ಜೆಗಳಿಗೆ ಜೋಡಿಕಣ್ಣುಗಳ ಬ್ಯಾಟರಿಯಾಡಿ ಬೆಳಕು ಹರಡಿ ದಾರಿ ತೋರಿದ ತಾಳ್ಮೆಗೆ, ವಿಶ್ವಾಸಕ್ಕೆ ಅಕ್ಕರಾಸ್ತೆಗೆ ಹೆಜ್ಜೆ ಇಟ್ಟವರ ಮನದಲ್ಲಿ ಒಂದು ಕೃತಜ್ಞತೆ; ಋಣ ಹೊತ್ತ ಭಾವ; ಹೇಳಲು ಹಿಂತಿರುಗಿದರೆ ಎಷ್ಟುದ್ದದ ದಾರಿ. ಎಲ್ಲರೂ ಅದೇ ಬೆಳಕಲ್ಲಿ ನಡೆದು ನಡೆದು ಬರುತ್ತಿದ್ದಾರೆ. ಮುಂದೆ ತಲೆ ಎತ್ತಿದರೂ ಅದೇ ಬೆಳಕಲ್ಲಿ ಹೋಗುತ್ತಿದ್ದಾರೆ. ಅದೇ ದಾರಿ; ಇದೇ ಬೆಳಕು. ಇಟ್ಟ ಹೆಜ್ಜೆಗಳಿಗೆ ಲೆಕ್ಕವಿಲ್ಲ. ಹಾಗಿಡುವುದು ಅವರ ಜಯಾಮಾನವಲ್ಲ.

■ **ಸುಧಾಶರ್ಮಾ, ಚವತ್ತಿ**



ಋತ ಎಸ್.

ಆ ಝರಿಗೆ ಹೆಸರಿಲ್ಲ

■ ಕೆ. ರಾಜಲಕ್ಷ್ಮಿ ರಾವ್



ಎಲ್ಲಿ ತುಸು ಕೂರೋಣ ಈ
ಸೌದೆ ಹೊರೆಯ ಇಳಿಸಿ ಉಸ್ಸೆಂದು
ಸುಸ್ತಾಗಲೊಲ್ಲದೇ ನಿಂಗೆ
ಅಲ್ಲೆಲ್ಲ ಮೈಕೈ ತರಚಿದ ಮುಳ್ಳುಗಳು
ಹಾದಿಯಲಿ ಬಂದರಲ್ಲ ನನ್ನ ಜೊತೆ
ಅವರ ಹೊರೆಗಳಲ್ಲಿದ್ದ ಕಾಡು ಹೂಗಳೇ
ಅಜ್ಜಿ ಕತೆಯ ನಾಗರವೆನಿಸಿದ್ದು
ಕೈ ಹಿಡಿಯಬೇಡ, ಕೇಳು.
ನಿನ್ನ ದಾರಿಯ ಮನಸು ಮೋಡವಲ್ಲ ತಾನೇ ?

ಆ ಸಪೂರ ಝರಿಗೆ ಹೆಸರಿಲ್ಲ,
ಅದು ಜೋಗದಂತಿಲ್ಲ
ಅಲ್ಲೊಂದು, ಇಲ್ಲೊಂದು ಹಾವುಗಳು
ನೆಕ್ಕಿವೆ. ಆದರೆ ತೇವ ಆಗಿಲ್ಲ

ದನಕರುಗಳ ಮೂತಿ ತಂಪಾಗಿವೆ
ತರಗೆಲೆಗಳು ಕೊಳೆತು ಈಟಾಗಿದೆ
ಶರಾವತಿಗದು ಗೊತ್ತೇ ?

ತುಕ್ರಜ್ಜನ ಕೋಲು, ಚಟಗುಟ್ಟುವ ಕೋಲು
ನಟ್ಟಿರುಳು ಝರಿಯ ಕಡಿ ಕಟ್ಟಿದೆ.
ಅವನ ಅರ್ವತ್ತು ವರ್ಷಗಳ ಲೆಕ್ಕ ತಪ್ಪಿ
ಅಂದು ರಾತ್ರಿ ಮಳೆ ಸುರಿದಿದೆ.

ಟಿಟ್ಟಿಭ, ಶಕುಂತ ಇನ್ನೇನೋ
ಹಕ್ಕಿ ಪಕ್ಕಿಗಳ ಕೊಕ್ಕಿನ ಹನಿಯಾಗಿ
ಮಾಂಸದ ಪುಟ್ಟ ಉಂಡೆಯಂತಿರುವ
ಹಕ್ಕಿ ಮರಿಗಳ ಗಂಟಲ ಪಸೆಯಾಗಿ
ಚಿಗುರಲೆಳಸುವ, ಕಬಿಲೆ ದನ ಮೆಂದ
ಬಿಳಿಲ ಹುಲ್ಲಿನ ಬುಡುವಾಗಿ.

ಏಯ್, ನಿಲ್ಲು, ನಿಧಾನಕ್ಕೆ ನಡೆ.



ಬೆಳದಿಂಗಳ ಪಯಣ

■ ಗೀತಾ ಡಿ.ಸಿ.


ನಕ್ಕ ಚಂದ್ರನ ಪರಿಗೆ ಬೆಳದಿಂಗಳು ಚೆಲ್ಲಿ
ಒಂದೊಂದೇ ಮುತ್ತುದುರಿ ಆಯ್ದುಕೊಳ್ಳುವಾಗ್ಗೆ
ಅವನೇ ಮಾಯ !
ಅರೆ !!
ಉಸಿರೆಳೆದುಕೊಂಡಷ್ಟೂ ಕಂಪು, ತಂಪು
ಕೊಂಚ ಇರು ಸಾವರಿಸಿಕೊಳ್ಳುತ್ತೇನೆ.
ಬೆಳದಿಂಗಳ ಪಯಣ ಅಷ್ಟು ಸಲೀಸೇನಲ್ಲ.
ಸರಿ, ಸರಿ.....
ಟೂ ಬಿಟ್ಟು ಹೊಂಟಾಗ
ನಕ್ಷತ್ರಗಳ ಬೆಳಕಿಗೇ ಕಣ್ಣು ಕೋರೈಸಿದ್ದು ನಿಜವೆ ?

ಅಯ್ಯೋ
ಬೆಳದಿಂಗಳೇ ಬಿಸಿಲಾಗಿ, ಬಿಸಿಲ್ಗುದುರೆಯಾಗಿ,
ಬೆಂಕಿಯಾಗಿ, ಬೆಂಕಿಯುಂಡೆಯಾಗಿ
ಮೈಚಳಿಯ ಕಾಯಿಸಿದಾಗ
ಮತ್ತೇನೂ ತೋಚದೆ
ಮಂಡಿಗೆ ಮುಖ ಸಿಕ್ಕಿಸಿ ಬಿಕ್ಕಿ
ಪುಸ್ತಕದಲಿ ತಲೆಯಿಟ್ಟು, ಹಗುರಾಗಿ
ಚಂದ್ರನ ಕಾಣದೆ ಬರೀ ನಕ್ಷತ್ರಗಳ ಎಣಿಸಿ
ಬಲವಂತದ ಮುಗುಳುನಗೆ ಮುಡಿದು.....
ಚಾಪೆ ಧೂಳನೆತ್ತಿ ಕೊಡವಿ,
ಕಿಟಕಿ ಪರದೆ ಸರಿಸಿ, ಬೀಗ ಜಡಿದು
ದೇವಲೋಕದ ಪಾರಿಜಾತದ
ಆ ಕಂಪ ಜಾಡ ಹಿಡಿದು,
ಬೆಳದಿಂಗಳಲಿ ಬೀಗಿ ನಡೆದು
ನಡೆದೂ.... ನಡೆದೂ....
ಸುಸ್ತಾದ ಮೂಗಿಗೆ ಬಡಿದದ್ದು;
ಮುಚ್ಚಿಟ್ಟ ತಂಗಳನ್ನದ ಡಬ್ಬಿಯ ಗಬ್ಬು!

ಅಂತೂ ಬೆಳದಿಂಗಳ ಭ್ರಮೆಯಲ್ಲಿ
ತೇಲಿ ಬರುವಾಗ್ಗೆ
ಕಲ್ಲುಮುಳ್ಳುಗಳ
ಹಾದಿಯಲಿ ನಡೆದಂತೆ
ಅಂಗಾಲೆಲ್ಲಾ ಕೆಂಪು!



ಪುಸ್ತಕ ಪರಿಚಯ



ರಾತ್ರಿ ಸೂರ್ಯಳ ಕನಸು

ಲೇ : ವಿಜಯೇಂದ್ರಕುಮಾರ್ ಜಿ.ಎಲ್.
ಪುಟ : 69
ಬೆಲೆ : ರೂ. 40.00
ಪ್ರಕಾಶಕರು : ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್

ವಿಜಯೇಂದ್ರ ಕುಮಾರ್ ಜಿ. ಎಲ್‌ರ ಪ್ರಥಮ ಕವನ ಸಂಕಲನವಾದ 'ರಾತ್ರಿ ಸೂರ್ಯಳ ಕನಸು' ಶೀರ್ಷಿಕೆಯೇ ತಿಳಿಸುವಂತೆ ಇಲ್ಲಿನ ಅನೇಕ ಕವಿತೆಗಳು ನಲ್ಲೆ - ನಲ್ಲೆಯರ ವಿಶೇಷವಾಗಿ ಹೆಣ್ಣಿನ ಭಾವುಕತೆಯನ್ನು ವ್ಯಕ್ತಪಡಿಸುವಂತಹ ಕವನಗಳು.

> ಸಾಗುತ್ತಲಿದೆ ಆತ್ಮದ ಹುಡುಕಾಟ,
> ಗಲ್ಲಿ ಗಲ್ಲಿಗಳಲ್ಲಿ ಮೋರಿಗಟಾರಗಳಲ್ಲಿ
> ಗಾಳ ಹಾಕುತ್ತ
> ಕನಸು ಕಣ್ಣೆದುರಿಗೆ ಹುಟ್ಟಿ
> ಸತ್ತು ತೇಲಿ ಹೋಗುವುದರ ನೋಡುತ್ತ.

(ಬೋದಿಲೇರ್ ತನ್ನ ಪ್ರೇಯಸಿಗೆ ಹೇಳಿದ್ದು)

ಈ ಕವಿತೆಯಲ್ಲಿ ಬೋದಿಲೇರ್ ತನ್ನ ಪ್ರೇಯಸಿಯನ್ನು ಪವಿತ್ರ ದೇವತೆ ಎಂದು ಕರೆಯುತ್ತಲೇ ಅವಳ ಗುಲಾಮನಾಗುತ್ತಾನೆ. ಅವನದು ಕೇವಲ ಆತ್ಮದ ಹುಡುಕಾಟ ಮಾತ್ರವಲ್ಲ ಸಾರ್ಥಕವಾದ ಪ್ರೀತಿಯ ಹುಡುಕಾಟವೂ ಹೌದು. ಅವನು ಬಯಸುವುದು ಅವಳ ಮದ್ಯ ಸವರಿದ ಚರ್ಮ ಮತ್ತು ಕಾಡುವ (ನಮ್ಮನು ಕಾಡುವ) ಯೌವ್ವನದ ಚರ್ಮ.

ಹೆಣ್ಣಿನ ಭಾವನೆಗಳ ತೀವ್ರತೆಯನ್ನು ಮತ್ತು ಅವಳ ಅಂತರಂಗದ ಭಾವನೆಗಳ ತಹ ತಹ ತಲ್ಲಣಗಳನ್ನು ವ್ಯಕ್ತಪಡಿಸುವ ಹೆಣ್ಣು 1,2,3 ಕವಿತೆಗಳಲ್ಲಿ ವಿಶೇಷವಾಗಿ ಹೆಣ್ಣು -2 ರಲ್ಲಿ ಕನಸು ಮತ್ತು ವಾಸ್ತವ ಜಗತ್ತಿನಲ್ಲಿ ತಮ್ಮ ಅಂತರಂಗವನ್ನು ಬಿಚ್ಚಿಕೊಳ್ಳುವಲ್ಲಿ 'ಹಂಗಾಮಿ' ಮತ್ತು ರಾಜಕುಮಾರಿ ವಿಫಲರಾಗಿದ್ದಾರೆ.

ಇಲ್ಲಿ ವ್ಯಂಗ್ಯ, ದುರಂತ, ವಿಷಾದಗಳನ್ನು ನೋಡಬಹುದು. ಇವರಿಬ್ಬರೂ ಕನಸುಗಳನ್ನು ಹಿಡಿಯುತ್ತಾ ದಾರಿಗಳನ್ನು ಹುಡುಕುತ್ತಲೇ ಮಾಯವಾಗುತ್ತಾರೆ.

> ಸೂರ್ಯನಂಥವಳು ಅವಳು
> ಆಲಿಸಿದೆ. ನನ್ನ ಮಗ್ಗುಲಿಗೆ
> ಹೆಡೆಯೆತ್ತುತ್ತಿತ್ತು ಹಾಡು
> ಇದು ರಾತ್ರಿ ಸೂರ್ಯಳ ಕನಸು
> ಕಾಲ ಚಕ್ರ ತಿರುಗಿ ಬರುವುದೆಂದು
> ಕಾಯುತ್ತಿದ್ದೇವೆ ನಮ್ಮ ಕಾಲಕ್ಕಾಗಿ ನಾವುಗಳು (ರಾತ್ರಿ ಸೂರ್ಯಳ ಕನಸು)

ಈ ಕವಿತೆಯಲ್ಲಿ ಒಂದು ಸ್ವಪ್ನದ ಮತ್ತು ನಿಸರ್ಗದ ಪ್ರತಿಮೆಯನ್ನು ಕೊಡುತ್ತಲೇ ಏಕಾಏಕಿಯಾಗಿ ಇಲ್ಲಿನ ಕೇಂದ್ರ ವ್ಯಕ್ತಿಯು ಬದುಕಿನ ಕಡೆಗೆ ವಾಲುತ್ತಾನೆ.ಸಂಗಾತಿಯ ಅಗಲಿಕೆಯ ಪರಿಣಾಮ ದಿಂದ ಕಾಲ ಚಕ್ರದಲ್ಲಿ ತಿರುಗುತ್ತಿದ್ದಾನೆ. ಆದರೆ ಕಾಲ ಅವನನ್ನು ಮೀರಿ ನಿಂತಿದೆ. ವ್ಯಂಗ್ಯದ ಧಾಟಿಯಲ್ಲಿ ಸಾಗಿ ಅಂತಿಮವಾಗಿ ದುರ್ಬಲತೆಯನ್ನು ಒಪ್ಪಿಕೊಳ್ಳುತ್ತಾರೆ. (ಸಂತಾಪ ಸೂಚಕ ಸಭೆಯಲ್ಲಿ ಮತ್ತು ನನ್ನ ಗೀತ)

ನಲ್ಲೆ-ನಲ್ಲೆಯರು ತಮ್ಮ ಬದುಕಿನಲ್ಲಿ ಮಧುರವಾದ ಭಾವನೆಗಳ ಬೆನ್ನಟ್ಟಿ ನಿರಾಶವಾದಿಗ ಳಾಗಿ ಬಿಡುವ ಸನ್ನಿವೇಶವನ್ನು ಮುಂಗಾರು 1 ಮುಂಗಾರು 2 . ಆಕೆ ತನ್ನ ಪ್ರಿಯಕರನಿಗೆ ಹೇಳಿದ್ದು ಮುಂತಾದ ಕವಿತೆಗಳಲ್ಲಿ ನೋಡಬಹುದು.

ಇಡೀ ಸಂಕಲನದಲ್ಲೇ ಗಮನ ಸೆಳೆಯುವಂತಹ 'ಬಂಜೆ ನೆಲದ ಹಾಡು' ವಿನಲ್ಲಿ ಪ್ರತಿಭಟನೆಯ ದನಿ, ಆರ್ತತೆ, ಅಸಹಾಯಕತೆಗಳನ್ನು ಹೊಂದಿದೆ. ಇಲ್ಲಿನ ನಾಯಕ ಮತ್ತೊಮ್ಮೆ ರಾಮ, ಕ್ರಿಸ್ತ, ಸಾಕ್ರಟೀಸ್‌ರನ್ನು ಪ್ರಶ್ನಿಸುತ್ತಾ ತನ್ನಹೊಟ್ಟೆಹಾಡನ್ನು ಹಾಡುವುದು ವಿಶೇಷ. ಇದು ಕೇವಲ ಬಂಜೆ ಬದುಕಿನ ವಾಣಿ ಕೂಡ ಹೌದು.

ಇಷ್ಟಿದ್ದರೂ ಇಲ್ಲಿನ ಅನೇಕ ರಚನೆಗಳು ಅವ್ಯಾಪ್ತಿಯಿಂದ ಕೂಡಿವೆ. ಒಂದು ವಿಷಯವನ್ನು ಕುರಿತು ಹೇಳುತ್ತಾ ಹೇಳುತ್ತಾ ಇದ್ದಕ್ಕಿದ್ದಂತೆ ಮತ್ತೊಂದು ವಿಷಯಕ್ಕೆ ಜಿಗಿಯುತ್ತೇವೆ. ಉಳಿದಂತೆ ಲಯ ಪ್ರಾಸದ ವಿಚಾರದಲ್ಲಿ ಪರವಾಗಿಲ್ಲ. ಆದರೂ ವಸ್ತು ಮತ್ತು ಆಶಯದಲ್ಲಿ ವಿಜಯೇಂದ್ರ ಅವರು ಇನ್ನಷ್ಟು ಬಲಗೊಳ್ಳಬೇಕಾಗುತ್ತದೆ. ಪ್ರತ್ಯಕ್ಷವಾಗಿ ವ್ಯಕ್ತವಾಗುವ ಭಾವನೆಗಳನ್ನು ನೆಲಮಾ ಳಿಗೆಯಲ್ಲಿ ಇಟ್ಟು ಬಾಲಿತನದಿಂದ ಮನೆಯನ್ನು ಪ್ರವೇಶ ಮಾಡುತ್ತಾರೆ. ಕೆ. ಕೆ. ಹೆಬ್ಬಾರ್ ಅವರ ಚಿತ್ರ ಇಡೀ ಸಂಕಲನ ವಸ್ತುವನ್ನು ತಿಳಿಸುತ್ತದೆ.

ಆಡುವ ಗಿಣಿಯೊಂದ ಕಳಿಸಮ್ಮ



ಲೇ : ಕೆ.ವೈ. ನಾರಾಯಣಸ್ವಾಮಿ

ಪುಟ : 72

ಬೆಲೆ : ರೂ. 50.00

ಪ್ರಕಾಶಕರು : ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು

ಇತ್ತೀಚಿನ ದಿನಗಳಲ್ಲಿ ಕವಿಗಳು ಭಾವಗೀತಾತ್ಮಕ ಮತ್ತು ಜನಪದೀಯ ಧಾಟಿಯಲ್ಲಿ ಬರೆಯು ವುದು ಕ್ರಮೇಣ ಕಡಿಮೆಯಾಗುತ್ತಿದ್ದಾರೆ. ಇಲ್ಲವೇ ಇಲ್ಲವೆನ್ನುವಷ್ಟು. ಈ ಆತಂಕ ಒಂದು ತುದಿ ಯಲ್ಲಿ ಪ್ರಾದೇಶಿಕ ಸೊಗಡಿನಲ್ಲೇ ವಿಶಿಷ್ಟವಾದ ಅರ್ಥವಂತಿಕೆಯನ್ನು ಅನಾವರಣಗೊಳಿಸು ವುದು ಆಶಾವಾದವಾದರೆ, ಬದಲಾವಣೆಯೇ ಭಾಷೆಯ ಜೀವಂತಿಕೆ ಲಕ್ಷಣ ಮತ್ತು ಬದುಕಿನ ಗುರಿ ಎಂಬುದಕ್ಕೆ ಇನ್ನೊಂದು ತುದಿಯಲ್ಲಿ ವಿದಾಯದ ಮನೋಭಾವನೆ ನಮ್ಮಲ್ಲಿ ಮೂಡು ತ್ತಿದೆ. ಈ ಬಿಕ್ಕಟ್ಟಿನಲ್ಲಿ ಕೆ. ವೈ . ನಾರಾಯಣಸ್ವಾಮಿ ಯವರ '**ಆಡುವ ಗಿಣಿಯೊಂದ ಕಳಿಸಮ್ಮ**' ಗಮನಾರ್ಹವಾದುದು.

ನಿಸರ್ಗ ಮತ್ತು ಮನುಷ್ಯನ ಅವಿನಾಭಾವ, ನೆಂಟು ಮತ್ತು ನೆನಪು ಗಣಿಯಿಂದು ಬದುಕನ್ನು ಅರಿಯುವುದು. ಮಣ್ಣನವಾಸನೆ(ಭೂಮಿತಾಯಿ)ಗೆ ಸ್ಪಂದಿಸುವ ರೀತಿ, ಸಾವು ಮುಖ್ಯವಾಗಿ ಇಲ್ಲಿನ ವಸ್ತು.

ಆಡುತ್ತಾಡುತ್ತಲೇ ಕಣ್ಣು ಮುಚ್ಚಾಲೆ
ಅಡಗಿ ಕೊಂಡೋಳೆ ಕಣ್ಣಾಮರೆಗೆ
ಓಗೊಟ್ಟೋಳೆ ಮಣ್ಣ ಕರೆಗೆ

ಯಟ್ಟಾಮಾಯವಲ್ಲೇಬಟ್ಟ ಬಯಲಲ್ಲಿ
ಕಣ್ಣುಮುಚ್ಚಲೆ? ಮುಚ್ಚಿರುವ ಕೈ ಬಿಚ್ಚಲೆ?
ಆಟ ಮುಗಿಯಿತೆ? ಹೊತ್ತು ತೀರಿತು (ಕಣ್ಣು ಮುಚ್ಚಾಲೆ)

ಒಂದು ಆಟದ ಪ್ರತಿಮೆಯ ಮೂಲಕ ಸಾವನ್ನು ನಿಕಷನಗೊಳಿಸುವುದು, ಇದು ಬರೀ ಕಣ್ಣು ಮುಚ್ಚಾಲೆ ಆಟವಲ್ಲ, ಸಾವಿನ ಕಣ್ಣು ಮುಚ್ಚಾಲೆ. ಇಂದು ಗೆಲ್ಲುವವರು ಸೋಲುವವರು ಎಷ್ಟು ಜನ. ? ಕೂಗಿ ದಣಿದರೂ ಅತ್ತು ಕರೆದರೂ ಅಂತೂ ನೀ ಬರಲೇ ಇಲ್ಲ ಆಟದ ಕಟ್ಟಕಡೆಯಲ್ಲಿ ಎಂದು ನಿರಾಶೆಯನ್ನು ತರುತ್ತದೆ. ಇಡೀ ನಮ್ಮ ಬದುಕಿನಲ್ಲಿಯೇ ಸಾವು ಒಂದು ಭಯಾನಕ ತೆಯ, ಅಂತಃಕರಣದ ಅಂಗಳವನ್ನೇ ಮಿಡಿಯುವಂತ ಅನುಭವ.

'ಪ್ರಾಣ ಲಂಗರು ಹುಡುಕುತ್ತಿದೆ ನಿಲ್ದಾಣ
ಯಾವ ಘಳಿಗೆಗೆ ಎತ್ತ ಹಾರಿ ಹೋಗುವುದೋ ಪಕ್ಷಿ! (ನಾವಿತ್ತ ಮಣ್ಣನ್ನು ಅಮರವಾಗಿಸು)

ಆ ಜೀವ ಪಕ್ಷಿಗೆ ಕಾಲದ ಬದ್ಧತೆ ಇಲ್ಲ,
ಸಾವು ಬೆನ್ನಟ್ಟ ಹರಿವ ಜೀವನಾಡಿ ಜಲಕನ್ನೇ
ಅಂತರ ಗಂಗೆ।
ಯಾವಲೋಕದ ಬಾಗಿಲು। ಆ ಸುರಂಗ?
ಹೊಕ್ಕಂತೆ ಪಾತಾಳಗವಿ (ಕಂದು)

ಈ ಕವಿತೆಯಲ್ಲಿ ಸಾವಿನ ಅಂಚಿನಲ್ಲಿರುವ ಮುದುಕನ ಚಿತ್ರವನ್ನು ನೀಡುತ್ತಲೇ ಮಣ್ಣಿನ ವಾಸನೆಯಲ್ಲಿ ಹುಟ್ಟ ಬೆಳೆದು ಕೊನೆಗೆ ಅದರಲ್ಲಿ ಲೀನವಾಗುವುದನ್ನು ಇಲ್ಲಿನ ಕೇಂದ್ರ ವ್ಯಕ್ತಿ ವ್ಯಕ್ತಪಡಿಸುತ್ತಾನೆ. ಸಾವು ಜಲಕನ್ನೇ ಆದರೂ ಅದು ಅಂತರಗಂಗೆ. ಸಾವಿನ ಪಕ್ಷಿಯನ್ನು ಕೊಂಡೊಯ್ಯುವ ಲೋಕವಾದರೂ ಯಾವುದು? ಅದು ಪಾತಾಳ ಗವಿ.

'ಅತ್ತ ಆಲೋಕಕ್ಕೆ ಇತ್ತ ಈ ಲೋಕಕ್ಕೆ ನೆಟ್ಟನಡು ಅಡವಿಯೊಳಗಾನೆ ಹಾದಿ', (ಆ ಲೋಕ) ಅಡವಿಯೊಳಗಾಸಿ ಎಂದರೆ ಜೀವನದ ಹಾದಿಯಿಂದ ಸಾವು ಚಲಿಸುತ್ತದೆ. ಭೂಮಿ ತಾಯಿಯ ಮಡಿಲಲ್ಲೇ ಸಾವಿನ ಸಂವೇದನೆಯಲ್ಲಿ ಬದುಕನ್ನು ಕುರಿತು ಚಿಂತಿಸುವ ಕವಿತೆ ಕೃಷ್ಣಲೀಲೆ. ಇಲ್ಲಿನ ಅನೇಕ ಕವಿತೆಗಳಲ್ಲಿ ಕವಿಯ ಅನುಭವ ಹೆಪ್ಪುಗಟ್ಟಿದೆ.

ಬಾವಲಿ ಬದುಕನ್ನ ಭೂಮಿಗೆ ಇಳಿಸಮ್ಮ
ಕನಸ ಬೂದಿಯಿಂದ ಕಣ್ಣ ಬಿಡಿಸಮ್ಮ
ಅಗ್ನಿ ಕುಂಡಗಳೊ ಕಣ್ಣ ಕಾವಲಿಗಳೊ
ಸ್ವಪ್ನ ಬೀಜಗಳೆಲ್ಲಾ ಸೀಯುತ್ತಿವೆ ತಾಯಿ (ಆಡುವ ಗಿಣಿಯೊಂದ ಕಳಿಸಮ್ಮ)

ಯಾವ ಮಾಯೆಯಲ್ಲಾದರೂ
ಯಾವ ದಿಕ್ಕಿನಿಂದಾದರೂ ಬರಬಹುದು
ನೆನೆವ ಮನಕ್ಕೆ ಬೇರುಂಟೆ (ಯಾವ ಮಾಯೆಯಲ್ಲಾದರೂ)

ಜೀವನದ ತಲ್ಲಣಗಳಿಂದ ಬೇಸತ್ತು ಯಾವುದೋ ಒಂದು ಅಮೂರ್ತ ಶಕ್ತಿಯೊಡನೆ ಸಂವಾದವಿದೆ. ಅವನು ಪಟ್ಟಿರುವ ಪಾಡು, ಭಗ್ನವಾದ ಸ್ವಪ್ನಗಳು, ನಿರಾಶೆಯಿಂದ ಕೂಡಿದ್ದರೂ ಸಾರ್ಥಕವಾದ ಸಂಬಂಧವನ್ನೂ, ಪ್ರೀತಿ-ಮಮತೆಯನ್ನು ಹಾಡಿನ ಧಾಟಿಯಲ್ಲಿ ವ್ಯಕ್ತವಾಗುತ್ತದೆ. ಇದರ ಕೊನೆ ಕವಿತೆಯಾದ 'ರಾಮಚಂದ್ರಶರ್ಮ ಮತ್ತು ಪಾತಾಳರಾಗಿ'ಯಲ್ಲಿ ಪ್ರಾಂತೀಯ ಪ್ರತಿಮೆಗಳ ವೃಭವೀಕರಣದಲ್ಲಿ ಅನೂಹ್ಯವಾದ ಕವಿಯ ಚಿಂತನ ಕಾಯಕಲ್ಪ ಇಲ್ಲಿದೆ.

ಭಾಗ 1 - ಕೋಟೆರಲ್ಲಿ ಕಥೆಯ ರೂಪದಲ್ಲಿ ವ್ಯಕ್ತವಾಗುತ್ತದೆ
ಪೂರ್ವಿಕರು ಬಾಳಿ ಬದುಕಿದ ಕೊತ್ತಲು
ಈಗ ನಮ್ಮೂರಿಗೆ ಹಿತ್ತಲು, ಅದರ ಹಿಂದೆ ಅಕಾಶಕ್ಕೆ ಮೆಟ್ಟಿಲು
ಮುನೇಶ್ವರ ಗುಡ್ಡ ತಳದಲ್ಲಿ ದಟ್ಟಡವಿ
ಹಗಲೇಗವ್ವೆನ್ನುವ ಕತ್ತಲು.....

ಪರಂಪರೆಯ ಬಗ್ಗೆ ವಿಷಾದ ವಾಗ್ವಾದ ಕವಿತ್ವ ಈ ಮೂರು ಅಂಶ ಈ ಕವಿತೆಯಲ್ಲಿ ಅನಾವರಣಗೊಳ್ಳುತ್ತವೆ. ಬೆನ್ನುಡಿಯಲ್ಲಿ ಓ.ಎಲ್. ನಾಗಭೂಷಣಸ್ವಾಮಿ ಅವರು ಹೇಳುವಂತೆ "ಏಕಕಾಲದಲ್ಲಿ ರಾಮಚಂದ್ರ ಶರ್ಮರ ಮಾದರಿಯ ನವ್ಯತೆಯೊಡನೆಯೂ ಶಿವಪ್ರಕಾಶರ ಗೇಯತೆಯೊಡನೆಯೂ ನಾರಾಯಣ ಸ್ವಾಮಿ ವಾಗ್ವಾದ -ಸಂವಾದ ನಡೆಸುತ್ತಾರೆ. ಬೇಂದ್ರೆ ರೀತಿಯಲ್ಲಿ ಮಾತಿನ ಧಾಟಗೆ ಮರುಳಾದಂತೆ ಕಾಣುತ್ತಾ ತಟ್ಟನೆ ಬೇರೆ ರೀತಿಯಲ್ಲಿ ಬರೆಯಲು ಯತ್ನಿಸುತ್ತಾರೆ. ಆದ್ದರಿಂದಲೇ ಫ್ರೆಶ್ ಅನ್ನಿಸುವ ಕವಿತೆಗಳು ಇವು" ಎಂಬ ನುಡಿಗಳು ಅರ್ಥಪೂರ್ಣವಾಗಿವೆ.

ಮಾಯಾ ಪಾತಾಳ



ಲೇ : ರಾಮಲಿಂಗಪ್ಪ ಟಿ. ಬೇಗೂರು

ಪುಟ : 80

ಬೆಲೆ : ರೂ. 50.00

ಪ್ರಕಾಶಕರು : ಅಭಿನವ, ಬೆಂಗಳೂರು

ಮಾಯಾಪಾತಾಳ ರಾಮಲಿಂಗಪ್ಪ . ಟಿ. ಬೇಗೂರು ಅವರ ಚೊಚ್ಚಲ ಕವನ ಸಂಕಲನ. ಇಲ್ಲಿನ ಅನೇಕ ಕವಿತೆಗಳು, ವಚನ, ಹಾಗೂ ಕೀರ್ತನೆಗಳ ಧಾಟಿಯಲ್ಲಿ ಸಾಗುತ್ತವೆ. ಬದುಕಿನ ಮಾಯಾ ಪಾತಾಳದಲ್ಲಿ ನರಳುವ ವ್ಯಕ್ತಿಗಳ ತಹ ತಹ ತಲ್ಲಣ, ಮತ್ತು ಆ ಕಂದರ ದಿಂದ ಹೊರ ಬರುವ ಯತ್ನವೇ ಈ ಕವನ ಗುಚ್ಚದ ಪ್ರಮುಖ ವಸ್ತು. ವಿಹ್ವಲತೆಗಳ ಬೆನ್ನಿನಲ್ಲೇ ಭರವಸೆ ಹುಟ್ಟಿಸುತ್ತಾರೆ.

ಅನುಭವ ಇಲ್ಲಿ ವಿಶಿಷ್ಟ ಛಾಪನ್ನು ಪಡೆದು ಕೊಂಡಿದೆ.

'ಹೊಸಕತೆ' ಕವಿತೆಯಲ್ಲಿ ಕೇಂದ್ರ ವ್ಯಕ್ತಿ ತನ್ನ ಅಸ್ತಿತ್ವವನ್ನು ತಾನೆ ವಿಶ್ಲೇಷಿಸಿ ಕೊಳ್ಳುತ್ತಾ ಚರಿತ್ರೆ ಮತ್ತು ಪುರಾಣ ಇವುಗಳಿಂದ ಬಿಡುಗಡೆ ಪಡೆಯಲು ಪ್ರಯತ್ನಿಸುತ್ತಾನೆ. ನವಬದುಕಿಗೆ ಪ್ರವೇಶ ಮಾಡಲು ಹಾತೊರೆಯುತ್ತಾರೆ. ಇವನಿಗೆ

ಚರಿತೆ ಎಂಬುದು ನೆನಪಿನ ಕಸ
ಚರಿತೆ ಎಂಬುದು ದಾಸ್ಯದಪಾಯ
ಚರಿತ್ರೆ ಎಂಬುದು ಪ್ರಾಣಪಾತಕ (ಹೊಸ ಕತೆ)

ಚರಿತ್ರೆ ಮತ್ತು ಪುರಾಣ ಇವನನ್ನು ದುರ್ಬಲನನ್ನಾಗಿ ಮಾಡಿವೆ. ತನ್ನ ಹಳೆಯ ನೋವಿನ ದಾಳಿಯನ್ನು ಮರೆಯುತ್ತಲೇ ತನ್ನ ಬದುಕಿಗೆ ಹೊಸ ಕತೆಯನ್ನು ಬರೆಯಲು ಹೊರಟಿದ್ದಾನೆ.

ನಮ್ಮ ಬದುಕು ಕ್ಷಣ-ಕ್ಷಣಕ್ಕೂ ನಮ್ಮನ್ನು ಪರಿವರ್ತನೆ ಮಾಡುತ್ತಲೇ ಇರುತ್ತದೆ. ಅದರಲ್ಲಿ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಮನೋಧರ್ಮಗಳು ಎರಡೂ ಇವೆ. 'ಏಕವಾಗಿವೆ' ಕವಿತೆಯಲ್ಲಿ ಇಂದ್ರಿಯಗಳ ಮತ್ತು ನಿಸರ್ಗದ ಸಣ್ಣ ಪುಟ್ಟ ಪ್ರತಿಮೆ, ಸಂಕೇತಗಳನ್ನು ಕೊಡುತ್ತಲೇ ಜೀವನಕ್ಕೆ ಪ್ರವೇಶ ಮಾಡುತ್ತಾರೆ. ತನ್ನ ಸುತ್ತ ಮುತ್ತಲ ಪರಿಸರವನ್ನು ತನ್ನೊಂದಿಗೆ ಸಾದೃಶ್ಯ ಮಾಡಿ ಕೊಳ್ಳುತ್ತಾ'

ಎಲ್ಲ ನನ್ನದೆ ಮಾಟ, ಎಲ್ಲಾ ನನ್ನದೇ ಆದ
'ಆದಿ ಅಂತವೂ ನಾನೇ ಅಂತ ಜೀಜಪ್ಪ' ಎನ್ನುತ್ತಲೇ ಏಕಾಏಕಿಯಾಗಿ

ಏಕವಾಗಿದೆ ಮಾಯೆ
ಏಕವಾಗಿದೆ ಗಾಳಿ ಆಕಾಶ
ಏಕವಾಗಿದೆ ಬೆಂಕಿ ನೀರೆಲ್ಲಾ
ಏಕವಾಗಿದೆ ಸುಡುಗಾಡು
ಏಕವಾಗಿದೆ......... ಎಂದು ವಿಷಾದವನ್ನು ವ್ಯಕ್ತಪಡಿಸುತ್ತಾರೆ.

ಇದೇ ಹಾದಿಯಲ್ಲಿ ಸಾಗುವ' ಬಂದರರಿಯದ ನಾವೆ "ಕಣ್ಣಾಮುಚ್ಚಾಲೆ" ಹಾವು ಮುಂಗಸಿ' ಕವಿತೆಗಳಲ್ಲಿ ವ್ಯಕ್ತಿಯ ಮನಸ್ಸಿನ ಬದುಕಿನ ಮಾಯಾಪಾತಾಳದ ಸಂವೇದನೆಗಳನ್ನ ಸೂಕ್ಷ್ಮವಾಗಿ ಅನಾವರಣ ಮಾಡುತ್ತಾರೆ.

ಸಾಗಿಯೂ ಸಾಗದ ಹಾಗೆ ಸಾಗಲೇಬೇಕು
ಈಜಲಾಗದು ಇಳಿಯಲಾಗದು(ಬಂದರರಿಯದ ನಾವೆ)

ಎಂದು ದ್ವಂದ್ವದಲ್ಲಿ ನರಳುತ್ತಲೇ ಅವನ ನಿಲುವು ಈ ಪ್ರಕ್ರಿಯೆಯಲ್ಲಿ ಬದಲಾಗುತ್ತದೆ

ರಣವಾಗಿದೆ ಬದುಕು
ಮಣ್ಣ ಕನಸಿನಲ್ಲಿ
ಹೆಣವಾಗಿದೆ ಮನಸು ಒಂದೆ ಹೊಡೆತದಲ್ಲಿ'
ಕಣ್ಣಾಮುಚ್ಚಾಲೆ ಕವಿತೆಯಲ್ಲಿ ಹಗಲೇ ಇರುಳೂ ಕಣ್ಣಾಮುಚ್ಚಾಲೆ
ಮುಗಿಮುಗಿಯಲೀ ಕಣ್ಣಾ ಮುಚ್ಚಾಲೆ'

ಇದು ಬದುಕಿನ ಕಣ್ಣಾಮುಚ್ಚಾಲೆ. ಕವಿ ಅದರಿಂದ ಮುಕ್ತಿ ಪಡೆಯಲು ಬಯಸುತ್ತಿರಬಹುದು ಎಂಬ ಗುಮಾನಿಹುಟ್ಟುತ್ತದೆ.

ಅವನ ಅನುಭವದಂತೆ ನಾನು ಗೋಸುಂಬೆ
ನನ್ನ ಅನುಭವದಂತೆ ಅವನು ಗೋಸುಂಬೆ
ನನ್ನದು ನನಗೆ ಸತ್ಯ. ಅವನದು ಅವನಿಗೆ. (ಅನುಭವ)

ಅನುಭವದ ತಿಕ್ಕಾಟದಲ್ಲಿ, ಚಂಚಲತೆಯಲ್ಲಿ ಬದುಕಿನ ವಿಕ್ಷಿಪ್ತ ಮನೋಭಾವನೆಯನ್ನು ಇಲ್ಲಿ ವ್ಯಕ್ತ ಪಡಿಸಿದ್ದಾರೆ. 'ಕೃಷ್ಣನಾದ ' ಮತ್ತು 'ನಾದರಾಧೆ' ಪುರಾಣ ಪ್ರಸಂಗಗಳನ್ನು ಎತ್ತಿಕೊಳ್ಳುತ್ತಲೇ , ಅಂದರೆ ಕೃಷ್ಣ ಮತ್ತು ರಾಧೆಯನ್ನು ನಿದರ್ಶನಕ್ಕೆ ತೆಗೆದುಕೊಂಡು ಬದುಕಿನ ಮೂಲಭೂತ ಅಂಶವಾದ ಪ್ರೀತಿಯ ತೀವ್ರತೆ, ವೇದನೆಯೂ, ಬಿಚ್ಚಿಡುತ್ತಾರೆ. ' ಆಡಲಾರೆವು ನಾವು ಅರಗಳಿಗೆ ಕೂಡ' ಈ ಸಂಕಲನದ ಉತ್ತಮ ಕವನ ಎನ್ನಬಹುದು. ಮೇಲುವರ್ಗದ ವಿರುದ್ಧ ಬಂಡಾಯದ ದನಿಯನ್ನು ಪ್ರತಿನಿಧಿಸುತ್ತಲೇ ಇಲ್ಲಿನ ಕೇಂದ್ರವ್ಯಕ್ತಿ ಆ ದಾಸ್ಯದಿಂದ ಬಿಡುಗಡೆ ಪಡೆಯಲು ಸಂವೇದನಾಶೀಲತೆಯಿಂದ ಮನಃ ಪೂರ್ವಕವಾಗಿ ಯತ್ನಿಸುತ್ತಿದ್ದಾನೆ.

ಹಕ್ಕಿ ಹೆಕ್ಕೆ ಹಾಕುತ್ತವೆ ಎಂದು
ನಿಮ್ಮ ಮೇಲಲ್ಲ ನಿಮ್ಮ ಕಾರಿನ ಮೇಲೆ
ಪ್ರೀತಿ ಹೆಚ್ಚಾಗಿ
ತಗಡು ಹೊದಿಸಿದರಲ್ಲ ಮರವ ಕಡಿದು
ನಮ್ಮ ಮಕ್ಕಳ ಕೈ ಕಾಲು ಕತ್ತರಿಸಿ
ಒಟ್ಟಲಾರೆವು ಸುಡಲು
ನಿಮಗಾಗಿ, ನಿಮ್ಮಚೆಳಿಗಾಗಿ ಬೆಂಕಿ ಹಚ್ಚು ಆಟ
ಒಂದು ಹನಿ ಕಣ್ಣೀರು ಸ್ವಾಮಿ
ನಮ್ಮಏಳೇಳು ಜನ್ಮಗಳ ಕಲಕುವುದು
ನಿಮ್ಮ ರಂಜನೆಗಾಗಿ ಹಲ್ಲು ಗಿಂಜುತ್ತ
ಗುಲಾಮಿ ಆಟವ ಆಡಲಾರೆವು ನಾವು ಅರೆಗಳಿಗೆ ಕೂಡ

ಎಂದು ಅವರ ಅಸ್ತಿತ್ವವನ್ನು ಪ್ರಶ್ನಿಸುತ್ತಲೇ ತನ್ನ ಸ್ವಂತ ಬದುಕನ್ನು ಹೊಸ ದಿಕ್ಕಿಗೆ ಕೊಂಡೊಯ್ಯುವ ಮತ್ತು ಹಿಂದಿನ ಒಂದು ಕವಿತೆಯಲ್ಲಿ ಬರುವಂತೆ ತನ್ನ ವ್ಯಕ್ತಿತ್ವಕ್ಕೆ ಹೊಸಕತೆಯನ್ನು ಬರೆಯಲು ಹೊರಟಿದ್ದಾನೆ.

ನದಿಕಡಲುಗಳ ಚಿತ್ರವನ್ನು ನೀಡುತ್ತಲೇ ಜೀವನದ ಮಾಯಾಪಾತಾಳವನ್ನು ಚಿತ್ರಿಸುತ್ತಾರೆ. ನದಿ ಕಡಲ ಹಾಡು -1 ರಲ್ಲಿ ಬದುಕನ್ನು ಅರಸಿ ಕೊಳ್ಳುವ ಮತ್ತು ಅದರ ಪಾತಾಳದಲ್ಲಿ ಎದುರು ಬರುವ ನೋವು- ನಲಿವುಗಳನ್ನು ಸ್ವಾಗತಿಸುವ ಪ್ರಯತ್ನ ನಡೆದಿದೆ.

'ನಡೆದ ಹಾದಿಯ ಮತ್ತೆ ನೆನೆದು ದಣಿಯುವುದಿಲ್ಲ
ಹೊಸ ದಾಹ ಹೊಸಹುಟ್ಟು ಉಪ್ಪಿನೊಳಗೆ
....
ನದಿಯೇ ನದಿ ಬಾ
ಅಡಿಯಿಂದ ಮುಡಿವರೆಗೆ
ಸೆಳೆದುಕೊಳ್ಳುವ ನನ್ನ ಒಡಲ ಆಳಕ್ಕೆ'

ಎಂಬ ದಿಟ್ಟ ಮನೋಭಾವನೆಯನ್ನು ಹೊಂದಿದ್ದಾರೆ. ಆದರೆ ನದಿಕಡಲ ಹಾಡು-2 ರಲ್ಲಿ ಬದುಕಿನೊಂದಿಗೆ ವಿಷಾದವನ್ನು ವ್ಯಕ್ತಪಡಿಸುತ್ತಾರೆ.

'ಸಾಕು ಸಾಕಯ್ಯ ಕಡಲೇ
ಸಾಕು ನಿನ್ನ ಸಹವಾಸ
ಸಾಲಾವಳಿ ತೀರಿತು ಸಾಯಿಸಯ್ಯ ಪುಣ್ಯಕ್ಕೆ

ಎಂದು ಈ ಎರಡು ಕವಿತೆಗಳು ಮನುಷ್ಯನ ಜೀವನದಲ್ಲಿ ಆಶಾವಾದ ಮತ್ತು ವಿಷಾದ ಎರಡನ್ನು ಚಿತ್ರಿಸುತ್ತಲೇ, ಗೊಂದಲದಲ್ಲೇ ಭರವಸೆ ಹುಟ್ಟಿಸುತ್ತಾರೆ.

'ಕಂಡರೆ ತಿಳಿಸಿ' ಕವಿತೆಯೂ ಪ್ರೀತಿಯ ಸಾರ್ಥಕತೆಯನ್ನು ಮತ್ತು ಅದರ ಉತ್ಕಟ ಭಾವನೆಗಳನ್ನು ಅನಾವರಣಗೊಳಿಸುವುದರಲ್ಲಿ ಮತ್ತು 'ಲೋಕಮಾಯಿ ಪದ' ಕವಿತೆಯೂ ಜಾನಪದ ಶೈಲಿಯಲ್ಲಿ, ಧಾಟಿಯಲ್ಲಿ ಗೆದ್ದರು. ನಿರ್ದಿಷ್ಟ ವಿವಕ್ಷೆ ಇಟ್ಟುಕೊಳ್ಳುವಲ್ಲಿ ಸೋತಿವೆ ಎನ್ನಬಹುದು

ಒಟ್ಟಿನಲ್ಲಿ ರಾಮಲಿಂಗಪ್ಪ ಈ ಸಂಕಲನದ ಮಟ್ಟಿಗೆ ಅವರು ಎತ್ತಿ ಕೊಂಡಿರುವ ಪ್ರಶ್ನೆ ಉತ್ತಮವಾಗಿದ್ದರೂ, ಅದರ ವಿಫಲತೆಗಳನ್ನು ಗೆಲ್ಲುವ ಪ್ರಯತ್ನವನ್ನು ಇನ್ನು ಮುಂದೆ ಮಾಡಲೇಬೇಕು.

- ಸುರೇಶ್ ನಾಗಲಮಡಿಕೆ

ಮಂದ್ರ

ಲೇ : ಎಸ್.ಎಲ್.ಭೈರಪ್ಪ

ಪುಟ : 596

ಬೆಲೆ : ರೂ. 275.00

ಪ್ರಕಾಶಕರು : ಸಾಹಿತ್ಯ ಭಂಡಾರ, ಬೆಂಗಳೂರು



ಮನುಷ್ಯನ ದೌರ್ಬಲ್ಯಗಳತ್ತ ಗಮನ ಹರಿಸುವುದು ಆಧುನಿಕ ಸಾಹಿತ್ಯದ ಒಂದು ವಿಶೇಷತೆ. ಎಸ್. ಎಲ್. ಭೈರಪ್ಪನವರು ತಮ್ಮ ನೂತನ ಕಾದಂಬರಿಯಾದ 'ಮಂದ್ರ'ದಲ್ಲಿ ಸಂಗೀತ ಲೋಕದ ಒಳಸಂಗತಿಗಳ ಬಗ್ಗೆ ಗಮನ ವಹಿಸಿದ್ದಾರೆ. 596 ಪುಟಗಳಿರುವ ಈ ಬೃಹತ್ ಕಾದಂಬರಿ ಕನ್ನಡ ಕಾದಂಬರಿ ಸಾಹಿತ್ಯಕ್ಕೆ ಮಹತ್ವದ ಸೇರ್ಪಡೆ. ಹಿಂದೆ ಅ.ನ.ಕೃ. ಮೊದಲಾದ ಹಿರಿಯ ಸಾಹಿತಿಗಳು ಸಂಗೀತ, ಚಿತ್ರ ಕಲಾವಿದರ ಬಗ್ಗೆ ಕಾದಂಬರಿ ರಚಿಸಿದ್ದುಂಟು. ಶಿವರಾಮ ಕಾರಂತರ 'ಒಂಟಿಧ್ವನಿ' ಮುಂತಾದ ಕಾದಂಬರಿಗಳು ಪ್ರಧಾನವಾಗಿ ಕಲಾಲೋಕದ ಸಂಗತಿಗಳಿಗೆ ಸಂಬಂಧಿಸಿದ್ದುದಾಗಿದೆ. ಅಷ್ಟೇಕೆ ಸ್ವತಃ ಭೈರಪ್ಪನವರೇ 'ಜಲಪಾತ' ಕಾದಂಬರಿಯಲ್ಲಿ ಸಂಗೀತ ಮತ್ತು ಚಿತ್ರಕಲೆಗಳ ವಿಷಯವಾಗಿ ಬರೆದದ್ದು ಉಂಟು. ಆದರೆ ಈಗ ಹೊರ ಬಂದಿರುವ ಅವರ 'ಮಂದ್ರ' ಕಾದಂಬರಿ ಗಾತ್ರದಲ್ಲಿ, ಸತ್ವದಲ್ಲಿ ಹಿಂದಿನ ಈ ಕಲಾತತ್ವ ಸಂಬಂಧಿಯಾದ ಕಾದಂಬರಿಗಳಿಗಿಂತ ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ.

'ಮಂದ್ರ' ಕಾದಂಬರಿಯಲ್ಲಿ ಅನೇಕ ಪಾತ್ರಗಳು ಬಂದು ಹೋಗುತ್ತವೆ. ಆದರೆ ಇದರಲ್ಲಿ ಮುಖ್ಯ ಪಾತ್ರಗಳೆಂದರೆ: ಸಂಗೀತಗಾರ ಮೋಹನಲಾಲ್, ಸಂಗೀತಸಾಧಕಿ ಮಧು, ನರ್ತಕಿ ಮನೋಹರಿ, ಮಧುವಿನ ಪತಿ ವಿಕ್ರಂ, ಮೋಹನಲಾಲನ ಪತ್ನಿ ರಾಮಕುಮಾರಿ. ಈ ಕಾದಂಬರಿಯ ಕ್ರಿಯಾಕ್ಷೇತ್ರ ಪ್ರಧಾನವಾಗಿ ಉತ್ತರ ಭಾರತದ್ದು. ಭೈರಪ್ಪನವರು ಹಿಂದೂಸ್ತಾನಿ ಸಂಗೀತ ಪದ್ಧತಿಯ ಗಾಯಕನನ್ನಾಗಿ ಮೋಹನಲಾಲನನ್ನು ಇರಿಸಿಕೊಂಡಿರುವುದೇ ಈ ನಿರ್ಧಾರಕ್ಕೆ ಮುಖ್ಯ ಕಾರಣ.

ಕಲೆಯನ್ನು ನೋಡಿದಾಗ ಸ್ವರ್ಗಪ್ರವೇಶ ಮಾಡಿದ ಹಾಗಾಗುತ್ತದೆ. ಕಲಾವಿದನ ಒಳಹೊಕ್ಕಾಗ ಬೇರೆಯೇ ಇರುತ್ತೆ. ಯಾಕೆ ಈ ಕಾಂಟ್ರಡಿಕ್ಷನ್?! ಇದು 'ಮಂದ್ರ'ದ ಒಂದು ಪಾತ್ರ ಕೇಳುವ ಪ್ರಶ್ನೆ. ಈ ಸಮಸ್ಯೆಯನ್ನು ಬಿಡಿಸುತ್ತಲೇ ಕಾದಂಬರಿ ಬೆಳೆಯುತ್ತದೆ. ಮಂದ್ರದ ಗಾತ್ರ 22 ಅಧ್ಯಾಯಗಳಷ್ಟು ವಿಸ್ತಾರವಾಗಿದೆ. ಕಾದಂಬರಿಗೆ ಯುಗಧರ್ಮವನ್ನಾಗಲಿ, ಕಾಲವನ್ನಾಗಲಿ ಪ್ರತಿಬಿಂಬಿಸುವ ಹಠವಿಲ್ಲ. ಸಮಕಾಲೀನಕ್ಕಿಂತಲೂ ಕಾಮದ ಬೇರಿನ ಹುಡುಕಾಟ ಮತ್ತು ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಸಾಗುವ ವ್ಯಾವಹಾರಿಕತೆಯ ಮಟ್ಟದ ಕಾಮ. ಇದೇ 'ಮಂದ್ರ'ದ ಕೇಂದ್ರವಸ್ತು.

ಕಲಾವಿದರ ಒಳತುಮುಲಗಳು, ಅವರ ಉತ್ಕಟ ಸಂಬಂಧಗಳು ಪರಸ್ಪರರ ಅಹಮಿಕೆಗೆ ಸಿಕ್ಕಿ ಚೂರಾಗುವುದು. ಯಾವುದೇ ಸಂಬಂಧವನ್ನು ಪ್ರೇಮದ ಉನ್ನತ ಸ್ತರಕ್ಕೆ ಏರಿಸುವ ಪಾರದರ್ಶಕತೆ, ನಿಷ್ಕಪಟತೆ ಸಿದ್ಧಿಸದೇ ಹೋಗುವುದು ಮಹಾನ್ ಸಂಗೀತಗಾರ ಮೋಹನಲಾಲ ಮತ್ತು ಅವನ ಒಡನಾಡಿಯಾಗಿದ್ದ ನೃತ್ಯ ಕಾಲವಿದೆ ಮನೋಹರಿ ಇವರ ಪಾತ್ರವಿನ್ಯಾಸದಲ್ಲಿ ಕೆನೆಗಟ್ಟಿದೆ. ಜೊತೆಗೆ ಇವರಿಬ್ಬರ ನಡುವಿನ ಕಾಮ, ಪ್ರೇಮವಾಗದೆ ಹೋದಾಗಿನ ಸಂಘರ್ಷಕ್ಕೆ ಎರಡು ಕಲಾಪ್ರಕಾರಗಳಲ್ಲಿ ಯಾವುದು ಯಾವುದಕ್ಕೆ ಅಧೀನ ಎಂದು ಇವರಿಬ್ಬರನ್ನು ಕಾಡುವ ಪ್ರಶ್ನೆಗೆ ಮತ್ತಷ್ಟು ಇಂಧನ ಒದಗಿಸುತ್ತದೆ.

ಮೋಹನಲಾಲನ ಪಾತ್ರದ ಜೀವತಂತುವೇ ಅವನ ಸಂಗೀತ ಸಾಧನೆ ಮತ್ತು ಕಾಮವಾಂಛೆಯ ಪರಕಾಷ್ಠೆ ಇದಕ್ಕಾಗಿ ಅವನು ಪಡುವ ಪಾಡು. ಕಲ್ಪಿಸಿಕೊಳ್ಳುತ್ತಾ ಹೋಗುವ ಸಂಬಂಧಗಳು ಅವನನ್ನು ಊರಿನಿಂದ ಊರಿಗೆ, ಕೊನೆಗೆ ಅಮೆರಿಕೆಯ ತನಕ ಕೊಂಡೊಯ್ಯುತ್ತದೆ. ಯಾವ ಸ್ತ್ರೀಯಲ್ಲಿಯೂ ಸ್ತ್ರೀಭಾವದ ಪ್ರಧಾನ ಸೆಲೆಯಾದ ಮಾತೃತ್ವದ ಸುಳಿವೂ ಕೂಡ ಅವನಿಗೆ ಕೊನೆತನಕ ಕಾಣಸುವುದೇ ಇಲ್ಲ. ರಾಗದ ಬೆನ್ನುಹತ್ತಿ ಸ್ವರ ಸಾಧನೆ ಮಾಡಿ ಅದನ್ನು ಸಿದ್ಧಿಸಿಕೊಳ್ಳುವುದು ಸಂಗೀತಗಾರನ ಲಕ್ಷಣ. ಆದರೆ ಮೋಹನಲಾಲ ತನ್ನ ಸಂಗೀತರಾಗಗಳೊಡನೆ ಕಣ್ಣಿಗೆ ಬಿದ್ದ ಸುಂದರ ಸ್ತ್ರೀಯರನ್ನೆಲ್ಲಾ ಕಲ್ಪಿಸಿಕೊಳ್ಳುತ್ತಾನೆ. ಆದ್ದರಿಂದ ಶಿಷ್ಯೆಯರಾದ ಮಧು ಮತ್ತುಲಾರೆನ್ಸ್ ಸ್ಮಿತ್ ಇವರನ್ನು ಕಲ್ಯಾಣಿಯೇ ಮೊದಲಾದ ರಾಗಗಳೊಡನೆ ಸಮೀಕರಿಸಿಕೊಳ್ಳುತ್ತಾನೆ.

ಸಮರ್ಪಣೆಯ ಪ್ರಶ್ನೆ 'ಮಂದ್ರ'ದ ಮತ್ತೊಂದು ಕೇಂದ್ರಬಿಂದು. ನೃತ್ಯಗಾರ್ತಿ ಮನೋಹರಿ ನೃತ್ಯದ ಮರ್ಮ ಅರಿಯಲು ವೃದ್ಧ ಗುರುವನ್ನು ಪತಿಯನ್ನಾಗಿ ಸ್ವೀಕರಿಸುತ್ತಾಳೆ. ಅವನಿಂದ ಸಾರ್ಥಕತೆ ಕಾಣದ ಬಾಳು ತನ್ನದು ಎಂದು ಸಮಜಾಯಿಸಿ ನೀಡಿ ವ್ಯಾಪಾರಿ ಮಿತ್ತಲ್, ಮೋಹನಲಾಲ್, ನೃತ್ಯದ ಕಾರ್ತಿಕರಾಮ, ದೇವರಾಜ ಇವರಲ್ಲಿ ಸಂತೃಪ್ತಿ ಕಾಣಲು ಪ್ರಯತ್ನಿಸುತ್ತಾಳೆ. ಪ್ರತಿ ಸಲವೂ ತನ್ನನ್ನು ರಾಧೆಯೆಂತಲೂ, ತನ್ನ ಸಂಗಾತಿಯನ್ನು ಕೃಷ್ಣನೆಂದೂ ಭ್ರಮಿಸುತ್ತಾಳೆ.

ಆದರೆ ಅವಳಿಗೆ ಬೇಕಿರುವುದು ಪ್ರೇಮವೂ ಅಲ್ಲ, ಶುದ್ಧ ಸಮರ್ಪಣೆಯೂ ಅಲ್ಲ. ಎಲ್ಲವೂ, ಎಲ್ಲರೂ ತನ್ನ ಕಣ್ಣಳತೆಯ ಒಳಗೇ ಇದ್ದು ತನ್ನ ಕಾರುಬಾರು ನಡೆಯಬೇಕೆಂಬ ಕ್ಷುದ್ರತನವೇ ಆಕೆಯ ಸಕಲ ಕ್ರಿಯೆಗಳ ಅಂತರಂಗದ ಪ್ರವಾಹ. ಈ ಪಾತ್ರ ಕೊನೆಗೂ ನಿಶ್ಚಿತವಾದ ಯಾವುದೇ ದೃಢವಾದ ನೆಲೆಯನ್ನೂ ಸಂಪಾದಿಸದೇ ಅಹಂಕಾರದ ಗೂಡಿನಲ್ಲೇ ಉಳಿಯುತ್ತದೆ. ಮೋಹನ ಲಾಲನ 'ಧರ್ಮಪತ್ನಿ' ರಾಮಕುಮಾರಿಯದು ಸರಳವಾದ ಆದರೆ ಛಲದ ಬಾಳು. ಪತಿಯಿಂದ ದೂರವಿರಿಸಲ್ಪಟ್ಟ ಆಕೆ ಎಲ್ಲೂ ತನ್ನನ್ನು ಆಮಿಷಕ್ಕೆ ಒಪ್ಪಿಕೊಳ್ಳದೆ ಮಕ್ಕಳನ್ನು ನೆಲೆ ನಿಲ್ಲಿಸಲು ಹೆಣ ಗುತ್ತಾಳೆ. ಕೊನೆಗೆ ಮೋಹನಲಾಲನ ಹಣ, ಕೀರ್ತಿಗೆ ಇಬ್ಬರು ಮಕ್ಕಳು ಮೋಹವಶರಾದ ಮೇಲೂ ಬದುಕಿನ ಬಗ್ಗೆ ಆಸ್ಥೆ ಕಳೆದುಕೊಳ್ಳುವುದಿಲ್ಲ. ಎಲ್ಲರೂ ತನ್ನ ಕೈಬಿಟ್ಟ ಮೇಲೆ ಮೋಹನ ಲಾಲ ಆಕೆಯನ್ನು ಧರ್ಮಪತ್ನಿ ಎಂದು ಸ್ವೀಕರಿಸುವ ಆಶ್ವಾಸನೆ ನೀಡಿದಾಗ ಕೆಂಡಾಮಂಡಲ ವಾಗಿ ಅವನನ್ನು ಹೊರಕ್ಕಟ್ಟುವ ರಾಮಕುಮಾರಿಯ ಪಾತ್ರ, ಭೈರಪ್ಪನವರ ಕಾದಂಬರಿಗಳಲ್ಲಿ ಬರುವ ಛಲದ ಬದುಕಿಗೆ ಹಾತೊರೆಯುವ ಹೆಣ್ಣು ಪಾತ್ರಗಳ ಸಾಲಿನಲ್ಲಿ ನಿಲ್ಲುತ್ತದೆ.

'ಮಂದ್ರ' ಕಾದಂಬರಿ ಆರಂಭವಾಗುವುದು ಮೋಹನಲಾಲ ಮತ್ತು ಅವನ ಶಿಷ್ಯೆ ಅವಿವಾ ಹಿತೆ ಮಧು ಇವರ ಸಂಬಂಧದಿಂದ. ಕಲೆಯನ್ನು ಧಾರೆ ಎರೆಯಲು ಅವಳ ಸಮರ್ಪಣೆ ಬಯ ಸುವ ಗುರುವಿಗೆ ಆಕೆ ತನ್ನನ್ನು ಒಪ್ಪಿಸಿಕೊಳ್ಳುತ್ತಾಳೆ. ಮುಂದೆ ಅವಳ ವಿವಾಹದ ನಂತರವೂ ಗುರುವು ಅವಳನ್ನು ಬಯಸಿದಾಗ ಆಕೆ ಅದನ್ನು ಪ್ರತಿಭಟಿಸುತ್ತಾಳೆ. ಆದರೆ ಅವಳ ಪತಿ ವಿಕ್ರಂ ಮುಗ್ಧ. ಮಹಾನ್ ಸಂಗೀತ ಪ್ರೇಮಿ. ಅವನು ಇವರಿಬ್ಬರ ಸಂಬಂಧವನ್ನು ಗುರು-ಶಿಷ್ಯರ ಪವಿತ್ರ ಸಂಬಂಧ ಎಂದೇ ತಿಳಿದಿರುತ್ತಾನೆ. ಸಂಗೀತದಲ್ಲಿ ಉತ್ಕಟ ಅಭೀಪ್ಸೆ ಇರುವ ಮಧು ಗುರುವಿನ ಬಲವಂತಕ್ಕೆ ಒಪ್ಪುತ್ತಾಳೆ. ಮುಂದೆ ಮೋಹನಲಾಲ ಭೂಪಾಲಿ ಮತ್ತು ಅನೇಕರೊ ಡನೆ ಸಂಬಂಧ ಇರಿಸಿಕೊಂಡ ನಂತರ ಕೂಡ ಅವಳಿಗೆ ಅವನಿಂದ ಸಂಗೀತ ಸಾಧನೆ ಪೂರ್ಣ ಗೊಳಿಸಿಕೊಳ್ಳಬೇಕು ಎಂಬ ಆಕಾಂಕ್ಷೆ ಬತ್ತಿ ಹೋಗುವುದಿಲ್ಲ. ಪತಿಗೆ ಮೋಸ ಮಾಡಲು ಇಷ್ಟವಿ ಲ್ಲದ ಆಕೆ ಒಳಗೇ ಸಂಕಟ ಪಡುತ್ತಾಳೆ. ಸಂಗೀತವೇ ತನ್ನ ಜೀವ ಎಂದು ನಿಶ್ಚಿತವಾದ ನಂತರ ಅವಳು ಗಂಡನಿಗೆ ಪತ್ರ ಬರೆದಿಟ್ಟು ಭಾರತಕ್ಕೆ ಬಂದು ಮೋಹನಲಾಲನಿಗೆ ಅರ್ಪಿಸಿಕೊಳ್ಳು ತ್ತಾಳೆ. ಆದರೆ ಮೋಹನಲಾಲನಿಗೆ ಯಾವುದರಲ್ಲೂ ಸಂಪೂರ್ಣ ನಂಬಿಕೆ ಇಲ್ಲ. ಅವನು ಮಧು ವಿನ ಸಮರ್ಪಣೆ, ಕಲಿಕೆಯ ಶ್ರದ್ಧೆಯನ್ನಾಗಲೀ, ಅದಕ್ಕಾಗಿ ಅವಳು ಈಗಾಗಲೇ ತೆತ್ತಿರುವ ಬೆಲೆ ಯನ್ನಾಗಲಿ ಅರ್ಥ ಮಾಡಿಕೊಳ್ಳುವುದಿಲ್ಲ. ಮೋಹನಲಾಲನಿಂದ ತಿರಸ್ಕೃತಳಾದ ಮಧು ಹತಾ ಶೆಗೊಳ್ಳದೆ ಆರ್ಥಿಕವಾಗಿ ನೆಲೆ ಕಂಡುಕೊಳ್ಳುತ್ತಾಳೆ. ನಂತರ ಸ್ವಯಂಸಾಧನೆಯ ತಂತ್ರಗಳನ್ನು ರೂಢಿಸಿಕೊಳ್ಳುತ್ತಾಳೆ. ಮೋಹನಲಾಲನ ಸ್ಫೂರ್ತಿಯ ಸೆಲೆ ಬತ್ತಿ ಹೋದ ನಂತರ ಆಕೆಯ ಗಾಯನಶಕ್ತಿ ಪೂರ್ಣವಾಗಿ ಅಭಿವ್ಯಕ್ತಿಗೊಳ್ಳುತ್ತದೆ. ಕಲಾಪ್ರಪಂಚದ ಸಾರ್ವಭೌಮನಂತೆ ಮೆರೆದ ಮೋಹನಲಾಲನ ಸಂಗೀತ ಜೀವನ ಮುಕ್ತಾಯಕ್ಕೆ ಬರುತ್ತದೆ.

'ಮಂದ್ರ' ಭೈರಪ್ಪನವರ ಆಳವಾದ, ಜೀವನಾನುಭವ ಮತ್ತು ಸೂಕ್ಷ್ಮವಾದ ವೈಚಾರಿಕತೆಗೆ ಕೈಗನ್ನಡಿಯಾಗಬಲ್ಲ ಕಾದಂಬರಿ. ಇದರಲ್ಲಿ ಹಲವು ಅಂಶಗಳು ಪರಸ್ಪರ ಸಂಘರ್ಷದ ಹಂತ ತಲುಪುತ್ತವೆ. ವಿವಾಹಪೂರ್ವ ಮತ್ತು ವಿವಾಹೇತರ ಸಂಬಂಧಗಳು ಕಾಮ ಮತ್ತು ಪ್ರೇಮದ ಪ್ರಶ್ನೆಗಳು ಕಾದಂಬರಿಯ ಹಲವು ಪಾತ್ರಗಳ ಸುತ್ತ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಸಾಧನೆ ಮತ್ತು ತಾದಾತ್ಮ್ಯತೆ, ಸಮರ್ಪಣೆಯ ಚಿಂತನೆಗಳು ಕಲಾವಿದ ಮತ್ತು ಕಲೆಯ ಸಂಬಂಧಗಳ

ಬಗ್ಗೆ ಹೊಸ ಪ್ರಶ್ನೆಗಳನ್ನು ಮೂಡಿಸುತ್ತವೆ.

ಕಾಮದ ಸಾಂಗತ್ಯ ದೊರಕದೆ ಸಂಗೀತದ ಸೆಲೆಯನ್ನೇ ಬತ್ತಿಸಿಕೊಳ್ಳುವ ಮೋಹನಲಾಲನ ಬದುಕಿನ ಪತನದ ಹಂತಹಂತವಾದ ಚಿತ್ರಣವೇ 'ಮಂದ್ರ'ದ ಪ್ರಧಾನ ದ್ರವ್ಯ. ಕಾಮದ ಬಲವಂತವಾದ ಸನ್ನಿವೇಶಕ್ಕೆ ಸಿಕ್ಕಿಕೊಂಡರೂ ಅದರಿಂದ ಹೊರಗೆ ಬಂದು ಸಂಗೀತವನ್ನೇ ನೆಮ್ಮಿಕೊಳ್ಳುವ ಮಧುವಿನ ಪಾತ್ರ ಮನುಷ್ಯ ಚೇತನ ಊರ್ಧ್ವಮುಖಿ ಆಗುವ ರಕ್ತ ಪಡೆದಿದೆ ಎಂಬ ಸಂಕೇತ ಮೂಡಿಸುತ್ತದೆ. ಕಲಾಪ್ರೇಮಿ ವಿಕ್ರಂ ಸಂಗೀತ ಪ್ರಪಂಚದ ಒಳಸುಳಿಗಳಲ್ಲಿ ವಿನಾಕಾರಣ ಸಿಲುಕಿ ವಿಶ್ವಾಸಭಂಗವನ್ನು ಉಂಡಾಗ ಕಳವಳಗೊಳ್ಳುತ್ತಾನೆ. ಸಂಗೀತದಿಂದಲೇ ವಿಮುಖನಾಗುವಷ್ಟು ದಿಗ್ಭ್ರಮೆಗೊಳ್ಳುವ ಆತನ ಪಾತ್ರ, ಕಲೆ ಕುಟುಂಬ ಜೀವನದ ಮೇಲೆ ಬೀರುವ ದುಷ್ಪರಿಣಾಮವನ್ನು ಕುರಿತು ಎದೆ ನಡುಗಿಸುವಂತೆ ಮಾಡುತ್ತದೆ.

'ಮಂದ್ರ'ದ ಪ್ರಬಂಧಧ್ವನಿ ಏನು? ಎಂಬ ಪ್ರಶ್ನೆ ಇಡೀ ಕಾದಂಬರಿ ಓದಿ ಮುಗಿಸಿದಾಗ ಮೂಡುತ್ತದೆ. ಬದುಕು ಕಲೆಗೆ ಮೂಲದ್ರವ್ಯ. ಕಲಾವಿದ ಅವನ ಶಕ್ತಿ ಮತ್ತು ಮಾಧ್ಯಮದ ಸ್ವಭಾವಕ್ಕೆ ತಕ್ಕಂತೆ ಅದರ ಮೇಲೆ ಕಲಾಸಾಧನವನ್ನು ನಿರ್ಮಿಸತೊಡಗುತ್ತಾನೆ. ಬದುಕಿನ ಮೂಲಸತುವಾದ ಕಾಮಕ್ಕಿಂತಲೂ ಬದುಕನ್ನು ಪ್ರೀತಿಸುವ, ಅದರ ಬಗ್ಗೆ ವಾಂಛೆ ಇರುವ ವ್ಯಕ್ತಿ ಹೆಚ್ಚು ಗಟ್ಟಿಯಾಗುತ್ತಾನೆ. 'ಮಂದ್ರ'ದಲ್ಲಿ ಬರುವ ಮಧು, ರಾಮಕುಮಾರಿ, ಗೋರೆ, ಮಿತ್ತಲ್ ಮೊದಲಾದವರು ಕಾಮದ ಪ್ರವಾಹದ ಎದುರು ಈಜಲು ಪ್ರಯತ್ನಿಸುತ್ತಾರೆ. ಅದು ಬದುಕಿನ ಕಟ್ಟಡವನ್ನೇ ಕೊರೆದು ಹಾಕದಂತೆ ಮಾಡಿಕೊಳ್ಳುವುದರಲ್ಲಿ ಗೆಲುವನ್ನು ಸಾಧಿಸುತ್ತಾರೆ. ಆದ್ದರಿಂದಲೇ ಮಧು ತನ್ನ ವಿವಾಹ ಸಂಬಂಧ ಮುರಿದು ಬಿದ್ದಾಗಲೂ ಬದುಕಿನ ಬಗ್ಗೆ ನಿಷ್ಠೆ ಇರುವುದರಿಂದಾಗಿ ಸಂಗೀತದಲ್ಲಿ ಸಿದ್ಧಿಯನ್ನು ಕಾಣುತ್ತಾಳೆ ಎಂಬ ಸೂಚನೆ ಕಾದಂಬರಿಯಲ್ಲಿ ಮೂಡಿದೆ.

ಕಲೆಯ ಬಾಳು ಅದರ ವ್ಯಾಪಕತೆ ಎಷ್ಟೇ ವಿಶಾಲ ಎಂದು ಹೇಳಿದರೂ ಬದುಕಿನ ವ್ಯಾಪ್ತಿಯ ಮುಂದೆ ಕಲೆಯ ಬಾಳು ಕಿರಿದು. ಬದುಕಿನ ಬೇರಿನಿಂದಲೇ ಬೇರ್ಪಟ್ಟ ಕಲೆ, ಕಲಾವಿದ ಎಷ್ಟು ಕಾಲ ಬಾಳಿಯಾನು? ಈ ಸತ್ಯದರ್ಶನ ಮೋಹನಲಾಲನಿಗಾಗಲೀ, ಮನೋಹರಿಗಾಗಲಿ ಆಗುವುದೇ ಇಲ್ಲ. ಸಂಬಂಧಗಳ ಸೆಲೆಯೇ ಬತ್ತಿ ಹೋದುದರಿಂದ ಮೋಹನಲಾಲನಿಗೆ ಒಳಗಿನ ಸ್ಫೂರ್ತಿ ಕೂಡ ಕೈಕೊಡುತ್ತದೆ ಎಂಬುದು ಇಡೀ ಕಾದಂಬರಿಯಲ್ಲಿ ಎಚ್ಚರದಿಂದ ಗಮನಿಸಬೇಕಾದ ಮುಖ್ಯ ಅಂಶ.

ಭೈರಪ್ಪನವರ ಈ ಕಾದಂಬರಿ ಹೊಸ ರೀತಿಯದು. ಅವರಲ್ಲಿ ಸಮಕಾಲೀನ ಸಂವೇದನೆಗಳಿಗೆ ಎಡೆ ದೊರೆತಿದೆ. ಕಾಮದ ಪ್ರಶ್ನೆ ಬಂದಾಗ ಹೆಣ್ಣು-ಗಂಡು ಎಂಬ ಭೇದವು ನುಸುಳದಂತೆ ಬರವಣಿಗೆ ಮಾಡುವುದು ಸುಲಭದ ಮಾತಲ್ಲ. ಈ ಸಮಸ್ಯೆಯನ್ನು ರಾಗ, ತಾಳ, ಸ್ವರ ಮತ್ತು ನೃತ್ಯದ ಇನ್ನೂ ಅನೇಕ ಪರಿಭಾಷೆಗಳ ನೆರವಿನಿಂದ ಸರಿದೂಗಿಸಿದ್ದಾರೆ. ಸಂಗೀತ ಮುಖ್ಯವಾಗಿ ಗುರು ಮುಖೇನ ಕಲಿಯಬೇಕಾದ ಗಂಧರ್ವ ವಿದ್ಯೆ. ಅಲ್ಲಿ ಯಾರೊಬ್ಬರು ಹಾದಿ ತಪ್ಪಿದರೂ ಪತನ ನಿಶ್ಚಿತ. ಕಲಾವಿದರು ತಮ್ಮ ದೌರ್ಬಲ್ಯಗಳನ್ನು ಅವಲೋಕನಕ್ಕೆ ಒಡ್ಡಿಕೊಂಡರೆ ಮಧುವಿನಂತೆ ಮೇಲೇಳಬಲ್ಲರು. ತಮ್ಮ ಪ್ರತಿಭೆಗೆ ಸ್ಫೂರ್ತಿಯ ಸಾಹಚರ್ಯ ನೀಡಿ ಕಲೆಯನ್ನು ತಮ್ಮ ವ್ಯಕ್ತಿತ್ವದ ಘನತೆಯನ್ನು ಉಳಿಸಬಲ್ಲರು. ಇಲ್ಲವಾದರೆ ಮೋಹನ ಲಾಲನಂತೆ ಬದುಕಿನ ನೆಲೆಯನ್ನೇ ಕಳೆದುಕೊಂಡು, ತತ್ಪರಿಣಾಮವಾಗಿ ಸಂಗೀತದ ಹಾದಿಯನ್ನೂ ತಾವೇ ಮುಚ್ಚಿಕೊಳ್ಳುತ್ತಾರೆ. ಹಾಗಾಗದಿರಲಿ. ಸಂಗೀತದ ಶ್ರೇಷ್ಠ ಪರಂಪರೆ ತನ್ನ ಶುದ್ಧತೆ,

ಪ್ರಾಮಾಣಿಕತೆಗಳಿಂದ ಹೊಸ ಹೊಸ ಗುರು-ಶಿಷ್ಯ ಪೀಳಿಗೆಯನ್ನು ಸೃಷ್ಟಿಸುವ ಶಕ್ತಿ ಪಡೆದೇ ಇರಲಿ.

'ಹೆಂಗಸು ತನ್ನ ಮರ್ಯಾದೆ ಉಳಿಸಿಕೊಂಡೂ ಕಲೆಯನ್ನು ಸಾಧಿಸೋದು ಸಾಧ್ಯವಿಲ್ಲವೆ?' ಎಂಬ ಪ್ರಶ್ನೆ ಕಲಾವಿದರ ಕಾಂಟ್ರಡಿಕ್ಷನ್ ಪ್ರಶ್ನೆಯ ವಲಯಕ್ಕಿಂತಲೂ ಆಳವಾದದ್ದು. ಇದು 'ಮಂದ್ರ'ದಿಂದ ದೊರಕುವ ಮುಖ್ಯ ಕಾಣ್ಕೆ.

- ಹರೀಶ್ ಜಿ.ಬಿ.

ಕನಸು - ವಾಸ್ತವಗಳ ಜುಗಲ್‌ಬಂದಿ - ಮುಷ್ಠಿಯಲ್ಲಿ ಮಿಲೆನಿಯಂ

ಹೊಸ ಶತಮಾನದ ಹೊಸ್ತಿಲಲ್ಲಿ ನಿಂತು ಹಿಂತಿರುಗಿ ನೋಡುವಾಗ ಚದುರಿ ಹೋಗಿರುವ ಜಗತ್ತಿನ ವಿದ್ಯಮಾನಗಳ; ಆಗು ಹೋಗುಗಳ ಒಂದು ವ್ಯವಸ್ಥಿತ ದಾಖಲೆಗಳ ಅವಶ್ಯಕತೆ ಇದೆ. ಈ ಅವಶ್ಯಕತೆಯನ್ನು ಸ್ವಲ್ಪ ಮಟ್ಟಿಗಾದರೂ ತುಂಬಿಕೊಡುವ ಕೆಲಸವನ್ನು ಈ ಸಂಕಲನ ಪೂರೈಸಿದೆ. ಕನಸು - ವಾಸ್ತವಗಳ ನಡುವೆ ಒಂದು ವಿಶಿಷ್ಟ ಕಾಲಘಟ್ಟದಲ್ಲಿ ಈ ಕೃತಿ ರೂಪುಗೊಂಡಿದೆ.

ನೆಲಮನೆ ತಿಂಗಳ ಮಾಲಿಕೆಯತಿ ಪ್ರಕಟವಾಗಿರುವ ಈ ಸಂಕಲನ ಇಪ್ಪತ್ತನೆಯ ಶತಮಾನದ ಅಪರೂಪದ ದಾಖಲೆಗಳೊಂದಿಗೆ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಲೇಖನಗಳ ಭಾಷೆ ಸರಳ, ಸೃಜನಶೀಲ ಮತ್ತು ಸ್ಪಷ್ಟ. ಹಾಗೂ ಅಲ್ಲಿರುವ ಧ್ವನಿ ಕೂಡ ಅಲಿಪ್ತ. ಯಾವುದೇ ವಿಚಾರಗಳನ್ನು ದಾಖಲಿಸುವಾಗಲೂ, ಅಕಾರಯುತವಾಗಿ ವಿವರಿಸುವಾಗಲೂ ಇದೇ ಅಲಿಪ್ತತೆಯನ್ನು ಕಾದುಕೊಂಡು ; ಸಮಸ್ಯೆಗಳ ಎರಡೂ ಮಗ್ಗಲುಗಳ ವಸ್ತವವಾದ ವಿಶ್ಲೇಷಣೆ ಇದೆ. ಉದಾಹರಣೆಗೆ, ಜಾಗತೀಕರಣದ ಸುಖೀಮುಖಿಗಳು - ಜಾಗತೀಕರಣದ ದುಃಖಿಮುಖಿಗಳು. ಪರಿಸರ ಮತ್ತು ವಿಜ್ಞಾನದ ಮಾನವೀಕರಣದ ನೆಲೆಯಲ್ಲೆ ಎಲ್ಲಾ ಸಮಸ್ಯೆಗಳ ವಿಶ್ಲೇಷಣೆ ನಡೆಯುತ್ತದೆ. ಈ ಎಲ್ಲಾ ಸಮಸ್ಯೆಗಳನ್ನು ಹುಟ್ಟುಹಾಕುವ ಅಕಾರಶಾಹಿಗಳ ಇಬ್ಬಗೆ ನೀತಿ ಹಾಗೂ ನಾಗರೀಕತೆ ಸಂಸ್ಕೃತಿ ಅವನತಿಗೆ ಸಾಗುತ್ತಿರುವ ಈ ದಿನಗಳಲ್ಲಿ ಅಕಾರಶಾಹಿಗಳು ಹರಡುತ್ತಿರುವ ತಣ್ಣನೆಯ ವಿಷಪ್ರಾಶನದ ಕರಾಳ ಮುಖಗಳ ಪರಿಚಯ ಮಾಡಿಸುತ್ತಾರೆ. ಆ ತಲ್ಲಣಗಳ ನಡುವೆಯೂ ಆಹ್ಲಾದ, ವಿಶ್ವಾಸ ಹುಟ್ಟಿಸುವ ಸಂಗತಿಗಳು ಘಟಿಸುತ್ತವೆ. ಅಲ್ಲೆಲ್ಲಾ ಲೇಖಕರು ಲವಲವಿಕೆಯಿಂದ ದಾಖಲಿಸುತ್ತಾರೆ.

ಅಂತರ್ಜಾಲದ ಇಂದ್ರಜಾಲ ಮನೆಯೊಳಗೇ ಮಾರುಕಟ್ಟೆ ಮತ್ತು ಭವಿಷ್ಯದ ವಿರುದ್ಧ ಬಂಡಾಯ ಲೇಖನಗಳಲ್ಲಿ ಮಾಹಿತಿ ತಂತ್ರಜ್ಞಾನದ ಸ್ವಾರಸ್ಯಪೂರ್ಣ ಚರ್ಚೆಯಿದೆ. ಅದನ್ನು ಲೇಖಕರ ಮಾತುಗಳಲ್ಲೇ ಗುರುತಿಸಬಹುದು. ಈ ಇಂಟರ್‌ನೆಟ್ ಅಥವಾ ಅಂತರ್ಜಾಲ ಅದೆಷ್ಟು ತ್ವರಿತವಾಗಿ ವಿಕಾಸವಾಗುತ್ತಿದೆ ಎಂದರೆ ....., ಅದು ಕ್ಷಣ ಕ್ಷಣಕ್ಕೂ ಸುತ್ತೆಲ್ಲಾ ವ್ಯಾಪಿಸುತ್ತಾ ತನ್ನ ಐವತ್ತು ವರ್ಷಗಳ ಭವಿಷ್ಯವನ್ನು ಹತ್ತು ವರ್ಷಗಳಿಗೆ, ಹತ್ತು ವರ್ಷಗಳ ಭವಿಷ್ಯವನ್ನು ಒಂದೇ ವರ್ಷಕ್ಕೆ ಕುಗ್ಗಿಸಿಕೊಳ್ಳುತ್ತಾ ಬೆಳೆಯುತ್ತಿದೆ. ಅದಕ್ಕೆ ವರ್ತಮಾನಕಾಲ ಎಂಬುದೇ ಇಲ್ಲ, ಭೂತಕಾಲ? ಅದೂ ಇಲ್ಲ. ನಿಯಂತ್ರಣವೇ ಅಸಾಧ್ಯವೆಂಬಷ್ಟು ತ್ವರಿತವಾಗಿ ವಿಶ್ವರೂಪಿಯಾಗಿ ವಿಸ್ತರಿಸುತ್ತಿದೆ ಈ ಲಂಗು ಲಗಾಮಿಲ್ಲದ ಕುದುರೆಯ ನಾಗಾಲೋಟ ಎಲ್ಲಿಗೆ ಮುಟ್ಟುತ್ತದೆಂಬುದನ್ನು ನಾವು ಊಹಿಸಬಹುದು ಅಥವಾ ಇವೆಲ್ಲವೂ ಮನುಷ್ಯನ ನಿಯಂತ್ರಣಕ್ಕೆ

ಸಿಗಲಾರದ ವಿದ್ಯಮಾನಗಳಾದ್ದರಿಂದ ಇದಮಿಥಂ ಎಂದು ಏನನ್ನೂ ಹೇಳಲಾಗುವುದಿಲ್ಲ.

ಮಾಹಿತಿ ತಂತ್ರಜ್ಞಾನದ ರಭಸವನ್ನ ಒಂದು ಸ್ವಾರಸ್ಯಪೂರ್ಣ, ಸತ್ಯಸಂಗತಿಯ ಆಧಾರದ ಮೇಲೆ ಲೇಖಕರು ಚರ್ಚಿಸಿದ್ದಾರೆ. ಮಾಹಿತಿ ತಂತ್ರಜ್ಞಾನದ ಪರ ವಿರೋಧವನ್ನು - ಕ್ರಮವಾಗಿ ಡಾಟ್‌ಕಾಮ್‌ಗೈ ಮತ್ತು ನಾಟ್‌ಕಾಮ್‌ಗೈ ಪ್ರತಿನಿಸುತ್ತಾರೆ. ಗೈ ಎಂದರೆ ಭೂತ. ವೈ ಎನ್.ಕೆ ಸೃಷ್ಟಿಸಿದ ಫಾ. ಇಂಟರ್‌ನೆಟ್ ಇದ್ದರೆ ಸಾಕು. ಬೇರೆ ಯಾವುದೇ ಸಂಪರ್ಕ ಸಾಧನಗಳಿಲ್ಲದೆ ತಾನು ಬದುಕಲು ಬೇಕಿದ್ದ ಎಲ್ಲವನ್ನು ಬದಲಿಸಿಕೊಂಡು ಜೀವಿಸಬಲ್ಲೆ ಎನ್ನುವುದನ್ನು ಪ್ರತಿಪಾದಿಸಲು ಹೊರಟ ಅಮೆರಿಕದ ಮಿಚ್ ಮ್ಯಾತಾಕ್ಸ್ ಡಾಟ್ ಕಾಮ್ ಗೈ ಯಾದರೆ, ಅದಕ್ಕೆ ಮುಖಾಮುಖಿಯಾಗಿ ಕಂಪ್ಯೂಟರನ್ನು ತ್ಯಜಿಸಿ ಇತರ ಸಾಮಾನ್ಯ ಸಂಪರ್ಕ ವಿಧಾನಗಳನ್ನು ಬಳಸಿ ಬದುಕಲು ನಿರ್ಧರಿಸಿದ ನಾಟ್‌ಕಾಮ್ ಗೈ - ಷಿಕಾಗೋ ಟ್ರಿಬ್ಯೂನ್ ಪತ್ರಿಕೆಯ ಅಂಕಣಕಾರ ಎರಿಕ್‌ಯಾರ್ನ್ ಮತ್ತೊಂದು ಕಡೆ. ಈ - ಸಂಘರ್ಷದಲ್ಲಿ ತಾತ್ಕಾಲಿಕವಾಗಿ ಡಾಟ್‌ಕಾಮ್ ಗೈ ಯ ಕೈ ಮೇಲಾದರೆ, ಅಂತಿಮವಾಗಿ ನಾಟ್‌ಕಾಮ್ ಗೈ ಗೇ ಗೆಲವು ಎನ್ನುವುದು ಸುಚ್ಯವಾಗಿದೆ.

ಔದ್ಯಮಿಕ ನಾಗರೀಕತೆಯು ರಭಸದಿಂದ ಮುನ್ನುಗ್ಗುತ್ತಿರುವ ಈ ದಿನಗಳಲ್ಲಿ ಯಾವುದೇ ವ್ಯವಸ್ಥೆಯು ಅತಿಯಾಗುತ್ತಾ ಹೋದರೆ ವಾಕರಿಕೆ ತರಿಸುತ್ತದೆ ಎನ್ನುವುದು ವಾಸ್ತವದ ಸಂಗತಿ. ಮಾಹಿತಿ ತಂತ್ರಜ್ಞಾನದ ಮಹಾಪೂರ ಮತ್ತು ತಂತ್ರಜ್ಞಾನದ ಅತಿ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಲೇಖಕರ ಮಾರ್ಮಿಕವಾದ ಮಾತುಗಳನ್ನಿಲ್ಲಿ ಅಗತ್ಯವಾಗಿ ಗಮನಿಸಬೇಕು.

'ನಿಧಾನಕ್ಕೆ ಹನಿಹನಿಯಾಗಿ ಸುರಿಯುವ ಸೋನೆಮಳೆ ನೆಲದಾಳಕ್ಕೆ ಚೆನ್ನಾಗಿ ಇಂಗುತ್ತದೆ. ಭೋರೆಂದು ಹರಿದು ಬರುವ ಪ್ರವಾಹ, ನೆಲದೊಳಕ್ಕೆ ಇಂಗುವ ಬದಲಾಗಿ ನೆಲವನ್ನು ಕೊಚ್ಚಿಕೊಂಡು ಹೋಗುತ್ತದೆ. ಮಾಹಿತಿಯ ವೇಗಕ್ಕೂ ಜ್ಞಾನಕ್ಕೂ ವಿಲೋಮ ಸಂಬಂಧ ಇದ್ದೀತೆ ? ಜ್ಞಾನ ಎಂಬುದು ಒಂದು ಸಮಾಜದಲ್ಲಿ ಅಂತರ್ಗತವಾಗಿ, ಸಾಂಸ್ಕೃತಿಕ ಪ್ರಜ್ಞೆಯಾಗಿ ತಲೆತಲಾಂತರದ ವಿವೇಕವಾಗಿ ಬದಲಾಗಬೇಕಾದರೆ ಮಾಹಿತಿ ಭೋರಾಗಿ ಹರಿದು ಬರುವುದಕ್ಕಿಂತ ಹಿತಮಿತವಾಗಿ ಹರಿದು ಬಂದರೆ ಉತ್ತಮವಲ್ಲವೇ ? ಇದು ಸರ್ವ ಕಾಲಕ್ಕೂ ಅನ್ವಯವಾಗುವ ಮಾತು.

ಮಾನವನ ಆಳ್ವಿಕೆಯ ಪರಿಸಮಾಪ್ತಿ ಲೇಖನ ಜನಸಂಖ್ಯಾ ಸ್ಫೋಟದ ಬಗ್ಗೆ ಕುತೂಹಲಕರ ಮಾಹಿತಿಯನ್ನು ಒಳಗೊಂಡಿದೆ. ನಾವು ತಿಳಿದುಕೊಂಡಿರುವಂತೆ ವಿಶ್ವದ ಜನಸಂಖ್ಯೆ ಗಣನೀಯವಾಗಿ ಏರುತ್ತಿಲ್ಲ ಎನ್ನುವ ವಿವರಗಳು ಇವೆ. ಲೇಖನಗಳ ಕೊನೆಯಲ್ಲಿ ವಿಶ್ವದ ಆದಿ ಮತ್ತು ಅಂತ್ಯಗಳ ಬಗೆಗಿನ ಸಂಕ್ಷಿಪ್ತ ಮತ್ತು ವಿಚಾರ ಪೂರ್ಣ ಮಾಹಿತಿ ಸಂಗ್ರಹ ಯೋಗ್ಯ ಹಾಗೂ ಪ್ರತಿಯೊಂದು ಲೇಖನಗಳ ಅಡಿಯಲ್ಲಿ ಜಗತ್ತಿನ ವಿದ್ಯಮಾನಗಳ ಕುತೂಹಲಕರ ಟಿಪ್ಪಣಿಗಳು ಮಾಹಿತಿಪೂರ್ಣವಾಗಿದೆ.

ಈ ಲೇಖನಗಳನ್ನು ಓದಿಮುಗಿಸುವಾಗ ಮಾಹಿತಿ ತಂತ್ರಜ್ಞಾನದ ರಭಸಕ್ಕೆ ಸಿಲುಕುವ ಭಾವುಕ ಮನಸ್ಸಿಗೆ -ಎಲ್ಲವನ್ನೂ ಮುಟ್ಟಿ, ಅನುಭವಿಸಿ ಸಾಕ್ಷಾತ್ಕಾರಗೊಳ್ಳಬೇಕೆಂಬ ಭಾವುಕ ಜೀವಿಗೆ ಭ್ರಮೆ ಆವರಿಸಿಕೊಳ್ಳುತ್ತದೆ.ಕೆಲವು ಕ್ಷಣಗಳು ಕಣ್ಣೀಗೆ ಪೊರೆಕಟ್ಟಿಕೊಂಡಂತೆ ಭಾಸವಾಸುತ್ತದೆ. ಅಷ್ಟರಮಟ್ಟಿಗೆ ಲೇಖನ ನಮ್ಮನ್ನು ಪ್ರಭಾವಿಸುತ್ತದೆ. ■ ಎಂ.ಆರ್. ಭಗವತಿ.

ಈ ಸಂಚಯದ ಲೇಖಕರು

ಜಿ.ಕೆ. ರವೀಂದ್ರಕುಮಾರ : ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಯಾದವಗಿರಿ, ಮೈಸೂರು.

ಸಿ. ನಾಗಣ್ಣ : 3195, 21ನೇ 'ಸಿ' ಮೇನ್, ವಿಜಯನಗರ 2ನೇ ಹಂತ, ಮೈಸೂರು -570017.

ಸುರೇಶ್ ನಾಗಲ ಮಡಿಕೆ : ಅಂತಿಮ ಎಂ.ಎ. ಶೇಷಾದ್ರಿಪುರಂ ಸ್ನಾತಕೋತ್ತರ ಕೇಂದ್ರ, ಬೆಂಗಳೂರು - 560 020.

ಬಂದಗದ್ದೆ ರಾಧಾಕೃಷ್ಣ : ಕೆಳದಿ ಅಂಚೆ, ಬಂದಗದ್ದೆ, ಸಾಗರ - 577401

ರಾಜಶೇಖರ ಆರ್. ಬಿಲ್ವಪತ್ರಿ : ಕೆನ್ ಕಲಾಶಾಲೆ, ಶೇಷಾದ್ರಿಪುರಂ, ಬೆಂಗಳೂರು-20.


ಜಿ.ಪಿ. ಕುಸುಮ : BOB Quarters, Bldg No. 1, H.No.60, 3rd floor, National High School Road, Mumbai - 400 078.

ಹರೀಶ್ ಕೇರ : ಅಂಚೆ - ನೆಲ್ಲೂರು ಕೆಮ್ರಾಜೆ ತಾ. ಸುಳ್ಯ. ದ.ಕ. 574 24

ಗೀತಾ ಡಿ.ಸಿ. : ನ್ಯಾಷನಲ್ ಪ್ರ.ದ. ಕಾಲೇಜು, ಭೂಪಸಂದ್ರ, ಹೆಬ್ಬಾಳ ಅಂಚೆ, ಬೆಂಗಳೂರು-94

ರಾಜಲಕ್ಷ್ಮಿ ರಾವ್ : IndiaInfo.com, ಶುಭಶ್ರೀ ಕಾಂಪ್ಲೆಕ್ಸ್, ರೂಪೇನ ಅಗ್ರಹಾರ, ಹೊಸೂರು ರಸ್ತೆ, ಬೆಂಗಳೂರು.

ಹರೀಶ್ ಜಿ.ಬಿ. : ನಂ. 45, ದಾಕ್ಷಾಯಿಣಿ, 3ನೇ ಮೇನ್, 2ನೇ ಕ್ರಾಸ್, ಶ್ರೀನಿವಾಸನಗರ, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು - 560 050.



PRB DEC L 309 / 94-95

ಸಂಚಯ ವಿಶೇಷ ಸಂಚಿಕೆಗಳು

ಗಾಂಧಿ : ಒಂದು ಮರು ಚಿಂತನೆ	-	ಸೆಪ್ಟೆಂಬರ್ 1990
ಮಹಿಳಾ ವಿಶೇಷ ಸಂಚಿಕೆ	-	ಮಾರ್ಚ್-ಏಪ್ರಿಲ್ 1993
ಎ.ಕೆ. ರಾಮಾನುಜನ್ ಹೆಜ್ಜೆಗುರುತು	-	ಡಿಸೆಂಬರ್ 1993
ಕನ್ನಡದ ಸಣ್ಣ ಕತೆಗಳು ವಿಶೇಷ ಸಂಚಿಕೆ	-	ಅಕ್ಟೋಬರ್ 1994
ಗ್ರಾಫಿಕ್ ವಿಶೇಷ ಸಂಚಿಕೆ	-	ಮಾರ್ಚ್-ಏಪ್ರಿಲ್ 1995
ಸು.ರಂ. ಎಕ್ಕುಂಡಿ ಸ್ಮರಣೆ	-	ಅಕ್ಟೋಬರ್-ನವೆಂಬರ್ 1995
ಚಲನಚಿತ್ರ ವಿಶೇಷಾಂಕ	-	ಜನವರಿ - 1997
ಚೌಕಟ್ಟು- ಸಮಕಾಲೀನ ದೃಶ್ಯ ಕಲೆ ಕುರಿತು	-	ಏಪ್ರಿಲ್-ಮೇ 1997
ರಾಮಣ್ಣನ ನೆನಪು	-	ನವೆಂಬರ್ 1998
ಎ.ಎನ್. ಮೂರ್ತಿರಾವ್ ವಿಶೇಷ ಸಂಚಿಕೆ	-	ಜುಲೈ 1999
ಶಾಂತಿನಾಥ ದೇಸಾಯಿ ನೆನಪಿನ ಸಂಚಿಕೆ	-	ಡಿಸೆಂಬರ್ 2001
ಮಾಹಿತಿ ತಂತ್ರಜ್ಞಾನ ಮತ್ತು ಕನ್ನಡ ಸಂಸ್ಕೃತಿ	-	ಸೆಪ್ಟೆಂಬರ್ 2001
ಪೂರ್ಣಚಂದ್ರ ತೇಜಸ್ವಿ ವಿಶೇಷ ಸಂಚಿಕೆ	-	ಜೂನ್ 2002

SANCHAYA
Edited, Printed & Published
by D.V. Prahlad
100, II Main, VIth Block
IIIrd Stage IIIrd phase
Banashankari
Bangalore - 560 085